ಅಧ್ಯಕ್ಷರು : ಅವಿಶ್ವಾಸ ನಿರ್ಣಯಕ್ಕಿಂತ ಮುಖ್ಯವಾದದ್ದೇ ನೀವು ಹೇಳುತ್ತಿರುವುದು?

ಶ್ರೀ ಎಚ್.ಎಸ್. ಕೌಜಲಗಿ : ಹೌದು ಸರ್. ಫ್ಯಾಕ್ಟರಿಗಳು ಬಂದ್ ಆಗಿವೆ...

ಶ್ರೀ ಆರ್.ವಿ. ದೇಶಪಾಂಡೆ : ಹಬ್ಬ ಬಂದಿದೆ, ಮನೆಯಲ್ಲಿ ಎಣ್ಣೆ ಇಲ್ಲ....

ಶ್ರೀ ಎಸ್.ಎಚ್. ಕೌಜಲಗಿ : ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ....

(ಗೊಂದಲ)

MR. SPEAKER : I think priorities ಬಗ್ಗೆ you have a right perspective (referring to Sri Deshpande)

ಶ್ರೀ ಎಸ್.ಎಚ್. ಕೌಜಲಗಿ : ಎಣ್ಣೆ ಬಗ್ಗೆ ಸರ್ಕಾರ ಯಾವಾಗಲೂ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಡಿಸ್ಟ್ರಿಬ್ಯೂಷನ್ ಬಗ್ಗೆ ಒಂದು ವ್ಯವಸ್ಥೆ ಬೇಕು.

(ಗೊಂದಲ)

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯ, ವಿರೋಧ ಪಕ್ಷದ ನಾಯಕರು.

ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಅಧ್ಯಕ್ಷರ ಆದೇಶದ ಮೇರೆಗ ತೆಗೆದುಹಾಕಲಾಗಿದೆ.

*10.45 ಎ.ಎಂ.*

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ವಿನಂತಿ ವಿಚಿತ್ರವಾಗಿ ಕಾಣಬಹುದು.

ಅಧ್ಯಕ್ಷರು : ಈಗಾಗಲೇ ಒಂದು ಎದುರಿಸಿದೆ.

ಪ್ರೊ. ಎಂ.ಡಿ ನಂಜುಂಡಸ್ವಾಮಿ : ಆ ವಿಚಿತ್ರದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಈಗ ನಡೆಯಿತಲ್ಲ, ತಿರುವಳ್ಳವರ್ ಬಗ್ಗೆ ಅದು ಏನೇನು ನಡೆಯಿತು ಅದನ್ನು ದಯವಿಟ್ಟು ಕಡತದಿಂದ ಆಚೆ ತೆಗೆಸಿ, ಇಲ್ಲದಿದ್ದರೆ ನಾವು ತಿರುವಳ್ಳುವರ್‌ಗೆ ಅವಮಾನ ಮಾಡಿದ ಹಾಗೆ ಆಗುತ್ತದೆ.

MR.SPEAKER : I entirely agree with Prof. Nanjunda Swamy's submission and I am very happy that you have made that submission. ಅದೆಲ್ಲಾ That does not become part of the proceedings of this House.

ಈಗ ಅವಿಶ್ವಾಸ ಗೊತ್ತುವಳಿ. ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಎಸ್. ಬಂಗಾರಪ್ಪನವರ ನೇತೃತ್ವದ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಮತ್ತು ಚರ್ಚೆ.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನಾನು ಶ್ರೀಮಾನ್ ಬಂಘಾರಪ್ಪನವರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದೆ. ತಾವು ಕೂಡ ಅನುಮತಿಯನ್ನು ಕರುಣಿಸಿದ್ದೀರಿ. ಅದಕ್ಕಾಗಿ ಮೊದಲು ನಾನು ತಮಗೆ ನನ್ನ ವಂದನೆಯನ್ನು ಸಮರ್ಪಣೆ ಮಾಡುತ್ತಾ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಈ ಸರಕಾರದ ಮೇಲೆ ನಾವು ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದೇವೆ. ಅವಿಶ್ವಾಸ ನಿರ್ಣಯ ಪಾಸಾಗಿ ಹೋಗಿಬಿಡುತ್ತದೆ, ಈ ಸರಕಾರ ನಾಡಿದ್ದು ಹೋಗಿಬಿಡುತ್ತದೆ ಎಂಬ ಭಾವನೆ ನಮಗೆ ಇಲ್ಲ, ಕೆಲವು ವಿಚಾರಗಳನ್ನು ಈ ಸದನದ ನಿಯಮಗಳ ಒಳಗಡೆ

ಪ್ರಸ್ತಾಪ ಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಅಭಿಪ್ರಾಯಗಳನ್ನು, ಮುಖ್ಯವಾಗಿ ಜನತೆಯ ಅಭಿಪ್ರಾಯಗಳನ್ನು ಪ್ರತಿಬಿಂಬಿಸಬೇಕೆಂಬ ದೃಷ್ಟಿಯಿಂದ ಅವರ ನೇತೃತ್ವದಲ್ಲಿರುವ ಮಂತ್ರಿ ಮಂಡಲದ ಮೇಲೆಯೇ ನಾವು ಅವಿಶ್ವಾಸ ನಿರ್ಣಯವನ್ನು ತಂದಿರತಕ್ಕಂಥಾದ್ದು. ಕೊನೆಯ ಪಕ್ಷ ಅವರು ತಮ್ಮ ಪರವಾನಗಿಯನ್ನು ಪಡೆದಿದ್ದಾರೋ ಏನೋ ಗೊತ್ತಿಲ್ಲ. ಇಂತಹ ಗಹನವಾದ ವಿಚಾರ ಪ್ರಸ್ತಾಪವಾಗುವಾಗ ಇದ್ದು ಉತ್ತರ ಕೊಡತಕ್ಕಂಥವರೂ ಅವರೇ. ತಮ್ಮ ಪರವಾನಗಿ ಏನಾದರೂ ಪಡೆದಿದ್ದಾರೆಯೇ ಎಂಬುದನ್ನು ತಾವು ನಮಗೆ ತಿಳಿಸಬೇಕು. ಅನೇಕ ಜನ ಮಂತ್ರಿಗಳು ಈಗ ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಂಡಿಯಾ ದೇಶ ಅಷ್ಟೇ ಅಲ್ಲ, ಹೊರಗಡೆ ದೇಶಕ್ಕೂ ಹೊರಟು ಹೋಗಿದ್ದಾರೆ ಎಂಬುದು ನನಗೆ ಬಂದಿರತಕ್ಕಂಥ ವಿಚಾರ. ಕೆಲವು ಮಂತ್ರಿಗಳ ಗೈರು ಹಾಜರಿ ಗೊತ್ತಾಗಿಲ್ಲ. ಈ ದೇಶದಲ್ಲಿದ್ದಾರೋ, ವಿದೇಶದಲ್ಲಿದ್ದಾರೋ ಅದೂ ಸಹಿತ ನಮಗೆ ಸರಿಯಾಗಿ ಗೊತ್ತಿಲ್ಲ. ತಮ್ಮ ಗಮನಕ್ಕೇನಾದರೂ ತಂದಿದ್ದಾರೋ ಅದೂ ನನಗೆ ಗೊತ್ತಿಲ್ಲ. ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಅದು ಕನಿಷ್ಟ ಪಕ್ಷ ಸದನದ ಗಮನಕ್ಕೆ ಬಂದ ಹಾಗೆ ಆಗಲಿಲ್ಲ. ಆದುದರಿಂದ ದಯವಿಟ್ಟು ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಎಲ್ಲೋ ಹೋಗಿದ್ದಾರೆ, ಕೊಶ್ಚನ್ ಅವರ್ ಆದ ಮೇಲೆ ಬರುತ್ತೇನೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬರಲೇಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ರಾಜ್ಯದ ಜನ ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡುತ್ತಿದ್ದಾರೆ, ಅದು ಏನಾಗುತ್ತದೆ, ಏನು ಚರ್ಚೆ ಆಗುತ್ತದೆ ಎಂದು ಇಡೀ ರಾಜ್ಯದ ಜನ ನೋಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ನಾನು ಸದನಕ್ಕೆ ಬಂದಾಗ ಭೇಟಿಮಾಡಿ ನನ್ನ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳಬೇಕು, ಬಹಳ ಜರೂರು ಕೆಲಸ ಇದೆ, ಮತ್ತೆ ಅವಿಶ್ವಾಸ ಗೊತ್ತುವಳಿ ಬರತಕ್ಕಂಥ ಸಮಯಕ್ಕೆ ಸರಿಯಾಗಿ ಬರುತ್ತೇನೆ ಎಂದು ನನಗೆ ಹೇಳಿ ಹೋಗಿದ್ದಾರೆ. ಯಾವ ಕ್ಷಣದಲ್ಲಾದರೂ ಅವರು ಬರಬಹುದು. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪುವುದಾದರೆ, ತಾವು ಪ್ರಾರಂಭ ಮಾಡಬಹುದು. ಅವರೂ ಬಂದು ಸೇರುತ್ತಾರೆ. ಅದು ತಮಗೆ ಬಿಟ್ಟಿದ್ದು.

(ಗೊಂದಲ)

ಡಾ. ಜೀವರಾಜ್ ಆಳ್ವ : ಅವಿಶ್ವಾಸ ನಿರ್ಣಯ ಮಂಡನೆ ಆದಮೇಲೆ ಚರ್ಚೆ ಪ್ರಾರಂಭ ಆಗುವಾಗ ಅವರು ಇದ್ದು, ಮಧ್ಯದಲ್ಲಿ ಏನಾದರೂ ಕೆಲಸ ಬಂದಾಗ ಚರ್ಚೆ ನಡೆಯುತ್ತಾ ಇದ್ದರೂ ಸಹ ಎಲ್ಲಾದರೂ ಹೋದರೆ ಪರವಾಗಿಲ್ಲ. ಆದರೆ ಆರಂಭ ಮಾಡುವಾಗ ಆ ಖುರ್ಚಿ ಖಾಲಿ ಇದ್ದರೆ ಚೆನ್ನಾಗಿರುವುದಿಲ್ಲ ಎನ್ನುವುದು ನಮ್ಮ ಭಾವನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈ ರೀತಿ ಆದರೆ ಆ ಖುರ್ಚಿಯನ್ನು ಖಾಲಿ ಮಾಡಿದ ಹಾಗೇ ಆಗಿಬಿಡುತ್ತದೆ.

(ಗೊಂದಲ)

ಡಾ. ಜೀವರಾಜ್ ಆಳ್ವ : ಚರ್ಚೆ ಪ್ರಾರಂಭವಾಗುವಾಗಲೇ ಈ ಚೇರ್ ಖಾಲಿ ಇರುವುದು ಚೆನ್ನಾಗಿರುವುದಿಲ್ಲ ಎಂದು ನನ್ನ ಭಾವನೆ. It is symbolic. On a No-confidence motion when a Leader of the Opposition is initiating the debate...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯ ಮಂತ್ರಿಗಳಿಗೆ ಏನಾದರೂ ಕೆಲಸ ಇದ್ದರೂ ಸಹ ಅಟ್ ಲೀಸ್ಟ್ ಬಿಗಿನಿಂಗ್ ನಲ್ಲಾದರೂ ಇರಬೇಕು. ಪ್ರಾರಂಭವಾಗುವಾಗ ಚೀಫ್ ಮಿನಿಸ್ಟರ್ ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಅಲ್ಲಿಯತನಕ ಬೇರೆ ಕಲಾಪಗಳನ್ನು ಮಾಡೋಣ. ಮುಖ್ಯ ಮಂತ್ರಿಗಳು ಬಂದ ಮೇಲೆ ಇದನ್ನು ಮಾಡೋಣ, ತಾವು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಪ್ರಾರಂಭ ಮಾಡಲಿ, ನಾವು ಕೇಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೆವಿನ್ಯೂ ಮಂತ್ರಿಗಳೇ, ಅವಿಶ್ವಾಸ ಗೊತ್ತುವಳಿ ಬಹಳ ಪ್ರಾಮುಖ್ಯವಾದ ಗೊತ್ತುವಳಿ. ಅಂತಹ ಗೊತ್ತುವಳಿ ಚರ್ಚೆ ಪ್ರಾರಂಭ ಮಾಡತಕ್ಕಂಥ ಕಾಲದಲ್ಲಿ ಈ ಸಭೆಯ ಗೌರವದ ದೃಷ್ಟಿಯಿಂದ ಸಭಾನಾಯಕರು ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾದ್ದು ಅಗತ್ಯ. ಅವರು ಬಂದು ನನಗೆ ಬೆಳಿಗ್ಗೆ ಹೇಳಿ ಹೋಗಿದ್ದಾರೆ. ಆದ್ದರಿಂದ ಈ ಸದನಕ್ಕೆ ಅವರು ಅಗೌರವವನ್ನು ತೋರಿಸಿದಂತೆ ಆಗಲಿಲ್ಲ. ಆದರೂ ಕೂಡ ಈ ಗೊತ್ತುವಳಿಯ ಮಹತ್ವವನ್ನು ನಾವು ಅರ್ಥ ಮಾಡಿಕೊಂಡು ಮಾನ್ಯ ಮುಖ್ಯ ಮಂತ್ರಿಗಳು ಬರುವವರೆಗೂ ಕೂಡ ಈ ಸದನವನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕುತ್ತೇನೆ.

(ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು)

(ಸದನವು 11ಗಂಟೆ 20 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಾನು ತಮಗೆ ಅರ್ಧ ಗಂಟೆಯಲ್ಲಿ ಬಂದು ಬಿಡುತ್ತೇನೆಂದು ಹೇಳಿ ಹೋಗಿದ್ದೆ. ನಾನು ಬರುವುದಕ್ಕೆ ಸ್ವಲ್ಪ ತಡವಾಯಿತು. ನಾನು ವಿರೋಧ ಪಕ್ಷದ ನಾಯಕರಿಗೆ ವಿಷಯ ತಿಳಿಸಿದ್ದೆ. ದಯಾಮಾಡಿ ಕ್ಷಮಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ವಿಘ್ನೇಶ್ವರನ ಮದುವೆಗೆ 108 ವಿಘ್ನಗಳು ಎಂದು ಕನ್ನಡದಲ್ಲಿ ಒಂದು ಗಾದೆ ಇದೆ. ನಾನು ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಮುನ್ನಾ ಸಭಾನಾಯಕರು, ರಾಜ್ಯದ ಮುಖ್ಯ ಮಂತ್ರಿಗಳು ನನಗೆ ಎಚ್ಚರಿಕೆ ನೋಟೀಸನ್ನು ಕೊಟ್ಟರು. ಅವಿಶ್ವಾಸ ನಿರ್ಣಯದ ಜವಾಬ್ದಾರಿ, ಅದಕ್ಕೆ ಇರತಕ್ಕ ಘನತೆ, ಗೌರವ, ಪ್ರತಿಷ್ಠೆ ಮತ್ತು ಫಲಿತಾಂಶ

ಇವೆಲ್ಲವನ್ನೂ ನನ್ನ ಗಮನಕ್ಕೆ ತಂದರು. ಬಹಳ ಸಂತೋಷ ನಾನು ಅಷ್ಟೇ ಗಂಭೀರವಾಗಿ ಈ ಒಂದು ಸೂಚನೆಯನ್ನು ಮಂಡನೆ ಮಾಡುವುದಕ್ಕೆ ಮುಂಚೆ ಆಲೋಚನೆ ಮಾಡಿದ್ದೇನೆ. ಜನಾಭಿಪ್ರಾಯವನ್ನು ರೂಢಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಶಾಸನಾ ಸಭಾ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ವಿವಿಧ ಪತ್ರಿಕೆಗಳು ಮತ್ತು ಇನ್ನಿತರ ಪ್ರಚಾರ ಮಾಧ್ಯಮಗಳ ಮಧ್ಯೆ ಬಂದಿರತಕ್ಕ ಅನಿಸಿಕೆಗಳನ್ನು ಕೂಡ ಕಂಡುಕೊಂಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ಆಳುವ ಪಕ್ಷದ ಸದಸ್ಯರು ಏನು ಸಾರ್ವಜನಿಕರಾಗಿ ಅಭಿಪ್ರಾಯ ಅಭಿವ್ಯಕ್ತ ಮಾಡಿದ್ದಾರೆ, ಇದನ್ನು ಗಮನಿಸಿದ್ದೇನೆ. ನಾನು ಈ ಜವಾಬ್ದಾರಿಯನ್ನು ಈ ಸಮಯದಲ್ಲಿ ನಿರ್ವಹಣೆ ಮಾಡದೆ ಇದ್ದರೆ, ವಿರೋಧ ಪಕ್ಷದ ನಾಯಕರಾಗಿ ನಿಂತು ಮಾಡತಕ್ಕ ಜವಾಬ್ದಾರಿಯಿಂದ ನುಣುಚಿಕೊಂಡಂತೆ ಆಗುತ್ತದೆ. ಆದ್ದರಿಂದ ಆ ಜವಾಬ್ದಾರಿಯನ್ನು ನಿರ್ವಹಿಸಬೇಕು, ನನ್ನ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ ಎನ್ನತಕ್ಕ ಪರಿಪೂರ್ಣವಾಗಿ ವಿಶ್ವಾಸ ಬಂದ ಮೇಲೆಯೇ ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ನಾನು ನಿರ್ಧಾರ ಮಾಡಿದ್ದೇನೆ. ಅವಿಶ್ವಾಸ ನಿರ್ಣಯಕ್ಕೆ ಕಾರಣಗಳನ್ನು ಬಹಳ ಹುಡುಕಬೇಕಾಗಿಲ್ಲ, ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಂದಿನ ಪ್ರಜಾವಾಣಿಯ ಪತ್ರಿಕೆಯ ಮುಖಪುಟವನ್ನು ನೋಡಿದರೆ ಮೊದಲನೆಯದು ಕಾಂಗ್ರೈ ಜಗಳ....

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಸ್ವಾರಸ್ಯವಾಗಿ ಪ್ರಾರಂಭ ಮಾಡಿದ್ದಾರೆ. ಅವಿಶ್ವಾಸ ನಿರ್ಣಯವನ್ನು ಅಷ್ಟೇ ತೀಕ್ಷ್ಣವಾಗಿ, ಕಠಿಣವಾಗಿ, ಪ್ರಸ್ತಾಪ ಮಾಡುವುದು ಅನಿವಾರ್ಯ. ಈಗ ಏನಾಗಿದೆ ಅಂದರೆ ತಾವು ಒಂದು ಮಾತನ್ನು ಹೇಳಿದ್ದೀರಿ, ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಕರ್ತವ್ಯವನ್ನು ಈಗಲೂ ಮಾಡಲೇಬೇಕು. ಇದರ ಮೇಲೆ ಭಾಷಣ ಮಾಡಬೇಕೆಂದು ಪ್ರಾರಂಭ ಮಾಡಿದ್ದೀರಿ. ನಾನು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಹೇಳುವುದೇನೆಂದರೆ, ತಾವು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೀರಿ, ಅದೇ ತೀಕ್ಷ್ಣತೆಯಿಂದ, ಅದೇ ಗುರಿಯಿಂದ ತಾವು ಪ್ರಾರಂಭ ಮಾಡಬೇಕು. ಅವಿಶ್ವಾಸ ನಿರ್ಣಯಕ್ಕೆ ಏನು ಪ್ರತಿಯೊಂದು ಪಾಯಿಂಟ್ಸ್ ಹಾಕಿಕೊಟ್ಟಿದ್ದೀರಿ, ಅದರ ಮೇಲೆ ಭಾಷಣ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲದೆ ಹೋದರೆ ವಿರೋಧ ಪಕ್ಷದ ನಾಯಕರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಾದರೆ ಅದು ಸರಿಯಿಲ್ಲ ಎನ್ನುವುದು ನನ್ನ ಭಾವನೆ.

ಒಬ್ಬ ಮಾನ್ಯ ಸದಸ್ಯರು : ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ತೇಲಿಸಿ ಮಾತನಾಡುವುದು ನನ್ನ ಸ್ವಭಾವವಾಗಿದೆ. ಬುದ್ಧಿವಂತರು ತಿಳಿದುಕೊಳ್ಳುತ್ತಾರೆ.

ಅಧ್ಯಕ್ಷರು : ಅದು ಯಾವಾಗ ಬದಲಾವಣೆಯಾಯಿತು?

ಶ್ರೀ ಹೆಚ್. ಏಕಾಂತಯ್ಯ : ಬಹಳ ತೀವ್ರವಾದಂತಹ ಬದಲಾವಣೆ ಕಾಣುತ್ತಿದೆ.

ಅಧ್ಯಕ್ಷರು : ಅದು ಬದಲಾವಣೆಯೋ, ಸುಧಾರಣೆಯೋ?

ಶ್ರೀ ಆರ್.ವಿ. ದೇಶಪಾಂಡೆ : ಬದಲಾವಣೆ ಯಾವಾಗಲೂ ಆಗುತ್ತಿರುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ನಾವು ಅದನ್ನು ಸುಧಾರಣೆಯೆಂದು ಕರೆಯಲಿಕ್ಕೆ ಸಾಧ್ಯವಿಲ್ಲ, ಅದು ಬದಲಾವಣೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರಾದಂತಹ ಬಸವಲಿಂಗಪ್ಪನವರ ಮನಸ್ಸಿನಲ್ಲಿ ಅವರು ಏನು ಅಪೇಕ್ಷೆ ಪಡುತ್ತಾರೆ;

ಅಷ್ಟು ಗಂಭೀರವಾಗಿ ಎಲ್ಲಾ ದಾಖಲೆಗಳನ್ನು ಇಡದೇ ಇದ್ದರೆ ಬಹುಶಃ ಕಷ್ಟವಾಗುತ್ತದೆ. ಅದಕ್ಕೋಸ್ಕರ ಎಲ್ಲವನ್ನು ಬಹಿರಂಗ ಪಡಿಸಿಬೇಕಾದರೆ ನಮ್ಮ ಹತ್ತಿರ ಇರುವ ಕೆಲವು ದಾಖಲೆಗಳನ್ನು ಕೊಡುತ್ತೇವೆ, ಇದನ್ನು ಮುಚ್ಚಿಡಬೇಡಿ ಎನ್ನುವ ಅರ್ಥದಲ್ಲಿ ತಾವು ಹೇಳುತ್ತಿದ್ದೀರೋ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ : ನಾನು ಹೇಳಿದ್ದು ಆ ರೀತಿಯಾಗಿ ಅಲ್ಲ, ತೇಲಿಸಿ ಮಾತನಾಡುವುದು ನನ್ನ ಸ್ವಭಾವ. ಈಗ ಅದನ್ನು ಅರ್ಥಗರ್ಭಿತವಾಗಿ ಹೇಳುತ್ತೇನೆ. ತಾವು ಹೇಳಿದ್ದು ಏನೆಂದರೆ, ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಕರ್ತವ್ಯವನ್ನು ಪರಿಪಾಲನೆ ಮಾಡುತ್ತೇನೆ. ಅದನ್ನು ಮಾಡದೇ ಹೋದರೆ ವಿರೋಧ ಪಕ್ಷದ ನಾಯಕನಾಗಿ ನಾನು ಇರುವುದು ಸರಿಯಲ್ಲ ಎಂದು ಹೇಳಿದರು. ಆದ್ದರಿಂದ ನಾನು ಏನು ಪ್ರಾರ್ಥನೆ ಮಾಡುವುದು ಎಂದರೆ, ಈಗ ಏನು ಒಂದು ಅವಿಶ್ವಾಸ ನಿರ್ಣಯ ಇದೆ ಯಾವ ವಿಷಯದ ಮೇಲೆ ತಾವು ಮಾತನಾಡಬೇಕೆಂದು ಇದ್ದೀರೋ ಅದನ್ನು ನೇಗವಾಗಿ ಅದೇ ತೀಕ್ಷ್ಣತೆಯಿಂದ ಈ ಸದನದ ಮುಂದೆ ಇಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಅದನ್ನು ಹೇಳಿದ್ದು ಏಕೆಂದರೆ, ಈ ಸಮಯದಲ್ಲಿ ನಾನು ಆ ಕರ್ತವ್ಯವನ್ನು ಮಾಡದೇ ಇದ್ದರೆ ಕರ್ತವ್ಯ ಚ್ಯುತಿಯಾಗುತ್ತದೆ, ಇರತಕ್ಕಂಥ ವಸ್ತು ಸ್ಥಿತಿಯಿಂದ ಹೊರಗುಳಿಯುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದೆ. ಮಾನ್ಯ ಬಸವಲಿಂಗಪ್ಪನವರಿಗೆ ಜನತಂತ್ರದ ಬಗ್ಗೆ ವಿಶ್ವಾಸವಿಲ್ಲ. ಅದನ್ನು ಬದಲಾಯಿಸಬೇಕೆಂದು ಪ್ರಯತ್ನ ಮಾಡಿ ಅವರ ಖಾತೆಯೇ ಬದಲಾವಣೆಯಾಯಿತು. ನನಗೆ ಖಾತೆ ಬದಲಾವಣೆಯಾಗುವುದಿಲ್ಲ. ಏಕೆಂದರೆ, ನಾನು ಜನತಂತ್ರದ ಮೇಲೆ ವಿಶ್ವಾಸ ಇಟ್ಟಿರುವಂಥವನು. ಜನಾಭಿಪ್ರಾಯವನ್ನು ಇಲ್ಲಿ ಪ್ರತಿ ಧ್ವನಿ ಮಾಡಬೇಕೆಂಬುದೇ ನನ್ನ ಸದಿಚ್ಛೆ. ಆದ್ದರಿಂದ ಆ ರೀತಿ ಪ್ರಾರಂಭ ಮಾಡಿದೆ. ಒಂದು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ತರುವುದಕ್ಕೆ ಬಾರಿ ದೊಡ್ಡ ಮೂಟೆಗಳು ಬೇಕಾಗಿಲ್ಲ. ಇವತ್ತಿನ ಪ್ರಜಾವಾಣಿ ಪತ್ರಿಕೆಯ ಮುಖಪುಟವನ್ನು ನೋಡಿದರೆ ಸಾಕು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತೇನೆ. ಅದರಲ್ಲಿ ಏನು ಬರೆಯುತ್ತಾರೆ? ಏನಾಗಿದೆ ಈ ದೇಶದಲ್ಲಿ ಸರ್ಕಾರ ಇದೆಯೇ? ಸರ್ಕಾರ ಏನಾದರೂ ಇದ್ದರೆ ಇಂಥ ಪತ್ರಿಕೆಗಳ ಮೂಲಕ ಜನಾಭಿಪ್ರಾಯ ಏನು ಅಭಿವ್ಯಕ್ತವಾಗುತ್ತಿದೆ, ಸರ್ಕಾರ ಅದಕ್ಕೆ ಸ್ಪಂದನೆ ಮಾಡಿದೆಯೇ? ಇದು ಬಹಳ ಮೂಲ ಪ್ರಶ್ನೆಯಾಗುತ್ತದೆ. ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ "ಕಾಂಗ್ರೆ ಜಗಳ ಚರ್ಚೆಗೆ ವಿಫಲ ಯತ್ನ ಸಭಾತ್ಯಾಗ" ಇದು ಮೊದಲನೆಯದು. ಕಾಂಗ್ರೆ ಜಗಳ ಏನು ಎನ್ನುವುದನ್ನು ಮುಂದೆ ಹೇಳುತ್ತೇನೆ. ಎರಡನೆಯದು, "ಹೇಮಾವತಿ ನಾಲೆಯ ಸಿಬ್ಬಂದಿ ಇಡೀ ದಿನ ಬಂಧನದಲ್ಲಿ" ಯಾವುದಾದರೂ ಸರ್ಕಾರ ಇಲ್ಲಿ ಇದೆಯೇ? ತುಮಕೂರು ಜಿಲ್ಲೆಯಲ್ಲಿ ಇಡೀ ಚೀಫ್ ಇಂಜಿನಿಯರ್ ಆಫೀಸನ್ನು ಬಂಧನದಲ್ಲಿ ಇಡುವಂಥ ಸ್ಥಿತಿಗೆ ಹೋಗಿದೆ. ಮೂರನೆಯದು "ತಹಶೀಲ್ದಾರ್ ಮೇಲೆ ರೈತರ ಹಲ್ಲೆ ಅಶ್ರುವಾಯು ಪ್ರಯೋಗ, ಡಿಸಿಪಿ ವಿರುದ್ಧ ಆರೋಪದ ಪಟ್ಟಿ ಸಲ್ಲಿಕೆ" ಇವಿಷ್ಟು ಸಾಕು, ಆಡಳಿತದಲ್ಲಿ ಏನು ದೋಷವಾಗಿದೆ? "ಚೆನ್ನಪ್ಪರೆಡ್ಡಿ ವರದಿ ಜಾರಿಗೆ ...." ಇದಕ್ಕಿಂತ ಹೆಚ್ಚು ಬೇಕಾಗಿಲ್ಲ. ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಇವತ್ತಿನ ಪತ್ರಿಕೆ ಪ್ರತಿಧ್ವನಿ ಮಾಡುತ್ತದೆ. ಈ ಸರ್ಕಾರದ ಬಗ್ಗೆ ಕರ್ನಾಟಕದಲ್ಲಿರತಕ್ಕ ಜನ ಏನು ಹೇಳುತ್ತಾರೆ ಎನ್ನುವುದಕ್ಕಿಂತಲೂ ವಿದೇಶದಲ್ಲಿರುವ ಕನ್ನಡಿಗರೊಬ್ಬರು ಏನು ಹೇಳಿದ್ದಾರೆ ಎನ್ನುವುದು ಕೂಡ ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಅಧ್ಯಕ್ಷರೇ, ದುಬಾಯಿಯಲ್ಲಿರುವ ಕನ್ನಡಿಗರೊಬ್ಬರು ವಾಚಕರ ವಾಣಿಗೆ ಬರೆಯುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅದು ನಿಮಗೆ ಹೇಳುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಹೇಳುವುದಕ್ಕೆ ಮುಂಚೆ ನೀವಿಲ್ಲಿದ್ದೀರಿ, ಆಗ ಸಾಕಷ್ಟು ಹೇಳಿದ್ದೀರಿ. ಈಗ ನಿಮಗೆ ಹೇಳುವುದಕ್ಕೆ ನಾನು ನಿಂತಿದ್ದೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ I quote the performance of this Government. ಹೊರದೇಶದಲ್ಲಿರತಕ್ಕ ಕನ್ನಡಿಗರು ಏನು ಅಭಿಪ್ರಾಯ ಇಟ್ಟುಕೊಂಡಿದ್ದಾರೆ ಎನ್ನುವುದು ಪತ್ರಿಕೆಯಲ್ಲಿದೆ. ಮಾತೆತ್ತಿದರೆ ರಾಜೀವ್ ಗಾಂಧಿ, ರಾಜೀವ್ ಗಾಂಧಿ ಎಂದು ಬೊಬ್ಬೆ ಹಾಕುವ ಕಾಂಗ್ರೆಸ್ ಸರ್ಕಾರ, ರಾಜೀವ್ ಹಂತಕರನ್ನು ಜೀವಸಹಿತ ಸೆರೆಹಿಡಿಯುವುದರಲ್ಲಿ ವಿಫಲವಾಗಿದೆ. ಇದು ಸರ್ಕಾರದ ದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಯ ಅಸಮರ್ಥತೆಯನ್ನು ಬೇರೆಯವರು ಖಂಡಿಸುವ ಮೊದಲೇ ಬಂಗಾರಪ್ಪನವರು ಪೋಲೀಸ್‌ರನ್ನು ಮತ್ತು ಅವರ ಕಾರ್ಯಾಚರಣೆಯನ್ನು ಆತುರವಾಗಿ ಮತ್ತು ಅತಿಯಾಗಿ ಪ್ರಶಂಸಿಸಿ ಹಾಗೂ ಶ್ಲಾಘಿಸಿದ್ದಾರೆ. ಲಕ್ಷ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ವೀರಪ್ಪನನ್ನು ಹಿಡಿಯಲಾಗದ ಪೋಲೀಸಿನವರು ಶಿವರಾಸನ್‌ನನ್ನು ಜೀವಸಹಿತ ಹಿಡಿಯುತ್ತಾರೆ ಎಂದೂ ಯಾರೂ ನಂಬಿರಲಿಲ್ಲ. ಆದರೆ ಮುಖ್ಯವಾದ ಪ್ರಶ್ನೆ ಏನೆಂದರೆ, ಒಂದು ವಾರದಿಂದ ಶಿವರಾಸನ್ ಮತ್ತಿತರರು ರಾಜ್ಯದಲ್ಲಿ ಬೇರು ಬಿಟ್ಟಿದ್ದರೂ ಪೋಲೀಸ್ ಬೇಹುಗಾರಿಕೆ ಇಲಾಖೆಯವರಿಗೆ ಇದು ಗೊತ್ತಾಗಲಿಲ್ಲವೇ? ಇದು ಹೊರಗಡೆಯವರ ಪ್ರಶ್ನೆ.

ಆದುದರಿಂದ ನಾನು ಈ ಅವಿಶ್ವಾಸ ನಿರ್ಣಯವನ್ನು ಪ್ರಸ್ತಾಪ ಮಾಡುವಾಗ ಹೇಳಿದೆ. ಜನಾಭಿಪ್ರಾಯವನ್ನು ಸಂಗ್ರಹಣೆ ಮಾಡಿ ಆ ಅಭಿಪ್ರಾಯವನ್ನು ಪ್ರತಿಧ್ವನಿ ಮಾಡುವುದಕ್ಕೆ ನಾನು ಇಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಎನ್ನತಕ್ಕಂತಹ ಮೂಲತಃ ವಿಚಾರ ಹೇಳಿದೆ. ಮಾನ್ಯ ಅಧ್ಯಕ್ಷರೇ ಈ ಅವಿಶ್ವಾಸ ನಿರ್ಣಯ ಬರುವುದಕ್ಕೆ ಮುಂಚೆ ರಾಜ್ಯದಲ್ಲಿ ಎರಡು ಚುನಾವಣೆಗಳು ಆಗಿವೆ. ಮೊದಲನೆಯ ಚುನಾವಣೆ 24ನೇ ನವೆಂಬರ್ 1989ರಂದು ನಡೆಯಿತು ಎರಡನೆ ಚುನಾವಣೆ ಲೋಕಸಭೆಗೆ ದಿನಾಂಕ 15-6-1991 ರಂದು ನಡೆಯಿತು ಇದು ಆಧಾರವಾಗುತ್ತದೆ. ನಾನು ಏತಕ್ಕೆ ಈ ಎರಡು ಚುನಾವಣೆಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ 1989ರ ನವೆಂಬರ್ ಚುನಾವಣೆಯಲ್ಲಿ ಈ ರಾಜ್ಯದ ಜನಕ್ಕೆ ಕಾಗ್ರೆಸ್ ಸರ್ಕಾರ ಕೊಟ್ಟಂಥ ಆಶ್ವಾಸನೆಗಳು ಏನು? ನಡೆದು ಬಂದ ರೀತಿ ಏನು? 1991ರ ಜೂನ್ ತಿಂಗಳು 15ನೇ ತಾರೀಖಿನಂದು ಚುನಾವಣೆ ನಡೆದಾಗ ಕಾಂಗ್ರೆಸ್ ಸ್ಥಿತಿ ಏನಿತ್ತು? ಇವು ಜನಾಭಿಪ್ರಾಯವನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧನವಾಗುತ್ತದೆ. ನಾನು ಇದನ್ನು ವಿಸ್ತಾರವಾಗಿ ಮುಂದೆ ಹೇಳುವುದಕ್ಕೆ ಮುನ್ನ ಈ ಸರ್ಕಾರದಲ್ಲಿರತಕ್ಕಂಥ ಒಂದು constitutional crisis ಮತ್ತು ಚುನಾವಣಾ ಫಲಿತಾಂಶವಾದ ಆಡಳಿತ ಶಾಸಕಾಂಗದ ಮೇಲೆ ಹಿಡಿತ ಈ ರಾಜ್ಯದಲ್ಲಿ ಸ್ಥಾಪಿತ ಹಿತಾಸಕ್ತಿಗಳು ಏನು ಕೆಲಸ ಮಾಡುತ್ತಿವೆ? ಭ್ರಷ್ಟಾಚಾರ ಹೇಗೆ ತಾಂಡವಾಡುತ್ತಿದೆ? ಕ್ರಿಮಿನಲ್ ಮೊಕದ್ದಮೆ ಇರತಕ್ಕಂಥ ಸಚಿವರು ಮಂತ್ರಿಮಂಡಲದಲ್ಲಿದ್ದಾರೆ ಆ ಪಕ್ಷದ ಶಾಸಕರೇ ಮಂತ್ರಿಮಂಡಲದ ಮೇಲೆ ಸ್ವಲ್ಪ ಹೆಚ್ಚು ಕಡಿಮೆ ಅವಿಸ್ವಾಸ ನಿರ್ಣಯವನ್ನು ನನಗಿಂತ ಮೊದಲೇ ಮಂಡನೆ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕು. ಪ್ರಧಾನಮಂತ್ರಿಯವರಿಗೆ ಪಕ್ಷದಿಂದ ಆಘಾದನೆ ಪಟ್ಟಿ ಸಲ್ಲಿಸಿದ್ದಾರೆ.

ಶ್ರೀ ಕರಿಯಣ್ಣ: ಇವರು ಸುಳ್ಳು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸುಳ್ಳು ಅನ್ನುವ ಪದ ಇಲ್ಲಿ ಬಳಕೆಯಾಗುವುದಿಲ್ಲ ಎಂದು ಆ ಶಾಸಕರಿಗೆ ಹೇಳಬೇಕು ಬಹಳ ಹೋಸಬರು. ಮೊನ್ನೆ ಬಂದಿರುತ್ತಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಏನೇನು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೇನೆ.

ಶ್ರೀ ಕರಿಯಣ್ಣ : ನೀವು ನಮ್ಮ ಪಕ್ಷಕ್ಕೆ ಬರುವುದು ಬೇಕಾಗಿಲ್ಲ ನಮ್ಮ ಪಕ್ಷದ ಸುದ್ದಿ ನಿಮಗೆ ಏಕೆ ಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ: ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಸರ್ಕಾರ ಯಾವರೀತಿ ಪಾತ್ರ ವಹಿಸದೆ ಅಬ್ಕಾರಿ ದೊರೆಗಳ ಕೂಟಕ್ಕೆ ಹೇಗೆ ಈ ಸರ್ಕಾರ ಕೈವಶವಾಗಿದೆ? ಗೃಹ ಸಹಕಾರ ಸಂಘಗಳ ಕರ್ಮಕಾಂಡದ ಕಥೆ ಏನು? ಸಾರ್ವಜನಿಕ ಆಸ್ತಿ ಎಷ್ಟು ಖಾಸಗೀಯವರ ಪಾಲಾಗಿದೆ? ಕನಿಷ್ಟ ಪಕ್ಷ ನಮ್ಮ ರಾಜ್ಯದಲ್ಲಿ ಯಾವುದನ್ನು ನಾವು ಕಲ್ಚರಲ್ ಆಕ್ಟಿವಿಟೀಸ್ ಎಂದು ಕರೆಯುತ್ತೇವೆ ಈ ದೇಶದ ಸಾಂಸ್ಕೃತಿಕ ಚಟುವಟಿಕೆಗಳು ಅಕಾಡೆಮಿಗಳನ್ನು ರಚನೆ ಮಾಡದೆ ಹೇಗೆ ಸ್ಥಗಿತವಾಗಿವೆ? 1990 ರಲ್ಲಿ ನಡೆದಂಥ ಮತೀಯ ಗಲಭೇಗಳಿಗೆ ಕಾರಣವೇನು? ಲೋಕಾಯುಕ್ತ ತಾನೇ ಧಾಳಿ ನಡೆಸಿ ಎಷ್ಟು ಜನರಿಗೆ 'ಬಿ' ಸರ್ಟಿಫಿಕೇಟ್ ಕೊಡುವುದರಲ್ಲಿ ಯಶಸ್ವಿಯಾಗಿದೆ. ನೆನೆಗುದಿಗೆ ಬಿದ್ದಿರತಕ್ಕಂಥ ನಿಮ್ಮ ಸರ್ಕಾರ ಇಲ್ಲಿ ಪ್ರಸಿದ್ಧಿ ಪಡಿಸಿದಂಥ ಅನೇಕ ಯೋಜನೆಗಳು ಹೀಗೆ ಹಲವು ಹತ್ತು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲತಕ್ಕಂಥ ಪ್ರಯತ್ನವನ್ನು ನಾನು ಈ ಒಂದು ಅವಿಶ್ವಾಸ ನಿರ್ಣಯದ ಮಂಡನೆ ಮೂಲಕ ಮಾಡುತ್ತಿದ್ದೇನೆ. ಇವರಿಗೆ ಹೇಳಿದರೆ ತಿಳಿಯುತ್ತದೋ ಇಲ್ಲವೋ ಗೊತ್ತಿಲ್ಲ ರಾಜ್ಯದ ಜನಕ್ಕೆ ನಾನು ಹೇಳುವುದಕ್ಕೆ ಪ್ರಯತ್ನ ಪಡುತೇನೆ.

ಶ್ರೀ ಕರಿಯಣ್ಣ : ಇದರ ಬಗ್ಗೆ ಹೊರಗಡೆ ಭಾಷಣ ಮಾಡಬುಹುದಾಗಿತ್ತು ಜನಕ್ಕೆ ಹೇಳುವುದಾದರೆ ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳಬಹುದಾಗಿತ್ತು. ಶಾಸನ ಸಭೆಯಲ್ಲಿ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ: ಕುಂಬಳಕಾಯಿ ಕಳ್ಳ ಅಂದರೆ ನೀವ್ಯಾಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ.

ಶ್ರೀ ಕರಿಯಣ್ಣ: ನೀವೇ ತಾನೆ ಮುಟ್ಟಿಹೋಡಿಕೊಳ್ಳುತ್ತೀರುವುದು.

SRI H. EKANTHAIAH: Sir I am on a point of order.

ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಅವರದಾದರೂ ಆಗಲಿ ಇಲ್ಲವೇ ನಮ್ಮದಾದರೂ ಆಗಲಿ ಮುಖ್ಯವಾಗಿ ಈ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುತ್ತಿರುವಾಗ ಪ್ರತಿಯೊಂದು ಹಂತದಲ್ಲೂ ಅಡ್ಡಿ ಮಾಡುವುದಾದರೆ ಈ ಒಂದು ಗೊತ್ತುವಳಿ ಮೇಲೆ ಚರ್ಚೆ ಮುಂದುವರಿಸಬೇಕೆ ಅಥವಾ ಬೇಡವೆ ಎಂಬ ಬಗ್ಗೆ ತಾವು ಆದೇಶವನ್ನು ಕೊಡಬೇಕು. ಈ ರೀತಿ ಪ್ರತಿಯೊಂದು ಸಂದರ್ಭದಲ್ಲೂ ಸಹ ಅವರು ಮಾತನಾಡುವುದನ್ನು ಅಡ್ಡಿ ಮಾಡುವುದಾದ ಅಥವಾ ಬೆದರಿಕೆಯನ್ನು ಉಂಟು ಮಾಡತಕ್ಕ ಉದ್ದೇಶವಿದ್ದರೆ ಅದರ ಬಗ್ಗೆ ತಾವು ನಮಗೆ ಇಲ್ಲಿ ರಕ್ಷಣೆ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ಇವರಿಗೆ ಅರ್ಥವಾಗುತ್ತದೆಯೊ ಅಥವಾ ಇಲ್ಲವೋ ಎಂದು ಪ್ರಚೋದನೆ ಮಾಡುವರು.

(ಗೊಂದಲ)

ಅಧ್ಯಕ್ಷರು: ಆ ಪ್ರಚೋದನೆ ಇಲ್ಲದಿದ್ದರೆ ಅವರು ಚಂದ್ರೇಗೌಡರ ತಂಟೆಗೆ ಬರುತ್ತಿರಲಿಲ್ಲ.

(ಗೊಂದಲ)

SRI R.V. DESHPANDE: We will be critical about theeGovernment.

(ಗೊಂದಲ)

ಅಧ್ಯಕ್ಷರು: ಏಕಾಂತಯ್ಯನವರೆ, ಕೇಳಿ ನೀವು ಸರ್ಕಾರವನ್ನು ಛೇಡಿಸಿ. ಪೀಡಿಸಿ ಆದರೆ ಮಾನ್ಯ ಸದಸ್ಯರಿಗೆ ಅರ್ಥವಾಗುವುದಿಲ್ಲವೆಂದರೆ ಏನು ಅರ್ಥ. You have every right to take the Government to task, but not the Hon'ble memberl. ನಿಮಗೆ ಇದು ಅನ್ವಯಿಸಿದರೂ ಕೂಡ I would have taken objection to that. You are also a Hon'ble member of this House.

SRI H.EKANTHAIAH: I am on a point of order ಅಧ್ಯಕ್ಷರೆ ಇದು ಸರ್ಕಾರನ್ನು ಉದ್ದೇಶಿಸಿ ಹೇಳಿದ ಮಾತು, ಇಲ್ಲಿಯ ಸದಸ್ಯರಿಗೆ ಎನ್ನುವ ಮಾತು ಬರಲಿಲ್ಲ.

MR SPEAKER : Then I stand corrected.

ಶ್ರೀ ಹೆಚ್. ಏಕಾಂತಯ್ಯ: ಇದು ಸರ್ಕಾರವನ್ನು ಕುರಿತು ಹೇಳಿದಂಥಹ ಮಾತೇ ಹೊರತು ಈ ಪಕ್ಷದ ಸದಸ್ಯರಿಗೆ ಹೇಳಿದ್ದಲ್ಲ.

ಶ್ರೀ ಆರ್. ದಯನಂದರಾವ್: ಅಧ್ಯಕ್ಷರೆ, ಅದರಲ್ಲಿ ತಾವು ಸೇರುತ್ತೀರಿ, ತಮಗೂ ಅರ್ಥವಾಗುವುದಿಲ್ಲವೆಂಬ ರೀತಿಯಲ್ಲಿ ಹೇಳಿದ್ದಾರೆ ಇದು ತಮಗೂ ಹೇಳಿದಹಾಗೆ ಆಯಿತು.

ಅಧ್ಯಕ್ಷರು: ಬೇಸಿಕಲಿ ನನಗೆ ಹೇಳಿದ್ದೆ ಏಕೆಂದರೆ ಅವರು ನನ್ನನ್ನೇ ಉದ್ದೇಶಿಸಿ ಭಾಷಣ ಮಾಡಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಆ ಅರ್ಥದಲ್ಲಿ ಹೇಳಿದ್ದರೆ ಅದಕ್ಕೆ ನಿವ್ಯಾರು ಪ್ರಚೋದಿತರಾಗಬೇಕಾಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಇದು ಸರ್ವಾಭೌಮವಾಗಿರತಕ್ಕ ಒಂದು ಸಭೆ, ಇದರಲ್ಲಿ ಇವರಿಗೆ ಗೊತ್ತಾಗುತ್ತೋ ಇಲ್ಲವೋ ಎಂದು ಏನು ಅವರು ಮೊದಲು ಪ್ರಾರಂಭ ಮಾಡಿದರೋ ಅದು ಸರಿಯಲ್ಲ. ಸಾರ್ವಭೌಮತ್ವಕ್ಕೆ ತಾವು ವಿರೋಧವಾಗಿ ಮಾತನಾಡಿದಂತಾಗುತ್ತದೆ. ನಮ್ಮ ಕಾಂಗ್ರೆಸ್ ಪಕ್ಷದ ಬಗ್ಗೆ ಟೀಕೆ ಮಾಡುವುದಾದರೆ ಮಾಡಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಈ ಸಭೆಗೆ ತಿಳಿಯುತ್ತದೋ ಇಲ್ಲವೋ ಎಂದರೆ ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಏನೇನು ಹೇಳಬೇಕು ಏನೇನು ಹೇಳಬಾರದು ಎನ್ನುವುದು ನನಗೂ ಗೊತ್ತು ನೀವು ಸರ್ಕಾರದಲ್ಲಿ ಪಾಲುದಾರರಾದ್ದರಿಂದ ನಿಮಗೆ ತಿಳಿಯುವುದಿಲ್ಲವೆಂದು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೆ ವಿಧಾನ ಸಭೆಯ ಚುನಾವಣೆ ಯಾದಮೇಲೆ ಈ ರಾಜ್ಯ ಎರಡು ಜನ ಮುಖ್ಯಮಂತ್ರಿಗಳನ್ನು ಕಂಡಿದೆ ಹಲವಾರು ಹತ್ತಾರು ಜನ ಮಂತ್ರಿಗಳನ್ನು ನೋಡಿದ್ದೇವೆ. ಮಂತ್ರಿಮಂಡಲದ ಬದಲಾವಣೆ ಆದಹಾಗೆ ಕಾರ್ಯದರ್ಶಿಗಳ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ನೋಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಅಂದರೆ 27-7-91ಕ್ಕೆ ಮಂತ್ರಿಮಂಡಲ ವಿಸ್ತಾರಣೆಯಾಯಿತು. ಯಾರೋ ಪತ್ರಿಕೆಯಲ್ಲಿ ಆಷಾಡಮಾಸದ 13 ಜನ ಮಂತ್ರಿಗಳನ್ನು ಮಾಡಿಕೊಂಡಿದ್ದಾರೆ. ಒಟ್ಟು ಸಂಖ್ಯೆ 33ರಾಯಿತು ಎಂದು ಬರೆದಿದ್ದರು. ಅದು ನಿಜವಿರಬಹುದು ಅಥವಾ ಈ ಸಂಖ್ಯೆಗಳ ಮೇಲೆ ಅಂಕಣ ಮತ್ತು ಅಂಕ ಬರೆಯತಕ್ಕವರಿಗೆ ಅವರ ವ್ಯಾಖ್ಯಾನಕ್ಕೆ ಬಿಡುತ್ತೇನೆ. ಇಲ್ಲಿ ಮಂತ್ರಿಮಂಡಲದ ಬದಲಾವಣೆ ರಾಜ್ಯದ ಹಿತದೃಷ್ಟಿಯಿಂದ ಆಗಿದೆಯೇ

ಎನ್ನುವುದಷ್ಟೆ, ನನ್ನ ಸಿಮಿತವಾದ ಪ್ರಶ್ನೆ. ಮಾನ್ಯ ಅಧ್ಯಕ್ಷರೇ ಇಪ್ಪತ್ತು ತಿಂಗಳ ಆಡಳಿತದಲ್ಲಿ ಅದರಲ್ಲೂ ಶ್ರೀ ಮಾನ್ಯ ಬಂಗಾರಪ್ಪನವರ 315,316 ನೇ ದಿವಸ ಆಳ್ವಿಕೆಯಲ್ಲಿ ಆಗಿರತಕ್ಕಂಥ ಬದಲಾವಣೆ ಅದರ ಪರಿಣಾಮವನ್ನು ಮುಖ್ಯವಾಗಿ ತಾವು ಗಮನಿಸಬೇಕೆಂದು ಮನವಿ ಮಾಡುತ್ತೇನೆ. ಇದರಲ್ಲಿ ಮುಖ್ಯವಾದಂಥ ಇಲಾಖೆಗಳು ಇವೆ. ಎನರ್ಜಿ ಇದು ಮೊದಲು ಮುಖ್ಯಮಂತ್ರಿಗಳ ಕೈಯಲ್ಲಿ ಇತ್ತು. ನಂತರ ಮತ್ತೆ ಮುಖ್ಯ ಮಂತ್ರಿಗಳ ಕೈಯಲ್ಲಿದೆ. ಶ್ರೀ ವೀರೇಂದ್ರಪಾಟೀಲರು ಶ್ರೀಮಾನ್ ಬಂಗಾರಪ್ಪನವರು ಆದ ಮೇಲೆ ಈಗ ರಾಮಪ್ಪನವರ ಬಂದಿದೆ. ನಾನು ಮೊನ್ನೆ ಪವರ್ ಮಿನಿಸ್ಟರ್ಗೆ ಕೇಳಿದೆ. ಅವರ ಕ್ಷೇತ್ರಕ್ಕೆ ಹೋದಾಗ ಫ್ಲಡ್‌ಲೈಟ್ ಪ್ರೊಸೆಷನ್ ಆಯಿತು. ಪವರ್ ಅಂದರೆ ಫ್ಲಡ್‌ಲೈಟ್ ಪ್ರೊಸೆಷನ್ ಈ ಪ್ರೊಸೆಷನ್‌ಗೆ ಬೇಕಾಗಿರತಕ್ಕಂಥ ವ್ಯವಸ್ಥೆ ಮಾಡುವುದರಲ್ಲಿ ಯಾರೋ ಸಣ್ಣಪುಟ್ಟ ಅಂಗಡಿಯವರು ಸಹಕಾರ ಕೊಡಲಿಲ್ಲ ಎಂದು ಒಬ್ಬರು ಮಲೆಯಾಳಿಯ ಅಂಗಡಿ ಲೂಟಿಯಾಗಿದೆ ಎಂದು ತಿಳಿದಿದ್ದೇನೆ. ಅವರ ಸತ್ಯಾಸತ್ಯತೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಬಹಳ ಮುಖ್ಯವಾದಂಥ ಎಕ್ಸೈಸ್ ಇಲಾಖೆ ನಾಲ್ಕು ಜನರ ಹಸ್ತಾಂತರವಾಗಿದೆ ಶ್ರೀ ವೀರೇಂದ್ರಪಾಟೀಲರ ಕೈಯಲ್ಲಿ ಇದ್ದುದು. ಶ್ರೀ ರಾಜಶೇಖರಮೂರ್ತಿಯವರ ಕೈಗೆ ಹೋಯಿತು ನಂತರ ಶ್ರೀ ಶಿವಮೂರ್ತಿಯವರ ಕೈಗೆ ಹೋಯಿತು. ಈಗ ಶ್ರೀ ಧರ್ಮಸಿಂಗ್ ಅವರ ಕೈಗೆ ಬಂದಿದೆ. ನೋಡೋಣ ಇಲ್ಲಾದರೂ ಧರ್ಮ ಸಂಸ್ಥಾಪನೆ ಆಗುತ್ತದೋ ಕಾದು ನೋಡೋಣ. ಅದನ್ನು ಧರ್ಮಸಿಂಗರವರು ಹೇಳಲಿ. ಹೋಮ್ ಡಿಪಾರ್ಟ್‌ಮೆಂಟನ್ನು ಇಬ್ಬರು ಮುಖ್ಯಮಂತ್ರಿಗಳು ಕೆಲವು ಕಾಲ ನಿರ್ವಹಿಸಿ ಈಗ ಪುನಃ ಧರ್ಮಸಿಂಗ್‌ರವರಿಗೆ ಬಂದಿದೆ. ಈ ಎರಡು ಇಲಾಖೆಗಳಲ್ಲಿ ಇತ್ತೀಚೆಗೆ ಏನುಧರ್ಮ ನಡೆದಿದೆ. ಎನ್ನುವುದನ್ನು ಸ್ವಲ್ಪ ಮುಂದೆ ಹೇಳುತ್ತೇನೆ. ಇನ್ನು ಬಹಳ ಮುಖ್ಯವಾಗಿರತಕ್ಕಂಥಾದ್ದು ರೆವಿನ್ಯೂ ಇಲಾಖೆ ಮತ್ತು ಸಹಕಾರ ಇಲಾಖೆ. ಈ ರೇವಿನ್ಯೂ ಇಲಾಖೆಯಲ್ಲಿ ಮೂರು ಜನ ಮಂತ್ರಿಗಳಾಗಿದ್ದಾರೆ. ಶ್ರೀ ಅಜೀಜ್‌ಸೇಠ್‌ರವರು ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆಯವರು ಮತ್ತು ಶ್ರೀ ಕೆ.ಹೆಚ್. ಪಾಟೀಲರು. ಶ್ರೀ ಅಜೀಜ್ ಸೇಠ್‌ರವರು ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಮಧ್ಯೆ ಶ್ರೀ ಕೆ.ಹೆಚ್. ಪಾಟೀಲ್‌ರವರ ಕಾಲದಲ್ಲಿ ಏನು ನಡೆಯಿತು ಆ ಪ್ರಕರಣವನ್ನು ನಾನು ಈ ಸದನದ ಗಮನಕ್ಕೆ ತರಬೇಕು,ತರುತ್ತೇನೆ. ಆದರೆ ಸದ್ಯಕ್ಕೆ ಎಷ್ಟು ಬದಲಾವಣೆಯಾಗಿದೆಯೆಂದು ನೋಡಬೇಕು. ಎಲ್ಲರ ಸಹಕಾರ ಕೇಳತಕ್ಕಂಥ ಈ ಸಹಕಾರಿ ಇಲಾಖೆ ಇಪ್ಪತ್ತು ತಿಂಗಳಲ್ಲಿ ನಾಲ್ಕು ಜನ ಮಂತ್ರಿಗಳನ್ನು ಕಂಡಿದೆ. ಈ ಸಹಕಾರಿ ಇಲಾಖೆ ಎಷ್ಟರಮಟ್ಟಿಕೆ ಸಹಕಾರಿಸಿದೆ ಎಂದರೆ 4 ಜನ ಮಂತ್ರಿಗಳನ್ನು ಮಾಡುವಷ್ಟರ ಮಟ್ಟಿಗೆ ಸಹಕರಿಸಿದೆ. ರಾಜ್ಯದ ಜನತೆಗೆ ಸಹಕಾರ ಏನಾಗಿದೆ ಆ ಕರ್ಮಕಾಂಡವನ್ನು ಹೇಳುತ್ತೇನೆ. ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಸಹಕಾರ ಇಲಾಖೆಯನ್ನು ವಹಿಸಿಕೊಂಡಿದ್ದರು. ಅವರು ಈಗ ಸಹಕಾರದಿಂದ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಯ ದೊಡ್ಡ ಮಂತ್ರಿಗಳಾಗಿದ್ದಾರೆ. ನಂತರ ಹೆಚ್.ಆರ್. ರಾಜುರವರು ಇದ್ದರು ಅವರು ಈಗ ಮಂತ್ರಿಮಂಡಲದಲ್ಲಿ ಇಲ್ಲ. ಕೆ.ಹೆಚ್. ಪಾಟೀಲರು ಅದು ಚರ್ಚೆ ಮಾಡುವುದಕ್ಕೆ ಬಹಳ ಪ್ರಶಸ್ತವಾದ ಕಾಲ ಅಲ್ಲಿಂದ ಆ ಇಲಾಖೆ ಡಿಮೋಟ್ ಆಯಿತು. ಏಕೆಂದರೆ ಆ ಇಲಾಖೆಯಲ್ಲಿ ಯಾರು ಯಾರು ಎತ್ತರದವರು ಕೆಲಸ ಮಾಡಿದರೋ ಅವರ ಖಾತೆಗಳು ಬದಲಾವಣೆ ಆದ ಹಾಗೆ ಸಹಕಾರಿ ಇಲಾಖೆ ಕೂಡ ಡಿಮೋಟ್ ಆಯಿತು. ಅದು ಈಗ ಎಸ್.ಆರ್. ಮೋರೆಯವರ ಕೈಗೆ ಬಂದಿದೆ. ಹೆಲ್ತ್ ಪೋರ್ಟ್‌ಫೋಲಿಯೋ ಶ್ರೀಮತಿ ಮನೋರಮಾ ಮಧ್ವರಾಜ್‌ರವರ ಕೈಗೆ ಬಂದಿತ್ತು. ಪುನಃ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಕೈಗೆ ಬಂದಿತು. ಬಹುಶಃ ಇಬ್ಬರೂ ಮಹಿಳೆಯರು. ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಈಗ ಮಾನ್ಯ ಪುಟ್ಟಸ್ವಾಮಿಗೌಡರ ಕೈಗೆ ಬಂದಿದೆ. ಪಿ.ಡಬ್ಲ್ಯೂ.ಡಿ. ಬಹಳ ಮುಖ್ಯವಾದಂಥ

ಇಲಾಖೆ ಹಾಗೆಯೇ ಬಹಳ ಮುಖ್ಯವಾದಂಥದು ಮತ್ತೊಂದು ಇಲಾಖೆ ರೂರಲ್ ಡೆವಲಪ್‌ಮೆಂಟ್ ನಾಲ್ಕು ಜನರ ಕೈಗೆ ಬದಲಾವಣೆಯಾಗಿದೆ. ಕಾರಣವೇನೋ ಗೊತ್ತಿಲ್ಲ ಈ ಖಾತೆ ಬಸವಲಿಂಗಪ್ಪನವರು ಘೋರ್ಪಡೆಯವರು ಮತ್ತೆ ಬಸವಲಿಂಗಪ್ಪನವರು, ಆಗಿ ಈಗ ಪುನಃ ಕೆ.ಹೆಚ್. ಪಾಟೀಲ್‌ರವರಿಗೆ ಬಂದಿದೆ. ಈ ಖಾತೆಗೆ ಮುಂದೆ ಯಾರು ಬರುತ್ತಾರೋ ನಾನು ಕಾದು ನೋಡುತ್ತೇನೆ. ಏತಕ್ಕೆ ಕಾದು ನೋಡಬೇಕಾಗಿದೆ ಅಂದರೆ ಜನತಂತ್ರದಲ್ಲಿ ವೀಂದ್ರಿಕೃತ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ಯಾರು ಯಾರಿಗೆ ಬದಲಾವಣೆ ಆಗುತ್ತದೆ. ಎಂದು ನೋಡಬೇಕಾಗುತ್ತದೆ. ದುರ್ದೈವ ಅಂದರೆ ಮಾನ್ಯ ಬಸವಲಿಂಗಪ್ಪನವರಿಗೆ ಮಂತ್ರಿಮಂಡಲದಲ್ಲಿ ಖಾತೆ ಬದಲಾವಣೆಯಾದರೆ ಅದಕ್ಕೆ ಚಂರ್ದೆಗೌಡರು ಕಾರಣ ಎಂದು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರ ಖಾತೆ ಬದಲಾವಣೆಗೆ ನಾನು ಕಾರಣ ಅಲ್ಲ. ಮಾನ್ಯ ಕೆ.ಹೆಚ್. ಪಾಟೀಲರ ಖಾತೆ ಬದಲಾವಣೆಗೂ ನಾನು ಕಾರಣ ಅಲ್ಲ. ಗೋಕುಲಾಷ್ಟಮಿಗೂ ಇಮಾಮ್‌ಸಾಬಿಗೂ ಏನು ಸಂಬಂದ? ಆದರೆ ನನಗೆ ಆ ಕೀರ್ತಿ ಕೊಟ್ಟಿದ್ದಾರೆ. ನನಗೆ ಸಂತೋಷವಾಗಿದೆ ಏಕೆಂದರೆ ನಾನು ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಸಂಪೂರ್ಣವಾದ ವಿಶ್ವಾಸ ಇಟ್ಟವನು. ಆದ್ದರಿಂದ ವಿಶ್ವಾಸ ಇಲ್ಲದೇ ಕೈಯಿಂದ ಜಾರಿ ಹೋಗಿದೆ ಎನ್ನುವ ಸಂತೋಷ ನನಗೆ ಮಾನ್ಯ ಸಭಾಧ್ಯಕ್ಷರೆ ಮಂತ್ರಿಮಂಡಲ ರಚನೆ ಮಾಡತಕ್ಕಂಥ ಸಮಯದಲ್ಲಿ ನಾನು ವೈಯಕ್ತಿಕವಾಗಿ ಎಲ್ಲರ ಬಗ್ಗೆ ಗೌರವ ವಿಶ್ವಾಸ ಇಟ್ಟುಕೊಂಡಿರತಕ್ಕವನು. ಈ ಕಾನ್‌ಸ್ಟಿಟ್ಯೂಷನಲ್ ಕ್ರೈಸಿಸ್ ಎನ್ನುವಾಗ ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡತಕ್ಕ ಕಾಲದಲ್ಲಿ ರಾಜ್ಯಾಂಗದ ಹೆಸರಿನಲ್ಲಿ ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ. ಈ ರಾಜ್ಯಾಂಗವನ್ನು ರಕ್ಷಣೆ ಮಾಡುತ್ತೇನೆ ಎನ್ನತಕ್ಕಂಥ ದೊಡ್ಡ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತುಕೊಂಡಿದ್ದಾರೆ. ಇಂತ ಜವಾಬ್ದಾರಿಯನ್ನು ಅವರು ನಿಭಾಯಿಸಿದ್ದಾರೆಯೇ ಎನ್ನುವುದಕ್ಕೆ ನನ್ನ ಪ್ರಶ್ನೆ ಈ ಜವಾಬ್ದಾರಿಯಂತೆ ಅಂದರೆ ರಾಜ್ಯಾಂಗದತ್ತವಾಗಿ ಕೊಟ್ಟಂಥ ಮಾತಿನಂತ ನಡೆದುಕೊಂಡಿದ್ದಾರೆಯೇ ಈ ರಾಜ್ಯದಲ್ಲಿ ರೂಲ್ ಆಫ್ ಲಾ ಇದೆಯೇ ಅಂಥ ರೂಲ್ ಆಫ್ ಲಾ ಇದ್ದರೆ ಅದನ್ನು ಗುರುತಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆಯೇ? ಇದು ಮೂಲಭೂತವಾದಂಥ ಪ್ರಶ್ನೆ ಮಾನ್ಯ ಅಧ್ಯಕ್ಷರೆ ಮಂತ್ರಿಮಂಡಲ ವಿಸ್ತರಣೆ ಮಾಡುವಾಗ ಒಬ್ಬರು ಮಂತ್ರಿಗಳನ್ನು ತಮ್ಮ ಮಂತ್ರಿಮಂಡಲದ ಸದಸ್ಯರನ್ನಾಗಿ ತೆಗೆದುಕೊಂಡಿದ್ದಾರೆ. ಕನಿಷ್ಟಪಕ್ಷ ಈ ರಾಜ್ಯದಲ್ಲಿ when the criminal law is set in motion, ಯಾರು ಅದನ್ನು ಜಾರಿಗೆ ಕೊಡಬೇಕೋ ಯಾವ ಇಲಾಖೆ ಮೂಲಕ ಅದು ಜಾರಿಯಾಗಬೇಕೋ ಅಂಥ part of the Home Minister ಅನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ ನನ್ನ ಪ್ರಶ್ನೆ ವೈಯಕ್ತಿಕವಾಗಿ ಅವರ ವಿರುದ್ಧ ಅಥವಾ ಪರ ಅಲ್ಲ. ಕ್ರಿಮಿನಲ್ ಕೋರ್ಟ್ ಏನು ಹೇಳುತ್ತದೆ This is very important point.

ಅಧ್ಯಕ್ಷರೆ 1986ರಲ್ಲಿ ನಡೆದಂಥ ಯಾವುದೋ ಒಂದು ಕ್ರಿಮಿನಲ್ ಕೇಸನ ಚಾರ್ಜ್ ಮೊಕದ್ದಮೆ ಮೇಲೆ ಇಂದಿನ ಮಂತ್ರಿ ಶ್ರೀ ಶಿವಕುಮಾರ್ ಅವರನ್ನು ಇಲ್ಲಿ ಅಪರಾಧಿಯಾಗಿ ಮಾಡಿದ್ದಾರೆ. ಅದರ ಅರ್ಥ ಅಪರಾಧ ಸಾಬೀತಾಗಿದೆ ಎಂದು ಅಲ್ಲ, ನಾನು ಅಪರಾಧ ಸಾಭೀತಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನನ್ನ ಪ್ರಶ್ನೆ ಏನು ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ ಪ್ರೋಸೀಡಿಂಗ್ಸ್‌ನ ಕೆಲವು ಭಾಗಗಳನ್ನು ಓದಿದರೆ ತಮಗೆ ಅರ್ಥವಾಗಬಹುದು. ರಾಜ್ಯಾಂಗದ ಮೇಲೆ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿಗಳು ತನ್ನ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವಾಗ ರೂಲ್ ಆಫ್ ಲಾ ಫಾಲೋ ಮಾಡದೇ ಇರತಕ್ಕಂಥವನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡರೆ ಜನ ಯಾವರೀತಿ ಮಂತ್ರಿಮಂಡಲದ ಮೇಲೆ ವಿಶ್ವಾಸ ಇಡಬೇಕು I quote the proceedings of the criminal court.

"N.B.W issued against the accused number I not executed". The present Minister. ನಾನು ಇವೊತ್ತು ಈ ಸದನದ ಸಾರ್ವಭೌಮತ್ವದಲ್ಲಿ ಮಾತನಾಡುತ್ತಿದ್ದೇವೆ. ಜನರ ಪ್ರತಿನಿಧಿಗಳು ಎಂದು ಹೇಳಿ ಹೆಮ್ಮೆಯಿಂದ ಭುಜ ತಟ್ಟಿಕೊಳ್ಳುತ್ತೇವೆ. Should we not submit to the law. that is all my question. Should we or should we not? ಕೋರ್ಟ್ ಯಾರು ಏನು ಎಂದು ನೋಡುವುದಿಲ್ಲ.

*11.50* ಎ.ಎಂ

"I Issue show-cause notice" ಯಾರಿಗೆ? ನಾನ್‌ಬೇಲಬಲ್ ವಾರೆಂಟ್ ಅಪರಾದಿಗೆ ಷೋಕಾಸ್ ನೋಟೀಸ್ ಸಬ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್‌ಗೆ ಸಬ್ ಇನ್ಸ್‌ಪೆಕ್ಟರ್ ಕೋಡಿಹಳ್ಳಿ

"For not executing warant against Accused No.1 even though issued many a time. Issue FLW against the surety of the Accused No1. for an amount, issue procdamation against the Accused No1." this is dated 10.6.1991 ಚುನಾವಣೆಯಾಗಿ ನಾವು ಪ್ರತಿನಿಧಿಗಳಾಗಿ ಈ ಸದನಕ್ಕೆ ಬಂದಮೇಲೆ ಪ್ರೊಕ್ಲಮೇಷನ್ ಕೂಡ ಆಗುವುದಿಲ್ಲ ಕೋರ್ಟ್ ಆದೇಶ ಎಷ್ಟರಮಟ್ಟಿಗೆ ಪಾಲನೆಯಾಗುತ್ತದೆ ಎಂದರೆ

'Proclamation issued against No1. not executed. Are we in a democratic set-up? Are we submitting ourselves to the rule of law? "Issue FLW issued against the surety of the Accused No1." This is also not executed. 'Illue showËcause notice to Sub - Inspector, Kodihalli police Station as to why he should not be prosecuted under the Karnataka Police Act for not executing the warrant against the Accused N0.1 and his surety. Issue fresh NBW against Accused No.1 and FLW against the surety of the Accused No1. Write to Superintendent of police, Bangalore Rural District, Issue direction to Sub-Inspector of Police, Kodihalli to execute warrant. Call on 31/7. " This is dated 10/7/91. ಆಚೆಗೆ ಮಂತ್ರಿಮಂಡಲ ವಿಸ್ತರಣೆಯಾಗುತ್ತದೆ. ಮಾನ್ಯ ಸದಸ್ಯರು ಮಂತ್ರಿಯಾಗುತ್ತಾರೆ ಸಂತೋಷ ಆದರೆ ಕೋರ್ಟು ಪ್ರೊಸೀಡಿಂಗ್ಸ್‌ನ್ನು ನೋಡಿದರೆ This again I am reading the proceeedings of 31.7.91. "Show-cause Notice to Sub-Inspector of Police, Kodihalli. NBW to Accused No 1. issued un-executed.Write letter to Superintendent of police, Bangalore. FLW to surety issued and executed. Accused Absent. Others present. Surity of the Accused No1. Present and submits that he could not produce Accused No1."

He could not produce before the Court the court even though he made efforts.

" Heard surety." This is on 31.7.91. Ministry expansion was on 27.7.91.

"Sufficient time is granted to the surety. He failed to produce the Accused before Court. Hence no leniency can be shown to the surety regarding recovery of the bond amount. Hence surety is directed to pay Rs 2,000/ being the

forfeited surety bond amount in default of payment of bond amount, the surety shall be detained in civil prisons for six monts."

We have also practised and you are the better judge and the Assitant public Prosecutor requests the Court to issue warrant against the Accused No1. who is said to be a Minister in the State. This is the height of hypocracy, accordint to me, we play. Is it right on our part to call ourselves the representatives of the people and flout the law that we have formulated here, on the floor of the House? ಅಂದರೆ ನಾವು ಶಾಸನಕ್ಕೆ ಅಧೀನರು. ನಾನು ಅದಕ್ಕಿಂತ ಮುಂದೆ ಹೋಗುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ ರಾಜ್ಯಾಂಗದ ಮೇಲೆ ಪ್ರಮಾಣಮಾಡಿ ರೂಲ್ ಆಫ್ ಲಾವನ್ನು ಫಲೋ ಮಾಡುತ್ತೇವೆಂದು ಹೇಳತಕ್ಕ ನಾವು ಅದಕ್ಕನುಗುಣವಾಗಿ ನಡೆದುಕೊಳ್ಳದಿದ್ದರೆ ಶಾಸನವನ್ನು ಜಾರಿ ಮಾಡುವವರು ಯಾರು? ರಕ್ಷಣೆ ಮಾಡುವವರು ಯಾರು? ಇದು ನನ್ನ ಮೊದಲನೇ ಪ್ರಶ್ನೆ ಕಾನ್‌ಸ್ಟಿಟ್ಯೂಷನಲ್ ಕ್ರೈಸಿಸ್ ಎನ್ನತಕ್ಕ ಮಾತನ್ನು ನಾನು ಹೇಳಿದೆ. ಕಾನ್‌ಸ್ಟಿಟ್ಯೂಷನಲ್ ಆ ಕ್ರೈಸಿಸ್ ಏನಿದೆ? ಈ ಮಂತ್ರಿಮಂಡಲದಲ್ಲಿ ಒಬ್ಬರ ಮೇಲೊಬ್ಬರು ಆರೋಪವನ್ನು ಮಾಡುತ್ತಿದ್ದಾರೆ. ಪ್ರಾಕ್ಟೀಸ್ ಅಂಡ್ ಪ್ರೋಸಿಜರ್ ಆಫ್ ಪಾರ್ಲಿಮೆಂಟ್ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಕ್ಯಾಬಿನೆಟ್‌ನ ಜವಾಬ್ದಾರಿಯನ್ನು ವಿವರಣೆ ಮಾಡುತ್ತಾರೆ. ಕೌಲ್ ಅಂಡ್ ಶಕ್ದರ್ ಮಸ್ತಕದ 616 ವಿಧಿ ಏನು ಹೇಳುತ್ತದೆಂದರೆ

" The council of Ministers is collectively responsible to the Lok Sabha. The repsonsiblility is joint and indivisgible. There is no specific provision in the Constitution laying down the individual responsibility of a Minister and his accountability to parliament for all the acts of omissions and commissions in his departmental charge. However, keeping with the high Parliamentary traditions, individual Ministers have, on their own accord, accepted the responsibility and resigned on account of criticism of shortcomings of the departments under them. Collective responsibility is assured by the enforcement of two principles

i) No person is nominated to the council except on the advice of the Prime Minister and ii) No person is retained as a member of the Council if the Prime Minister demands his dismissal. The essence of collective responsibility is that a Minister is free to express his dissent when a policy is in the stage of discussion. But, after decision is taken every Minister is expected to stand by it without any reservation. The only alternative, therefore, for a Minister who does not see eye to eye with the Prime Minister in the matters of policy or he is not prepared to defend Cabinet decision, is to resign. Likewise if the Prime Minister finds that a colleague's views or actions are causing him embarrassment, he can appropriately ask for his resignation" ಮಾನ್ಯ ಅಧ್ಯಕ್ಷರೇ ಸರ್ಕಾರ ಮಂತ್ರಿಗಳು ಒಬ್ಬೊಬ್ಬರು ಒಂದೊಂದು ರೀತಿಯಾದ ಹೇಳಿಕೆಗಳನ್ನು ಅಣಿಮುತ್ತುಗಳನ್ನು ಸುರಿಸಿದ್ದಾರೆ. ನಾನು ಒಂದೆರಡನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. I have to depend only on the press reports.

ಒಬ್ಬ ಮಂತ್ರಿಗಳು ಹೇಳುತ್ತಾರೆ. ನನ್ನ ರಾಜೀನಾಮೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಿದರೆ ಕೊಡುವುದಿಲ್ಲ ನಾನು ಹೈಕಮ್ಯಾಂಡ್ ಆದೇಶದ ಮೇಲೆ ಮಂತ್ರಿಯಾಗಿದ್ದೇನೆ, ಅವರು ಕೇಳಿದರೆ ನಾನು ಕೊಡುತ್ತೇನೆ, ಇದು ಒಬ್ಬರ ವಾದ. ಮತ್ತೊಬ್ಬ ಮಂತ್ರಿಗಳು ನಮ್ಮ ಸರ್ಕಾರದ ಮೇಲೆ ಚಾರ್ಜಸ್ ಇವೆ, ಅವನ್ನು ಪರಿಶೀಲನೆ ಮಾಡಬೇಕಾಗುತ್ತದೆ ಎನ್ನತಕ್ಕಂಥ ಅಪ್ಪಣೆಯನ್ನು ಕೊಡಿಸುತ್ತಾರೆ. ರಾಜ್ಯದ ಜನ ಇಲ್ಲಿ ನಿರೀಕ್ಷೆ ಮಾಡುತ್ತಾರೆ. ಈ ಸರ್ಕಾರದಿಂದ ನಮ್ಮ ನಿರೀಕ್ಷೆ, ministers are collectively responsible and that responsibility is indivisible, ನಿಮಗೆ ತಿಳಿದಹಾಗೆ ನೀವು ಹೇಳುವುದು, ಅವರಿಗೆ ತಿಳಿದಹಾಗೆ, ಅವರು ಹೇಳುವುದು. ಸರ್ಕಾರದಲ್ಲಿ ಇವತ್ತು ಸಾಮ್ಯ ಸಂಬಂಧ ಇಲ್ಲದಿದ್ದರೆ, this is exactly what I call the 'Constitutional crisis'. ಇಂಥ ಕ್ರೈಸಿಸ್ ಬಂದಾಗ ರಾಜ್ಯಾಂಗದ ಜವಾಬ್ದಾರಿ ಹೊತ್ತಂಥ ಮಾನ್ಯ ರಾಜ್ಯಪಾಲರು ತಕ್ಷಣ ಅವರು ನಮ್ಮ ರಕ್ಷಣೆಗೆ ಬರಬೇಕಾಗಿತ್ತು. ಆದರೆ ಅವರು ಏಕೋ ಬರಲಿಲ್ಲ ?

ಮಾನ್ಯ ಅಧ್ಯಕ್ಷರೆ ಮೇಲಾಗಿ, I will quote from Kannada Prabha. ಬೆಳಗಾವಿ, ಆಗಸ್ಟ-13 ರಾಜೀನಾಮೆ ಕೇಳಿದರೆ ಸೂಕ್ತ ಉತ್ತರ - ಶ್ರೀ ಕೆ.ಹೆಚ್. ಪಾಟೀಲ್ - ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರು ತಮ್ಮನ್ನು ರಾಜೀನಾಮೆ ನೀಡುವಂತೆ ಕೇಳಿದರೆ ಅದಕ್ಕೆ ನಾನು ಸೂಕ್ತ ಉತ್ತರ ನೀಡುವುದಾಗಿ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಕೆ.ಹೆಚ್. ಪಾಟೀಲರು ಮಂಗಳವಾರ ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು. ತಾವು ಪಕ್ಷದ ಅಧ್ಯಕ್ಷ ಶ್ರೀ ಪಿ.ವಿ. ನರಸಿಂಹರಾವ್ ಅವರೊಂದಿಗೆ ಸೋಮವಾರ ನವದೆಹಲಿಯಲ್ಲಿ ನಡೆಸಿದ ಮಾತುಕತೆಗಳ ವಿವರಗಳನ್ನು ನೀಡಲು ಇಚ್ಛಿಸದ ಅವರು ಆದಾಗ್ಯೂ ಮಾತುಕತೆ ರಾಜ್ಯದ ವಿದ್ಯಮಾನಗಳಿಗೆ ಸಂಬಂಧಿಸಿದ್ದು ಎಂದು ಮಾತ್ರ ಹೇಳಿದರು.

"ಎಲ್ಲಾ ವಿವರಗಳನ್ನು ಅವರಿಗೆ ಒಪ್ಪಿಸಿದ್ದೇನೆ. ಮುಂದೆ ಏನು ಮಾಡಬೇಕೆಂಬುದನ್ನು ಅವರು ನನಗೆ ತಿಳಿಸಿದ್ದಾರೆ. ಆದ್ದರಿಂದ ನನಗೆ ತೃಪ್ತಿಯಾಗಿದೆ ಎಂದು ಪಾಟೀಲರು ಹೇಳಿದರು. ಏನನ್ನೂ ಹೇಳಲು ಕಾಲ ಇನ್ನೂ ಪಕ್ವವಾಗಿಲ್ಲ ಎಂದು ಅವರು ಮೊಗಂ ಆಗಿ ಹೇಳಿದರು. ಹಿರಿಯ ನಾಯಕನಾದ ನನ್ನಂಥವನ ಖಾತೆಯನ್ನು ಬದಲಾವಣೆ ಮಾಡುವಾಗ ಮುಖ್ಯ ಮಂತ್ರಿ ಸಲಹೆ ಕೇಳಬಹುದಾಗಿತ್ತು."

ಮಾನ್ಯ ಅಧ್ಯಕ್ಷರೆ, ಏನನ್ನು ಹೋಗಿ ಹೇಳಿದ್ದಾರೆ? ಮಂತ್ರಿಮಂಡಲದ ಸದಸ್ಯರಾಗಿ ದೆಹಲಿಗೆ ಯಾವ ಸರ್ಕಾರದ ವಿರುದ್ಧ ದೂರು ಒಯ್ದಿದ್ದಾರೋ, ಪಕ್ಷದ ವಿರುದ್ಧ ದೂರು ಒಯ್ದಿದ್ದಾರೋ, ವಿರೋಧ ಪಕ್ಷಗಳ ನಮ್ಮ ವಿರುದ್ಧ ದೂರು ಒಯ್ದಿದ್ದಾರೋ, ರಾಜ್ಯದಲ್ಲಿ ನಡೆಯುತ್ತಾ ಇರತಕ್ಕ ಆಡಳಿತದ ವಿರುದ್ಧ ದೂರು ಒಯ್ದಿದ್ದಾರೋ ಅಥವಾ ಖಾತೆ ಬದಲಾವಣೆ ಬಗ್ಗೆ ದೂರು ಒಯ್ದಿದ್ದಾರೋ ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಮಂತ್ರಿಗಳು ಹೀಗೆ ಮುಸುಕಿನಲ್ಲಿ ಗುದ್ದಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಚಾರ ಕಾಂಗ್ರೆಸ್ಸಿನ ಭಿನ್ನಮತೀಯರಿಂದ ಹೊರಬಂದಿದೆ. ಆದರೆ ಆ ಭಿನ್ನಮತೀಯರು ಯಾರು ಎಂದು ನನಗೆ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಭಿನ್ನಮತೀಯರು ಎಂದು ಬರೆದಿದ್ದಾರೆ ; ಅವರು ಪ್ರಧಾನಿಯವರನ್ನು ಭೇಟಿ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರ ಪದಚ್ಯುತಿಗೆ ಮನವಿ ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಆಪಾದನೆ ಮಾಡಿದ್ದಾರೆ. ಒಂದೇ ರಾತ್ರಿಯಲ್ಲಿ 210 ಲೈಸೆನ್ಸ್‌ಗಳನ್ನು ನೀಡಿದ ಬಗ್ಗೆ ಹೇಳಿದ್ದಾರೆ. ಈಗ ಭಿನ್ನಮತೀಯರು ರಾಷ್ಟ್ರದ ಪ್ರಧಾನ ಮಂತ್ರಿಯವರಿಗೆ ಒಪ್ಪಿಸಿರತಕ್ಕ ಮನವಿ ಬೀದಿಯಲ್ಲಿ ಹರಾಜಾಗುತ್ತಿದೆ. ಇದನ್ನು ಯಾರೂ ಹುಡುಕಬೇಕಾಗಿಲ್ಲ. ನಿನ್ನೆ ಬೆಳಿಗ್ಗೆ ಇಲ್ಲಿಗೆ ಬರುವಾಗ ವಿಧಾಸೌಧದ ಹೊರಗಡೆ ನಿಂತೆ ತೆಗೆದುಕೊಳ್ಳಿ ಇದು ಭಿನ್ನಮತೀಯರು ಕೊಟ್ಟ ಮನವಿಯ ನಕಲು ಎಂದು ಕೊಟ್ಟರು.

ಅವರು ಯಾರೋ ಏನೋ ನನಗೆ ಗೊತ್ತಿಲ್ಲ. ಭಿನ್ನಮತೀಯರು ಕೊಟ್ಟ ಮನವಿಯ ನಕಲು ಎಂದು ಏನು ಹೇಳಿದ್ದಾರೆ ಅದು ಸರಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ಕೊಟ್ಟವರು ಬಹಳ ಜನ ಇಲ್ಲೇ ಇರುವುದರಿಂದ ಸರಿ - ತಪ್ಪು ಎಂದು ಹೇಳಬಹುದೆಂದು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಒಂದೊಂದೇ ಹೇಳುತ್ತಾ ಹೋಗಿ, ಉತ್ತರ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಉತ್ತರ ಹೇಳುತ್ತಾರೆ ಅಂದ್ರಲ್ಲ, ಉತ್ತರ ಯಾರು ಹೇಳುತ್ತಾರೆ ಅವರಲ್ಲಿ ಒಬ್ಬರ ಹೆಸರು ಹೇಳಿದರೆ ಅವರನ್ನೇ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿಲ್ಲ. ನೀವು ಹೇಳುತ್ತಾ ಹೋದರೆ ನಿಮಗೆ ಗೊತ್ತಾಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಗೊತ್ತಿಲ್ಲದೆ ಇದ್ದರೆ ಅವರು ಉತ್ತರ ಹೇಗೆ ಹೇಳುತ್ತಾರೆ ? ನಿಮಗೆ ಗೊತ್ತಿದೆ, ಅವರು ಯಾರೆಂದು ಹೇಳಿದರೆ ನಾನು ಅವರನ್ನೇ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಇದರ ನಕಲನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡ ಮಟ್ಟಿಗೆ, ತಮಗೂ ಕೊಟ್ಟಿದ್ದಾರೆಂದೂ ತಿಳಿದುಕೊಂಡಿದ್ದೇನೆ. ಅದರಿಂದ ಅದು ಸರಿಯಲ್ಲವೆಂದು ಅವರ ಪರವಾಗಿ ತಾವೇ ಹೇಳಿದರೆ ಸೂಕ್ತ ಅನ್ನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ, ಬರುವ ಹಾದಿಯಲ್ಲಿ ಯಾರೋ ಕೊಟ್ಟರು ಎಂದು ಹೇಳಿದಿರಿ. ನಿಮಗೆ ಗೊತ್ತು, ಅವರು ಯಾರು ಎಂದು,ಖಚಿತಪಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೀರಿ ಅಂದಾಗ, ಈ ಸದನದಲ್ಲಿ ಊಹಾಪೋಹವನ್ನು ಹುಡುಕುವುದರಲ್ಲಿ ಅರ್ಥವಿಲ್ಲ. ತಮ್ಮ ಕೈಯಲ್ಲಿ ಇದೆಯಲ್ಲ ಮನವಿ ಅದಕ್ಕೆ ಯಾರು ರುಜು ಮಾಡಿದ್ದಾರೆಂದು ಇದೆಯೇ ? ಏನೂ ಇಲ್ಲ. ಆದುದರಿಂದ........

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಲ್ಪ ತಾಳ್ಮೆಯಿಂದ ಇದ್ದರೆ ಒಳ್ಳೆಯದು. ನಾನು ಕೂಡ ವಕೀಲನಾಗಿ ಸ್ವಲ್ಪ ದಿವಸ ಪ್ರಾಕ್ಟೀಸ್ ಮಾಡಿದ್ದೇನೆ. ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ಮತ್ತು ಇದರಲ್ಲಿ ಇದೆಯಲ್ಲ ಇವೆರಡನ್ನು ಹೋಲಿಸಿ ನೋಡಿದ್ದೇನೆ. ಒಂದು ಇಂಗ್ಲಿಷ್‌ನಲ್ಲಿದೆ, ಕೆಲವು ಕನ್ನಡದಲ್ಲಿ ಬಂದಿದೆ. ನಾನು ಇಂಗ್ಲಿಷ್ ಪತ್ರಿಕೆಯಲ್ಲಿ ನೋಡಿದೆ. ವರ್ಬ್ಯಾಟಿಂ ಇದೆ, ವ್ಯತ್ಯಾಸ ಏನೂ ಇಲ್ಲ. ಇದಕ್ಕೆ ಮತ್ತೊಂದು ವೆರಿಫಿಕೇಷನ್ ಏನು ಬೇಡ ಅಂದುಕೊಂಡಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಪತ್ರಿಕೆಯಲ್ಲಿ ಬಂದಿರುವುದು ಯಾವುದೂ ನಿಜ ಇರುವುದಿಲ್ಲ. ಒಂದು ನಿಜ ಇರುತ್ತದೆ, ಕೆಲವು ಸುಳ್ಳು ಇರುತ್ತವೆ. ಅದನ್ನೇ ಇವರು ಪ್ರಧಾನವಾಗಿ ಇಟ್ಟುಕೊಂಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೋಡೋಣ.

(ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಹೊತ್ತು ದಾಖಲೆಗಳನ್ನು ಹುಡುಕುತ್ತಿದ್ದರು. ಆಗ ಆಡಳಿತ ಪಕ್ಷದ ಸದಸ್ಯರೊಬ್ಬರು ಏನೋ ಹೇಳಿದರು.)

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಏನೇನು ಉವಾಚ ಹೇಳಿದ್ದೀರಿ ಅದನ್ನು ಹುಡುಕುತ್ತಿದ್ದೇನೆ. ನನ್ನದು ಹುಡುಕುತ್ತಿಲ್ಲ. ನನ್ನದಾದರೆ ಬೇಗ ಸಿಕ್ಕಿಬಿಡುತ್ತದೆ. ನಿಮ್ಮದು ಕಷ್ಟ ಸಿಗುವುದು. ಬೇಗ ಸಿಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಹೇಳಿರುವುದು

ಒಂದು ಮಾತು. ದಿನಾಂಕ 8-8-91ರಲ್ಲಿ ಉದಯವಾಣಿ ಪತ್ರಿಕೆಯಲ್ಲಿ ಬಂದಿರುವಂತೆ ಈ ಸದನದ ಹಿರಿಯ ಅನುಭವಿ ಮತ್ತು ಜವಾಬ್ದಾರಿ ಶಾಸಕರು ಒಂದು ಅಪ್ಪಣೆ ಕೊಡಿಸಿದ್ದಾರೆ. ಕಾರವಾರದ ಕಾಂಗ್ರೆ ಶಾಸಕ ರಾಣೆಯವರು. ಅವರು ಏನು ಹೇಳುತ್ತಾರೆ ಎಂದರೆ "ಕಾಂಗ್ರೆ ಸುರಕ್ಷತೆಗಾಗಿ ಬಂಗಾರಪ್ಪನವರ ನಾಯಕತ್ವ ಹೋಗಲೇಬೇಕು" ಎಂದು ಮಂತ್ರಿಗಳದು ಆಯಿತು. ಕಾಂಗ್ರೆಸ್ ಶಾಸಕರದು ಆಯಿತು. ಅವರು ಇಲ್ಲಿ ಇರಬೇಕು. ಇದ್ದರೆ ಇಲ್ಲ ಅಂತ ಹೇಳುತ್ತಾರೋ ಏನೋ ಗೊತ್ತಿಲ್ಲ. ಮೊಯಿಲಿಯವರು ಹೇಳಿದ್ದನ್ನೂ ಹೇಳಿದ್ದೇನೆ. ಮೈಸೂರು ಪತ್ರಿಕಾ ಹೇಳಿಕೆಯನ್ನು......

ಶ್ರೀ ಗೋಪಾಲ ಮುಕುಂದ ಕಾನಡೆ : ನಿಮ್ಮದೇನಿದೆ ತೆಗೆಯಿರಿ. ಬೇರೆ ಏನಾದರೂ ಹುಡುಕಿರಿ. ಎಂಥದ್ದಿದು?

ಶ್ರೀ ಆರ್.ವಿ. ದೇಶಪಾಂಡೆ : ಅವರು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಅಲ್ಲ ಅಲ್ಲ. ವಿಷಯ ನಿಮ್ಮದು ಹೇಳಿ. ಅದನ್ನಿಟ್ಟುಕೊಂಡು ಹೀಗೆ ಹೇಳಿದರು, ಕೇಳಿದರು ಅಂದರೆ ಹೇಗೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಕಡೆ ಇರತಕ್ಕವರು ಯಾರೂ ಆ ಕಡೆ ಇರತಕ್ಕ ಸದಸ್ಯರಿಗೆ ಪಾಠ ಒಪ್ಪಿಸಬೇಕಾಗಿಲ್ಲ. ನಾವೇನಾದರೂ ಪಾಠ ಒಪ್ಪಿಸಬೇಕಾಗಿದ್ದರೆ ತಮ್ಮ ಮೂಲಕ ರಾಜ್ಯದ ಜನತೆಗೆ ಒಪ್ಪಿಸಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ನಮ್ಮ ನಾಯಕರು ಮಾತನಾಡುವುದಕ್ಕೆ ಅವಕಾಶ ಮಾಡಿಸಿಕೊಡಬೇಕು ಎಂದು ತಮ್ಮನ್ನು ನಾನು ವಿನಂತಿ ಮಾಡುತ್ತೇನೆ. ಅವರಿಗೆ ಯಾರಿಗೂ ಪಾಠ ಹೇಳಿಕೊಡಬೇಕಾಗಿಲ್ಲ. ಆ ಕಡೆ ಇರುವವರಿಗೆ ನಾವು ಪಾಠ ಒಪ್ಪಿಸಬೇಕಾಗಿಲ್ಲ. ಸುಮ್ಮನೆ ಏತಕ್ಕೆ?

ಶ್ರೀ ಆರ್. ದಯಾನಂದರಾವ್ : ತಮಗೆ ಗೊತ್ತಾಗಿರುವುದು ಹೇಳಿ ಸ್ವಾಮಿ. ಅವರು ಇವರು ಹೇಳಿರುವುದು ಬೇಕಾಗಿಲ್ಲ. ಗೊತ್ತಿದೆ, ನಾವು ನೋಡಿದ್ದೇವೆ. ನೀವು ಮಾಡುವ ಆಪಾದನೇ ಏನಿದೆ ಅದನ್ನು ಮಾಡಿ.

ಶ್ರೀ ಸಿ. ಬೈರೇಗೌಡ : ಅದೆಲ್ಲಾ ಹಳೇ ಪಾಠ ಲೆಕ್ಕಕ್ಕೆ ಬರೆದು ಆಗಿಹೋಗಿದೆ. ನಿಮ್ಮ ಪಾಠ ಹೊಸದು ಬರುತ್ತಿದೆಯಲ್ಲ ಅದರಲ್ಲಿ ಹಳೆಯದೆಲ್ಲಾ ಜೀರೋ.

ಶ್ರೀ ಆರ್. ದಯಾನಂದರಾವ್ : ತಾವು ಮಾಡಿರುವುದೆಲ್ಲಾ ಆಚೆ ಬರಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಉದಯವಾಣಿ ಪತ್ರಿಕೆಯಲ್ಲಿ "ಕಾಂಗ್ರೆ ಸುರಕ್ಷತೆಗಾಗಿ ಬಂಗಾರಪ್ಪನವರ ನಾಯಕತ್ವ ಹೋಗಲೇಬೇಕು" ಎಂದು ಹೇಳಿಕೆ ಬಂದಿದೆ. ಇದು ನನ್ನ ಹೇಳಿಕೆ ಅಲ್ಲ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸದಸ್ಯರಾಗಿರುವವರು ಹೇಳಿರುವುದು. ಹೆಗಡೆ ಸರ್ಕಾರಕ್ಕಿಂತ.....

ಶ್ರೀ ಕಾಗೋಡು ತಿಮ್ಮಪ್ಪ : ಯಾರದು ಸ್ಟೇಟ್‌ಮೆಂಟ್?

ಶ್ರೀ ಡಿ.ಬಿ. ಚಂದ್ರೇಗೌಡ : ಕಾರವಾರದ ಕಾಂಗೆ, ಶಾಸಕ ರಾಣೆ.

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲಿದೆಯಾ? ಅವರು ಬರೆದುಕೊಟ್ಟಿದ್ದಾರಾ

ಶ್ರೀ ಆರ್.ವಿ. ದೇಶಪಾಂಡೆ : ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಪೇಪರ್‌ನಲ್ಲಿರುವುದು ಹೇಳುತ್ತಿದ್ದಾರೆ. ಆರ್.ವಿ. ದೇಶಪಾಂಡೆ : ಪತ್ರಿಕೆಯಲ್ಲಿ ನಿಮ್ಮ ಪರವಾಗಿ ಬಂದರೆ ಸತ್ಯ, ನಿಮ್ಮ ವಿರುದ್ಧ ಬಂದರೆ ಅಸತ್ಯ. ಪತ್ರಿಕೆಯಲ್ಲಿ ಕೊಟ್ಟಿದ್ದೆಲ್ಲಾ ಸುಳ್ಳೇ ಹಾಗಾದರೆ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅವಸರ ಏತಕ್ಕೆ? ಎಲ್ಲ ಕಡತಗಳು ಇಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾಗೋಡು ತಿಮ್ಮಪ್ಪನವರದು ಏನೂ ತಪ್ಪಿಲ್ಲ. ಆ ಭಾಗದಲ್ಲಿರುವಂಥ ಅನೇಕ ಶಾಸಕರು, ಅನೇಕ ಮಂತ್ರಿಗಳು, ಮಂತ್ರಿಮಂಡಲದ ವಿರುದ್ಧ ಭಾಷಣ ಮಾಡಿರುವುದರಿಂದ, ಹೇಳಿಕೆ ಕೊಟ್ಟಿರುವುದರಿಂದ ಅವರೂ ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ಕನ್‌ಫರ್ಮ್ ಮಾಡಿಕೊಳ್ಳುತ್ತಿದ್ದಾರಷ್ಟೆ. ನೀವು ಗೊಂದಲದಲ್ಲಿದ್ದೀರಿ.

ಆಡಳಿತ ಪಕ್ಷದ ಒಬ್ಬ ಮಾನ್ಯ ಸದಸ್ಯರು : ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿರುವವರು ಅವರು. ಅವರು ಏನು ಹೇಳುತ್ತಾರೆ ಎಂಬುದನ್ನು ಹೇಳಬೇಕು. ಬೇರೆಯವರು ಹೇಳಿದ್ದನ್ನೇ ಏನು ಹೇಳುವುದು? ಮೊದಲು ನಿಮ್ಮದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : "ಹೆಗಡೆ ಸರ್ಕಾರಕ್ಕಿಂತ ಬಂಗಾರಪ್ಪನವರ ಸರ್ಕಾರದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ, ನನ್ನ ಸುದೈವದಿಂದ....." ಅಂದ್ರೆ ನನ್ನದಲ್ಲ... ರಾಣೆಯವರು ಹೇಳುತ್ತಿದ್ದಾರೆ ನನ್ನ ಸುದೈವದಿಂದ ಅವರು ನನಗೆ ಮಂತ್ರಿ ಪದವಿ ನೀಡಲಿಲ್ಲ. "ಹಾಗೇನಾದರೂ ಆಗಿದ್ದರೆ ಅದಕ್ಕೆ ನಾನೂ ಪಾಲುದಾರನಾಗುತ್ತಿದ್ದೆ" ಎಂದು ಕಾರವಾರದ ಕಾಂಗ್ರೆಸ್ ಶಾಸಕರಾದ ಪಿ.ಎಸ್. ರಾಣೆಯವರು ಇಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ ಎಂದು ಇದೆ. ನಂತರ ಪತ್ರಕರ್ತರು ನೀವು ಬಂಗಾರಪ್ಪನವರಿಗೆ ಭ್ರಷ್ಟರು ಎನ್ನುತ್ತಿದ್ದೀರೆ, ಅವರು ನಿಮ್ಮ ನಾಯಕರಲ್ಲವೇ ಎಂದು ಕೇಳಿದಾಗ ನಾನು ಬಂಗಾರಪ್ಪನವರನ್ನು ವೈಯುಕ್ತಿಕವಾಗಿ ಆಪಾದನೆ ಮಾಡುತ್ತಿಲ್ಲ, ಅವರ ಆಡಳಿತ ವೈಖರಿಯನ್ನು ಟೀಕಿಸುತ್ತಿದ್ದೇನೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸುರಕ್ಷಿತವಾಗಿರಬೇಕೆಂದರೆ ಬಂಗಾರಪ್ಪನವರ ನಾಯಕತ್ವ ಹೋಗಲೇಬೇಕು. ವೈಯುಕ್ತಿಕವಾಗಿ ಬಂಗಾರಪ್ಪನವರ ಮೇಲೆ ನನಗೆ ಏನೇನೂ ಇಲ್ಲ ಮುಖ್ಯಮಂತ್ರಿಗಳಾಗಿ ಹೇಗೆ ನಡೆದುಕೊಂಡಿದ್ದಾರೆಂದು ನನಗೆ ಬಹಳ ಮುಖ್ಯವಾದ ವಿಚಾರ. ಮುಂದೆ ಇನ್ನೊಂದು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಶ್ರೀ ಕಾಗೋಡು ತಿಮ್ಮಪ್ಪ : ವಕೀಲಿ ಮಾಡುತ್ತಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ವಕೀಲಾತಿ ಅಲ್ಲ. ನಿಮ್ಮ ಸ್ಥಿತಿ ಹೇಳುತ್ತಿದ್ದೇನೆ. ಭಿನ್ನಮತೀಯರು ಒಂದು ಹೇಳುವುದು, ಶಾಸಕರು ಒಂದು ಹೇಳುವುದು, ನಿಮ್ಮ ಸ್ಥಿತಿಯನ್ನು ಅವಹೋಕಿಸುತ್ತಿದ್ದೇನೆ. ನಿಮ್ಮ ಸ್ಥಿತಿ ನಿಮಗೆ ಗೊತ್ತಾಗುವುದಿಲ್ಲ, ನಿಮ್ಮ ಬೆನ್ನು ನಿಮಗೆ ಕಾಣುವುದಿಲ್ಲ.

Sri B.H. Bōnnikod : These are all admitted facts....

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಬೆನ್ನು ನಿಮಗೆ ಕಾಣುವುದಿಲ್ಲ. ಅದಕ್ಕಾಗಿ ತೋರಿಸುತ್ತಿದ್ದೇನೆ. "ಭ್ರಷ್ಟ ಮಂತ್ರಿಗಳ ಆಡಳಿತದಲ್ಲಿ ತಾನು ಬಚಾವಾಗಿದ್ದೇನೆಂದು ಸಂತಸ ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರೇ ಎಲ್ಲಿಗೆ ಬಂದಿದೆ? ಶಾಸಕರು ಸಾರ್ವಜನಿಕವಾಗಿ ಹೇಳಿಕೆ ಕೊಡುತ್ತಿದ್ದಾರೆ. ಮಂತ್ರಿಗಳು ಸರ್ಕಾರದ ವಿರುದ್ಧ ಹೇಳುತ್ತಿದ್ದಾರೆ. ಭಿನ್ನಮತೀಯರು ಡೆಲ್ಲಿಗೆ ಹೋಗಿ ದೂರು ಹೇಳುತ್ತಿದ್ದಾರೆ. ಇದಕ್ಕಿಂತಾ ಸಂವಿಧಾನಿಕ ಬಿಕ್ಕಟ್ಟು ಆಳುವ ಪಕ್ಷಕ್ಕೆ ಮತ್ತೊಂದು ಇಲ್ಲ ಎಂದು ನನ್ನ ಭಾವನೆ. ನಿಜವಾಗಿಯೂ ನಮ್ಮ ದೇಶದ ವ್ಯವಸ್ಥೆಯಲ್ಲಿ, ಮಾನ್ಯ ಜಯಪ್ರಕಾಶ್ ನಾರಾಯಣ್ರವರು ಹೇಳಿದಂತೆ 'ರೇಟ್ ಟು ರೀಕಾಲ್' ಇದ್ದಿದ್ದರೆ ಇವತ್ತು ನಿಮ್ಮ ಈ ಗುಸುಗುಸು ಇರುತ್ತಿರಲಿಲ್ಲ. ಜನ ವಾಪಸ್ಸು ಕರೆಸುತ್ತಿದ್ದರು. ಆದುದರಿಂದ ರಾಜ್ಯಾಂಗದ ಮುಖ್ಯಸ್ಥರಾಗಿ ಮಾನ್ಯ ರಾಜ್ಯಪಾಲರು ಇದನ್ನು ಗಮನಿಸಬೇಕು. 1989ರ ಚುನಾವಣೆಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದ ಬಗ್ಗೆ ಬೀದಿ ಬೀದಿಯಲ್ಲಿ ಹರಾಜು ಹಾಕಿಬಿಟ್ಟರು. ರೇವಜೀತು ಹಗರಣ, ಭೂಮಿ ಕೊಟ್ಟಿದ್ದಾರೆ, ಎನ್‌ಆರ್‌ಐಗೆ ಮಾರಿಬಿಟ್ಟಿದ್ದೀರಿ. ಎಂದೆಲ್ಲಾ

ಹೇಳಿದ್ದೀರಿ. 1 ಗುಂಟೆ ಭೂಮಿಯನ್ನು ಯಾರಿಗೂ ಕೊಟ್ಟಿಲ್ಲ, ತಾವು ಅದನ್ನು ಹೇಳಿದ್ದೀರಿ. ಜನರನ್ನು ಮತಿಭ್ರಾಂತಿ ಮಾಡಿ ಚುನಾವಣೆಯಲ್ಲಿ ಗೆದ್ದುಬಂದಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಮಾಡಿಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಮಾಡಲಿಲ್ಲ. ನಿಮ್ಮ ಹಾಗೆ Attempt to commit murder ಮಾಡಲಿಲ್ಲ. ಕುಳಿತುಕೊಳ್ಳಿ, ತಮ್ಮದು ಗೊತ್ತಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಹೇಳಿದ ವಿಷಯ ರೆಕಾರ್ಡ್ ಹೋಗಿದೆ. ಏನು ಆಗಿದೆ ಎನ್ನುವುದನ್ನು ತಾವು ದಯವಿಟ್ಟು ಸಭೆಗೆ ತಿಳಿಸಬೇಕು. ಹೇಳಿದ ಮೇಲೆ ಸಾಬೀತುಪಡಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ದಾಖಲೆ ಇಲ್ಲದೆ ಬೇಜವಾಬ್ದಾರಿಯಿಂದ ಹೇಳುತ್ತಿಲ್ಲ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಈಗಲೇ ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ ಎನ್ನುತ್ತಿದ್ದಾರೆ. ಆದರೆ ಸಭೆಯ ನಿಯಮದ ಪ್ರಕಾರ ತಮಗೆ ಅವರು ಮೊದಲು ಆಪಾದನೆಯ ನಕಲನ್ನು ಕೊಡಬೇಕಾಗುತ್ತದೆ. ಆ ನಂತರ ತಾವು ಅವಕಾಶ ಕೊಡಬೇಕಾಗುತ್ತದೆ. ಏನೋ ಉದ್ವೇಗದಲ್ಲಿ ಪ್ರಶ್ನೆ ಹಾಕತಕ್ಕದ್ದು, ಅದಕ್ಕೆ ಉತ್ತರ ಹೇಳತಕ್ಕದ್ದು ಸರಿಯಾದ ಕ್ರಮ ಆಗಲಾರದು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡಾ ಅಧ್ಯಕ್ಷರಾಗಿದ್ದವರು. ಅವರು ಸಾಬೀತುಪಡಿಸಲು ಒಪ್ಪಿಕೊಂಡರೂ ಒಂದು ಕ್ರಮ ಇದೆ. ಅದನ್ನು ಅನುಸರಿಸಿ ಮಾಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರು ಅಪ್ಪಣೆ ಕೊಟ್ಟರೆ ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವೈಯುಕ್ತಿಕವಾಗಿ ಯಾವುದೇ ಶಾಸಕರ ಬಗ್ಗೆ, ಮಂತ್ರಿಗಳ ಬಗ್ಗೆ ಪ್ರಸ್ತಾಪ ಮಾಡಿ ಅವಹೇಳನ ಮಾಡಬೇಕು, ಅವಮಾನ ಮಾಡಬೇಕು ಎಂಬ ಉದ್ದೇಶ ಯಾರಿಗೂ ಇಲ್ಲ. ಆದರೆ ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಅಗತ್ಯ ಬಂದಾಗ ಅನಿವಾರ್ಯ ಆದಾಗ, ತಾವು ಅದನ್ನು ಹೇಳಿರಿ ಎಂದಾಗ ಸದನದಲ್ಲಿ ಇರುವ ಸದಸ್ಯರ ಮೇಲೆ ಆರೋಪ ಮಾಡಿದರೆ ಅದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಇದೆ. ಬಹುಶಃ ಅದಕ್ಕೆ ನೋಟೀಸ್ ಕೊಡುವಂತಹ ಅಗತ್ಯವಿಲ್ಲ. ಅನಿವಾರ್ಯ ಸಮಯದಲ್ಲಿ ಅವಕಾಶ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ತಾವು ಈ ಕಡೆ ಇದ್ದಾಗ ಸಾಕಷ್ಟು ಆಪಾದನೆ ಮಾಡಿದಿರಿ. ಆಗ ಪ್ರತಿಯೊಂದು ಆಪಾದನೆಗೂ ನೋಟೀಸ್ ಕೊಟ್ಟಿದ್ದರೇ? ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ ಅದನ್ನು ಹೇಳಿರಿ.

ಶ್ರೀ ಕೆ.ಹೆಚ್. ರಂಗನಾಥ್ : ಒಂದು ತಪ್ಪಿಗೆ ಇನ್ನೊಂದು ತಪ್ಪು ಮಾಡಿದರೆ ಸರಿಹೋಗುತ್ತದೆಯೇ? ಸಭೆ ಮಾಡಿರತಕ್ಕ ಕ್ರಮ ಇದೆ. ಅದನ್ನು ಪಾಲನೆ ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಬಹಳ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಕೇಳಿದ್ದಾರೆ. ಇಷ್ಟು ಮಾತ್ರ ಹೇಳಿಬಿಡುತ್ತೇನೆ ತಾರೀಖು 25-11-89ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಾಗಮಂಗಲ ತಾ.ಲಾಳನಕೆರೆ ಗ್ರಾಮದಲ್ಲಿ ನಡೆದ ಹಗರಣದಲ್ಲಿ ಈ ಮನೆಯ ಶಾಸಕರಾದ ಎಲ್.ಆರ್. ಶಿವರಾಮೇಗೌಡರು ಮತ್ತು 34 ಜನರ ಮೇಲೆ ಒಂದು ಕೇಸನ್ನು ಏನು ರಿಜಿಸ್ಟರ್ ಮಾಡಿದ್ದಾರೋ ಅದು ಇವತ್ತಿನವರೆಗೂ ಹತ್ತಿರ ಹತ್ತಿರ 2 ವರ್ಷಗಳಾದರೂ ಕೂಡ ಇನ್ನೂ ಛಾರ್ಜ್ ಶೀಟ್ ಏಕೆ ಹಾಕಿಲ್ಲ? ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕೇಸ್ ಹಾಕಿಸಿದವರು ಯಾರು ಎಂದು ಪ್ರೂವ್ ಆಗಬೇಕು. ಈ ಬಗ್ಗೆ ನಾನು ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳಿಗೆ ಬರೆದು ಕೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಾಧಾರಣದವರಿಗಾಗಿದ್ದರೆ ಏನೇನೋ ಆಗುತ್ತಿತ್ತು. ಇದರಲ್ಲಿ ಎರಡೂವರೆ ವರ್ಷಗಳಾಗಿದ್ದರೂ ಏನೂ ಇಲ್ಲ. 'ಎ' ಶೀಟ್ ಕೊಟ್ಟರೋ?, 'ಬಿ' ಶೀಟ್ ಕೊಟ್ಟರೋ?, 'ಸಿ' ಶೀಟ್ ಕೊಟ್ಟರೋ? ಏನಾಗಿದೆ ಈಗ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನು ಆರೋಪ ಮಾಡಿದ್ದಾರೆ, ಅದಕ್ಕೆ ಈಗಲೇ ಹೇಳಿಕೆ ಕೊಡಲೋ ಅಥವಾ ಪ್ರತ್ಯೇಕ ವ್ಯವಸ್ಥೆ ಮಾಡುತ್ತೀರಾ?

ಅಧ್ಯಕ್ಷರು : ಈಗಲೇ ಹೇಳಿಬಿಡಿ.

ಶ್ರೀ ಎಲ್. ಆಲ್. ಶಿವರಾಮೇಗೌಡ : ಈ ವಿಚಾರದಲ್ಲಿ ಅವರು Attemptt to murder ಎಂದು ಆರೋಪ ಮಾಡಿದ್ದಾರೆ. ಚುನಾವಣೆ ನಡೆಯುತ್ತಿದ್ದಂತಹ ಕಾಲದಲ್ಲಿ ಇನ್ನು 2 ದಿವಸದಲ್ಲಿ ಎಣಿಕೆ ಆಗತಕ್ಕಂತಹ ಸಂದರ್ಭ ಇತ್ತು. ಆ ಸಂದರ್ಭದಲ್ಲಿ ಏನು ವಿರೋಧ ಪಕ್ಷದ ನಾಯಕರು ಇದ್ದಾರೋ ಅವರ ಪಕ್ಷದ ಮುಖಂಡರೇ ನನ್ನ ಊರಿಗೆ ಬಂದು ನನ್ನ ಮೇಲೆ ಗಲಾಟೆ ಮಾಡಿಸಬೇಕೆಂದು ಪ್ರಯತ್ನಪಟ್ಟಾಗ ಗಲಾಟೆ ಆಯಿತು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಆ ಸಂದರ್ಭದಲ್ಲಿ ಪೊಲೀಸರಿಗೂ ಮತ್ತು ಅಲ್ಲಿ ಇದ್ದ ಮಂಡ್ಯಾ ಜಿಲ್ಲಾ ಸೂಪರಿಂಟೆಂಡೆಂಟ್‌ಗೂ ನನಗೂ ವಾದ ವಿವಾದ ನಡೆಯಿತು. ಆ ಸಂದರ್ಭದಲ್ಲಿ ಅವರೆಲ್ಲರೂ ಕುಮ್ಮಕ್ಕು ಮಾಡಿ, ಹಿಂದೆ ನಮ್ಮ ತಾಲ್ಲೂಕಿನಲ್ಲಿ ಯಾರು ಅಧಿಕಾರ ರೂಢರಾಗಿದ್ದರೋ ಅವರೆಲ್ಲರಿಗೂ ಕುಮ್ಮಕ್ಕು ಮಾಡಿ ಶಿವರಾಮೇಗೌಡರನ್ನು ಇನ್‌ವಾಲ್ವ್ ಮಾಡಬೇಕೆಂದು ನನ್ನ ಮೇಲೆ ಕೇಸ್ ಹಾಕಿಸಿದರು. ಆಗ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು, ಗೃಹ ಮಂತ್ರಿಗಳೂ ಆಗಿದ್ದರು. ಈ ಬಗ್ಗೆ ನಾನು ಈ ಸಭೆಯಲ್ಲಿ ಹೇಳಿದ್ದೇನೆ. ತಾವು ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ನನ್ನು ಅಪರಾಧಿ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ವಿರೋಧ ಪಕ್ಷದವರು ಎಲ್ಲರೂ ಸೇರಿಕೊಂಡು ಈ ಕೆಲಸ ಮಾಡಿದ್ದಾರೆ. ಇದರಿಂದ ನನ್ನನ್ನು ವಿಮುಕ್ತನನ್ನಾಗಿ ಮಾಡಬೇಕು, ಇದರಲ್ಲಿ ಯಾರು ಸೇರಿದ್ದಾರೆನ್ನುವುದನ್ನು ಬಯಲಿಗೆಳೆಯಬೇಕು. ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಈ ಸದನದಲ್ಲಿ ಹೇಳಿದ್ದೇನೆ. ಅದು ರೆಕಾರ್ಡ್‌ನಲ್ಲಿದೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ವಿರೋಧಪಕ್ಷದವರೆಲ್ಲರೂ ಸೇರಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಆ ಪ್ರಶ್ನೆಯನ್ನು ಎತ್ತಲೇ ಇಲ್ಲ, ಇದೊಂದು ಕಂಪ್ಲೈಂಟ್ ಆಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡ : ಗೃಹ ಇಲಾಖೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಅದು ರೆಕಾರ್ಡ್‌ನಲ್ಲಿದೆ. ಈ ಲಾಳನಕೆರೆ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಗೃಹಸಚಿವರಿಗೆ ಒಂದು ಪತ್ರ ಬರೆದಿದ್ದೇನೆ. ನನ್ನ ಊರಿನಲ್ಲಿ ನಡೆದಿರತಕ್ಕದ್ದನ್ನು ರಾಜಕೀಯ ಗಲಭೆ ಮಾಡಿ ನನಗೆ ಕೆಟ್ಟ ಹೆಸರು ತರಬೇಕೆಂದು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಜಿಲ್ಲೆಯ ಪೊಲೀಸ್ ಅಧಿಕಾರಿಗಳನ್ನು ಬಿಟ್ಟು ಬೇರೆ ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಂದ ಪರಿಶೀಲನೆ ಮಾಡಿಸಿ ಸತ್ಯಾಂಶವನ್ನು ಹೊರಗೆಡವಬೇಕೆಂದು ನಾನು ವಿನಂತಿ ಮಾಡಿದ್ದೇನೆ. ಅದಕ್ಕೆ ಅಂದಿನ ಮುಖ್ಯಮಂತ್ರಿಗಳು ಸಂಬಂಧಪಟ್ಟವರಿಗೆ ಆದೇಶ ಕೊಟ್ಟು ಅದನ್ನು ಪರಿಶೀಲನೆ ಮಾಡುವುದಕ್ಕೆ ಬರೆದಿದ್ದಾರೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ, ಇವತ್ತು ತಾವು ಆದೇಶ ಕೊಡಿ. ಅದಕ್ಕೆ ಒಂದು

ಕಮಿಟಿಯನ್ನು ಮಾಡಿ ಎನ್‌ಕ್ವಾಯರಿ ಮಾಡಿಸಿ ಅದರಲ್ಲಿ ನನ್ನದು ಏನಾದರೂ ತಪ್ಪಿದ್ದರೆ ತಾವು ಏನು ಹೇಳುತ್ತಿರೋ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಇಂತಹ ಒಂದು ಸುಳ್ಳು ಆರೋಪವನ್ನು ಒಬ್ಬ ಯುವ ಶಾಸಕನ ಮೇಲೆ ಹೊರಿಸುವುದು ಸರಿಯಲ್ಲ. ಇಲ್ಲಿ ನಾನು ವಿರೋಧ ಮಾಡುತ್ತೇನೆ ಎನ್ನುವ ಕಾರಣಕ್ಕೆ ಈ ರೀತಿ ಮಾಡತಕ್ಕದ್ದು ಸರಿಯಾದುದಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮೇಜು ಬಡಿಯುವಿರಂತೆ ಇನ್ನೂ ಬಹಳ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಯಾರದು? ಯಾವ ರೆಕಾರ್ಡ್ ಎನ್ನುವುದು ಗೊತ್ತಿದೆ, ತಾವು ಕುಳಿತುಕೊಳ್ಳಿ.ನನ್ನನ್ನು ಏನು ಕೇಳುತ್ತೀರಿ ಸ್ವಾಮಿ? ನಾನು ಕೇಳುವುದು ಇಷ್ಟೆ..

(ಗೊಂದಲ)

ಅಧ್ಯಕ್ಷರು ; ಮಾನ್ಯ ಸದಸ್ಯರಾದ ಕರಿಯಣ್ಣನವರು ತಾವು ಏನು ಹೇಳುತ್ತೀರಿ ಅದನ್ನು ಹೇಳಿ.

ಶ್ರೀ ಕರಿಯಣ್ಣ ; ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಪ್ರಾಮುಖ್ಯವಾದ ಹುದ್ದೆಗಳಲ್ಲಿದ್ದವರು. ಅವರು ಈ ಸಭೆಯ ಅಧ್ಯಕ್ಷರಾಗಿದ್ದವರು. ಮಂತ್ರಿಗಳಾಗಿದ್ದವರು. ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಾಗಿದ್ದವರು. ಅವರು ಎಲ್ಲ ಪದವಿಗಳಲ್ಲೂ ಕೆಲಸ ಮಾಡಿದ್ದಾರೆ. ಅಂತಹವರು ನಿಮ್ಮದ್ದೆಲ್ಲರದು ಗೊತ್ತು ಎಂದು ಹೇಳುವುದಾದರೆ, ನಮ್ಮದು ಎಲ್ಲರದು ಏನು ಗೊತ್ತು ಅವರಿಗೆ?

ಅಧ್ಯಕ್ಷರು ; ಮಾನ್ಯ ವಿರೋಧ ಪಕ್ಷದ ನಾಯಕರು 'ಎಲ್ಲ ಗೊತ್ತೆಂದು' ಹೇಳಬೇಡಿ ಇನ್ನು ಮೇಲೆ.'

ಶ್ರೀ ಗೋಪಾಲ ಮುಕುಂದ ಕಾನಡೆ ; ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಬೇಕಾದಷ್ಟು ಅಧಿಕಾರವಿದೆ. ಅವರು ನನಗೆ ಎಲ್ಲರದು ಗುರುತು ಅಂದರೇನು?

ಅಧ್ಯಕ್ಷರು ; ಅದು ಮುಗಿದು ಹೋಯಿತಲ್ಲ;

ಶ್ರೀ ಗೋಪಾಲ ಮುಕುಂದ ಕಾನಡೆ;ಮತ್ತೊಂದು ವಿಚಾರವನ್ನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರು ನಮ್ಮ ಕಡೆ ಕೈಮಾಡಿ ನೀವು ಕುಳಿತುಕೊಳ್ಳಿ ಎಂದು ಹೇಳುವ ಅಧಿಕಾರ ಅವರಿಗೆ ಇಲ್ಲ. ಅವರು ವಿರೋಧಪಕ್ಷದ ನಾಯಕರಾಗಿರಬಹುದು.ನಾವು ಶಾಸಕರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ ; ಮಾನ್ಯ ಅಧ್ಯಕ್ಷರೆ,ಈ ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯಾಗಿದೆ. ಅದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ವಾದವನ್ನು ಮಂಡಿಸುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಇಲ್ಲವೆಂದು ಯಾರು ಹೇಳಿದರು?

ಶ್ರೀ ವಾಟಾಳ್ ನಾಗರಾಜ್ ; ಇಲ್ಲವೆಂದು ಹೇಳಿದವರು ಯಾರೆಂದು ಜಗತ್ತಿಗೆ ಗೊತ್ತಾಗುತ್ತಿದೆ. ಅವರು ಮಾತನಾಡುವುದಕ್ಕೆ ಎಷ್ಟು ನಿಮಿಷ ಅವಕಾಶ ಮಾಡಿಕೊಟ್ಟಿದ್ದೀರಿ? ನಿಮಗೆ ಅವರು ಹೇಳುವುದನ್ನು ಕೇಳುವುದಕ್ಕೆ ತಾಳ್ಮೆ ಇಲ್ಲ. ಅದಕ್ಕೆ ವಿರುದ್ಧವಾಗಿ ಹೇಳುವುದಕ್ಕೆ ನಿಮಗೂ ಅವಕಾಶ ಇದೆ. ಆದರೆ ನೀವು ಪದೇ ಪದೇ ಎದ್ದು ನಿಲ್ಲುತ್ತಿದ್ದರೆ ಇದು ಸರಿಯಾದ ನೀತಿಯಲ್ಲ. ಇದು ಒಳ್ಳೆಯ ಸಂಪ್ರದಾಯವಲ್ಲ.

ಅವರು ಹೇಳುವಾಗ ಮಧ್ಯೆ ಮಧ್ಯೆ ಎದ್ದು ನಿಲ್ಲುತ್ತೀರಿ. ವಿರೋಧ ಪಕ್ಷದ ನಾಯಕರು ಹೇಳುವುದನ್ನು ಹೇಳಲೇಬೇಕಾಗುತ್ತದೆ. ಅವರು ಹೇಳುವುದನ್ನು ಹೇಳುವುದಕ್ಕೆ ದಯವಿಟು ಮೊದಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈ ಮಧ್ಯೆ ನೀವು ಕುಳಿತುಕೊಂಡು ಬಿಡಿ.

ಶ್ರೀ ವಾಟಾಳ್ ನಾಗರಾಜ್: ತಾವು ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದರೋ ಇಲ್ಲವೋ?

ಅಧ್ಯಕ್ಷರು : ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್; ನೀವು ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದೀರಿ. ಆಮೇಲೆ ಕುಳಿತುಕೊಂಡು ಬಿಡಿಯೆಂದು ಹೇಳುತ್ತೀರಿ, ಇದೇನು ಸ್ವಾಮಿ?

ಅಧ್ಯಕ್ಷರು ; ನೀವು ಹೇಳಿದ್ದನ್ನು ಹೇಳಿ ಆಯಿತಲ್ಲ;

ಶ್ರೀ ವಾಟಾಳ್ ನಾಗರಾಜ್; ತಾವು ಒಂದು ಸಾರಿ ಮಾತನಾಡುವುದಕ್ಕೆ ಕರೆಯುತ್ತೀರಿ, ಆಮೇಲೆ ಕುಳಿತುಕೊಳ್ಳಿಯೆಂದು ಹೇಳುತ್ತೀರಿ. ಇದಕ್ಕೆ ಅವರು ಕೈ ಚಪ್ಪಾಳೆ ಹೊಡೆಯುತ್ತಾರೆ. ಇದೇನು ದೊಂಬರಾಟ ಕೆಟ್ಟು ಹೋಯಿತೆ?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು, ಅವರ ಭಾಷಣವನ್ನು ಅವರದೇ ಆದ ಧಾಟಿಯಲ್ಲಿ ಹೇಳುವುದಕ್ಕೆ ಮಾನ್ಯ ಸದಸ್ಯರು ಎಲ್ಲರೂ ಅವಕಾಶ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ತಾವು ಅಡ್ಡಿ ಮಾಡುತ್ತಿದ್ದೀರಾ,

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ. ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿ ಮಾತನಾಡುವಂತಹ ಸಮಯದಲ್ಲಿ ನಮ್ಮ ಹತ್ತಿರ ಏನು ದಾಖಲೆಗಳು ಇವೆ, ನಮ್ಮ ಕಿವಿಗೆ ಏನು ವಿಷಯಗಳು ಬಿದ್ದಿವೆ, ಸರ್ಕಾರದ ಬಗ್ಗೆ ಆರೋಪಗಳು ಏನಿವೆ ಅವುಗಳನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅವುಗಳಿಗೆ ಸಾಕ್ಷಾಧಾರಗಳು ಇಲ್ಲದಿದ್ದರೆ ತಾವು ಉತ್ತರ ಕೊಡುವ ಸಂದರ್ಭದಲ್ಲಿ ಇವು ಸತ್ಯಕ್ಕೆ ದೂರವಾದವು ಎಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಬಿಚ್ಚು ಮನಸ್ಸಿನಿಂದ ಚರ್ಚೆಯಾಗುವ ಸಂದರ್ಭದಲ್ಲಿ ರಾಜ್ಯದ ಜನರ, ರೈತರ ಹಿತದೃಷ್ಟಿಯಿಂದ ಹೇಳುತ್ತಿರುವಾಗ ಕ್ಷಣ ಕ್ಷಣದಲ್ಲೂ ಅಡ್ಡಿ ಮಾಡುವುದಾದರೆ ಬಹುಶಃ ನಾವು ಕೆಲಸ ಮಾಡುವುದಕ್ಕೆ ಕಷ್ಟವಾಗಬಹುದು. ಅದಕ್ಕೆ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದಾದದ್ದು ಏನೆಂದರೆ ಬಹುಶಃ ಈ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಇನ್ನೂ ಮೂರು ದಿವಸ ಆಗಬಹುದು. ಏಕೆಂದರೆ, ಅವರು ಎದ್ದು ನಿಂತಾಗಲೆಲ್ಲ ಅವರ ಪರವಾಗಿ ವಾದ ಮಾಡುವುದಕ್ಕೆ ಎದ್ದುನಿಂತುಕೊಳ್ಳುವವರು ನಾಲ್ಕೇ ಜನ. ಐದನೆಯವರು ಇಲ್ಲ.

ಅಧ್ಯಕ್ಷರು : ಸ್ವಾಮಿರಾವ್......

ಶ್ರೀ ಗೋಪಾಲ ಮುಕುಂದ ಕಾನಡೆ : ನಾವೆಲ್ಲರೂ ಎದ್ದರೆ ಶ್ರೀ ಯಡಿಯೂರಪ್ಪನವರು ಇಲ್ಲಿ ಉಳಿಯುತ್ತಾರೋ? ಈ ಸದನದಲ್ಲಿ ನಾವು ನಾಲ್ಕು ಜನ ಈ ಕಡೆಯಿಂದ ಮಾತನಾಡುವವರು ಇದ್ದೇವೆ ಎಂದು ಶ್ರೀ ಯಡಿಯೂರಪ್ಪನವರು ಹೇಳಿದರು. ನಾವು ನಾಲ್ಕು ಜನ ಮಾತನಾಡಿದ್ದಕ್ಕೇ ಇಷ್ಟು ಆಗುತ್ತದೆ. ಇನ್ನು ನಾವು 180 ಜನ ಎದ್ದರೆ ಯಡಿಯೂರಪ್ಪನವರು ಇಲ್ಲಿ ಇರುತ್ತಾರೆಯೇ? ದಯವಿಟ್ಟು ನಮ್ಮನ್ನು ಮೈಮೇಲೆ ಹಾಕಿಕೊಳ್ಳಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಅಪಾಯಕಾರಿಯಾದ ಹೇಳಿಕೆ. ಇದು ಗೂಂಡಾಗಿರಿ ಏನು? ಇದೇನು ಹುಡುಗಾಟವೇ? ಇದು ಅವಿವೇಕದ ಪರಮಾವಧಿ. 180 ಜನ ಎದ್ದರೆ ಯಡಿಯೂರಪ್ಪನವರನ್ನು ಉಳಿಸುತ್ತೇವೆಯೇ ಎಂದು ಹೆದರಿಸುತ್ತಿದ್ದಾರೆಯೇ ಇವರು?

(ಗೊಂದಲ)

ಅಧ್ಯಕ್ಷರು : ನನ್ನ ರೂಲಿಂಗ್ ಬೇಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜೀವ್ ಗಾಂಧಿಯವರ ಹತ್ಯೆ ಆಗದಿದ್ದರೆ ಇವರ ಅಡ್ರೆಸ್ ಇರುತ್ತಿರಲಿಲ್ಲ. ಇಲ್ಲಿ ನಾವು ಅವಿಶ್ವಾಸ ನಿರ್ಣಯ ಪ್ರಸ್ತಾಪ ಮಾಡುವಂಥ ಅವಶ್ಯಕತೆಯೂ ಬರುತ್ತಿರಲಿಲ್ಲ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ....

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಎದ್ದುನಿಂತರೆ ಯಡಿಯೂರಪ್ಪನವರು ಉಳಿಯುತ್ತಾರೆಯೇ ಎಂಬ ಮಾತನ್ನು ಅವರು ಆಡಿದ್ದಾರೆ. ಅದನ್ನು ಕಡತದಿಂದ ತಾವು ತೆಗೆದುಹಾಕಬೇಕು. ದಯವಿಟ್ಟು ಅವರು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷಕರು : ಶ್ರೀ ಈಶ್ವರಪ್ಪನವರೇ, ಕಾನಡೆಯವರು ಹೇಳಿದ್ದೂ ರೆಕಾರ್ಡಗೆ ಹೋಗಿಲ್ಲ, ನೀವು ಹೇಳಿದ್ದೂ ರೆಕಾರ್ಡಿಗೆ ಹೋಗಿಲ್ಲ....

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಯಾರದ್ದೂ ಚಾರಿತ್ರ್ಯ ಹರಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ, ಯಾರದ್ದೂ ಚಾರಿತ್ರ್ಯ ಹರಣ ಮಾಡಿದವನೂ ಅಲ್ಲ.

ಶ್ರೀ ಬಿ. ಸ್ವಾಮಿರಾವ್ : ಮಾನ್ಯ ಶ್ರೀ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರು ಹೌದೇ ಅಲ್ಲವೇ ಎನ್ನತಕ್ಕಂಥ ಸಂಶಯ ನನಗೆ ಬಂದಿದೆ. ಏಕೆಂದರೆ, ಅವರು ಹೇಳಿದ ಪ್ರಕಾರ ಪತ್ರಿಕೆಯಲ್ಲಿ ಬಂದಿದ್ದೆಲ್ಲ ನಿಜ ಎನ್ನುವುದಾದಲೆ, ಈಗ ವಿರೋಧ ಪಕ್ಷದ ಸ್ಥಾನಕ್ಕೆ ಐದನೆ ಒಂದು ಭಾಗ ಇರಬೇಕಾಗಿತ್ತು, ಅಷ್ಟು ಸಂಖ್ಯೆಯಲ್ಲಿ ಅವರು ಇಲ್ಲವೆಂದು ನನಗನ್ನಿಸುತ್ತೆ. ಮತ್ತು ಪತ್ರಿಕೆಗಳ ಪ್ರಕಾರ ಕೂಡ ಅವರು ವಿರೋಧ ಪಕ್ಷದ ನಾಯಕರು ಅಗುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಮಾನ್ಯ ಅಧ್ಯಕ್ಷರು ಒಂದು ತಿಳುವಳಿಕೆ ಅಥವಾ ಆದೇಶವನ್ನು ಕೊಡಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈ ಅಧಿಕಾರ ನಿಮಗೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ವಕಾಲತ್ತು ಬೇಡ.

ಶ್ರೀ ವಾಟಾಳ್ ನಾಗರಾಜ್ : ಇದು ಶ್ರೀ ಸ್ವಾಮಿರಾವ್ ಅವರಿಂದ ತಿಳುವಳಿಕೆ ತೆಗೆದುಕೊಳ್ಳಬೇಕೇ?

ಶ್ರೀ ಡಿ.ಬಿ. ಚಂದ್ರೇಗೌಡ : ಅದು ಅಧ್ಯಕ್ಷರಿಗೆ ಬಿಟ್ಟಿದ್ದು, ಅವರು ನಿರ್ಣಯ ಮಾಡುತ್ತಾರೆ. ನಾನು ಯಾವುದೇ ಸದಸ್ಯರ ಚಾರಿತ್ರ್ಯ ಹರಣ ಮಾಡಲಿಕ್ಕೆ ಈ ಸದನವನ್ನು ಅದಕ್ಕಾಗಿ ಎಂದೆಂದೂ ಬಳಸಿಕೊಂಡಿಲ್ಲ, ಬಳಸಿಕೊಳ್ಳುವುದೂ ಇಲ್ಲ. ಆದರೆ ಪ್ರಶ್ನೆ ಏನು ಬಂತು? ಶ್ರೀ ಎಲ್.ಆರ್. ಶಿವರಾಮೇಗೌಡರು ಇದನ್ನು ಹೇಳಲೇಬೇಕು ಎಂದು ಹಠ ಮಾಡಿದ್ದರಿಂದ ನಾನು ಹೇಳಿದೆ. ತಾರೀಖು 25.11.89ರಲ್ಲಿ

ಎಫ್.ಐ.ಆರ್. ಹಾಕಿದ್ದಾರೆ. ಅದರಲ್ಲಿ ಇವರೂ ಒಬ್ಬರು. ಅದರಲ್ಲಿ ಇವರ ಹೆಸರೂ ಇದೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ತಾವೇ ಚರ್ಚೆ ಅನಾವಶ್ಯಕ ಎಂದು ಹೇಳಿದಿರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇದರಲ್ಲಿ ಎ.ಬಿ.ಸಿ. ಎಂದು ಮೂರು ಟೈಪ್ ಇದೆ....

ಅಧ್ಯಕ್ಷರು : ಅದು ಎ.ಬಿ.ಸಿ. ಆಗುತ್ತದೆ, ಮತ್ತೊಂದು ಆಗುತ್ತದೆ ಎನ್ನುವುದು ಬೇಡ. ಇದು ಬರೇ ಫಸ್ಟ್ ಇನ್‌ಫರ್ಮೇಷನ್ ರಿಪೋರ್ಟ್. ಇದನ್ನು ಇಲ್ಲಿಗೇ ಬಿಡಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಶಿವರಾಮೇಗೌಡರ ಮೇಲೆ ಇಂತಹ ಅಪಾದನೆಗಳು ಇವೆ ಎಂದು, ಅಷ್ಟೇ ಹೇಳಿದರು. ಸರ್ಕಾರದಿಂದ ಇದುವರೆಗೂ ಇತ್ಯರ್ಥ ಆಗಲಿಲ್ಲ, ಶಾಸಕರ ಮೇಲೆ ಅಪಾದನೆ ಇರುವಾಗ....

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಶಿವರಾಮೇಗೌಡರ ಮೇಲೆ ಆರೋಪಣೆ ಇತ್ತು. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರು, ಇಂತಹ ಎಫ್.ಐ.ಆರ್. ಇದ್ದಾಗ ಸರ್ಕಾರದಿಂದ ಕ್ರಮ ಆಗಬೇಕು. ಎ.ಬಿ.ಸಿ. ರೀಪೋರ್ಟ್ ಆದರೂ ಹಾಕಿ. ಸರ್ಕಾರದಿಂದ ಯಾವುದೂ ಕ್ರಮ ತೆಗೆದುಕೊಳ್ಳದಿದ್ದರೆ, ಸರ್ಕಾರ ಉದ್ದೇಶಪೂರ್ವಕವಾಗಿ ಇಟ್ಟಿದೆ ಎಂಬ ಸಮಸ್ಯೆ ಬರುತ್ತದೆ. ಅದರ ಸಲುವಾಗಿ ಸರ್ಕಾರದವರು ಕ್ರಮ ತೆಗೆಕೊಳ್ಳಬೇಕು. ಚಾರ್ಜ್‌ಷೀಟ್ ಫೈಲ್ ಮಾಡಬೇಕು. ಆ ಕಂಪ್ಲೆಂಟ್ ಒಮ್ಮೆ ಎಫ್.ಐ.ಆರ್.ಗೆ ಹೋದನಂತರ, ಚಾರ್ಜ್‌ಷೀಟ್ ಫೈಲ್ ಮಾಡುವುದಕ್ಕೆ ಒಂದು ಲಿಮಿಟೇಷನ್ ಇದೆ. ಆ ಲಿಮಿಟೇಷನ್‌ನಲ್ಲಿ ನೀವು ಚಾರ್ಜ್‌ಷೀಟ್ ಫೈಲ್ ಮಾಡಲಿಲ್ಲ ಎಂದರೆ.....

ಅಧ್ಯಕ್ಷರು : ಇನ್ನು ಎರಡು ತಿಂಗಳಾದರೆ, ಈ ಎಫ್.ಐ.ಆರ್.ನ ಎರಡನೆಯ ವಾರ್ಷಿಕೋತ್ಸವ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಸಿ.ಆರ್.ಪಿ.ಸಿ. ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಸರ್ಕಾರ ಯಾವುದಾದರೂ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. It is the responsibility of the Government to take some kind of action on it. Let them say it is a false case. It shows the lethargy of the Govenment.

MR. SPEAKER : Let us go into much more serious issues.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳಿದೆ. ಬಲ ಇಲ್ಲದವರಾಗಿದ್ದರೆ ಮೂರೇ ದಿವಸಗಳಲ್ಲಿ ಚಾರ್ಜ್‌ಷೀಟ್ ಬರುತ್ತಿತ್ತು. ನಾನು ತಮಗೆ ಹೇಳಿದೆ. ನಿಮ್ಮ ಸರ್ಕಾರ ಎರಡು ವರ್ಷಗಳಲ್ಲಿ ಏನು ಮಾಡಿದೆ? 'ಎ' ಷೀಟ್ ಎಂದು ಇದೆ, 'ಬಿ' ಷೀಟ್ ಎಂದು ಇದೆ, 'ಸಿ' ಷೀಟ್ ಎಂದು ಇದೆ. ಯಾವುದಾದರೂ ಮಾಡಿ. ಇದನ್ನು ಹಾಗೆಯೇ ಇಟ್ಟುಕೊಂಡು ಶಾಸಕರು ಎಂದು ಹೇಳಿ, ತೂಗುಕತ್ತಿಯಾಗಿ ಬಳಕೆ ಮಾಡಬೇಡಿ, ಇದ್ದರೆ ನಯವಾಗಿ ವಿಚಾರಣೆಯಾಗಲಿ ಇಲ್ಲದಿದ್ದರೆ ಇಲ್ಲವೆಂದು ಹೇಳಿ. ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡುವಾಗ, ಕಾಂಗ್ರೆಸ್ಸಿನ ಸಹ ಶಾಸಕರದ್ದು ಏನು,

ಕಾಂಗ್ರೆಸ್ಸಿನ ಶಾಸಕರದ್ದು ಏನು, ಮಂತ್ರಿಮಂಡಲದ ಸದಸ್ಯರದ್ದು ಏನು, ಹೊರಗಡೆ ಕಾಂಗ್ರೆಸ್ಸಿನ ಅಧ್ಯಕ್ಷರು ಏನು ಹೇಳಿದ್ದಾರೆ, ಈ ಎಲ್ಲಾ ಸ್ಥಿತಿಗಳನ್ನೂ ಸ್ಥೂಲವಾಗಿ ತಮ್ಮ ಮೂಲಕ, ಈ ಸದನದ ಮೂಲಕ, ಸಾರ್ವಜನಿಕರ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೆ, ಮೊದಲನೇ ಚುನಾವಣೆ ನಡೆದು, 179 ಜನ ಶಾಸಕರನ್ನು ಈ ಶಾಸಕಾಂಗಕ್ಕೆ ಕೊಟ್ಟಿತು. ಅವರು ಏನು ಹೇಳಿದ್ದರು ಎಂಬ ವಿವರಗಳಿಗೆ ನಾನು ಹೋಗುವುದಿಲ್ಲ. ಅವರು ಹೇಳಿದ್ದು ಸರಿಯೋ, ತಪ್ಪೋ, ನೀವು ಹೇಳಿದ್ದೋ ಅಥವಾ ಕೇಂದ್ರದವರು ಹೇಳಿದ್ದೋ ಈ ಪ್ರಶ್ನೆಗಳು ಬರಬಾರದು ಎಂದು ಹೇಳಿ, ಶಾಸನ ಸಭೆಯ ಕಡತದಲ್ಲಿ ಏನಿದೆ ಅಷ್ಟನ್ನೇ ಹೇಳುತ್ತೇನೆ, ಚುನಾವಣೆ ಮುಗಿದ ತಕ್ಷಣವೇ, ಶ್ರೀಮಾನ್ ವೀರೇಂದ್ರಪಾಟೀಲರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡರು. ಅವರು ಅಧಿಕಾರವನ್ನು ವಹಿಸಿಕೊಂಡು ಮೊದಲನೇ ರಾಜ್ಯಪಾಲರ ಭಾಷಣಕ್ಕೆ, 1989ನೇ ಡಿಸೆಂಬರ್‌ನಲ್ಲಿ ಉತ್ತರ ಕೊಟ್ಟರು. ಅವರು ಏನು ಹೇಳಿದರು ಎನ್ನುವುದನ್ನು ಹೇಳುತ್ತೇನೆ. ನಾನು ಇಲ್ಲಿ ಕ್ವೋಟ್ ಮಾಡುತ್ತಿರುವುದು 399 ನೇ ವಾಲ್ಯೂಮ್, 18ನೇ ಡಿಸೆಂಬರ್ 1989. ಅವರು ಈ ರೀತಿ ಹೇಳಿದ್ದಾರೆ. ಆ ಕಡೆ ಇರುವ ಅನೇಕ ಮಾನ್ಯ ಸದಸ್ಯರು 7 ವರ್ಷಗಳ ನಂತರ ಈ ಕಡೆ ಬಂದು ಕುಳಿತಿರುವುದರಿಂದ, ನಮಗೆ ಅನೇಕ ರಚನಾತ್ಮಕ ಸಲಹೆಗಳನ್ನು ಮಾಡುತ್ತಾರೆ, ಬುದ್ಧಿವಾದ ಹೇಳುತ್ತಾರೆ, ಯಾವರೀತಿಯಿಂದ ಕೆಲಸ ಕಾರ್ಯ ಮಾಡಬೇಕೆಂದು ಹೇಳುತ್ತಾರೆ ಮತ್ತು ಹಿಂದಿನ ಆರು-ಆರೂವರೆ ವರ್ಷಗಳಲ್ಲಿ ಏನು ಲೋಪದೋಷಗಳು ಆಗಿವೆ, ಅವುಗಳನ್ನು ಯಾವರೀತಿ ಸರಿ ಮಾಡಬೇಕೆಂದು ಮಾರ್ಗದರ್ಶನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ನನ್ನ ಮಂತ್ರಿಮಂಡಲ ಕೇವಲ 17 ದಿವಸ. ಈ ಮಂತ್ರಿಮಂಡಲ ಅಸ್ತಿತ್ವದಲ್ಲಿ ಬಂದಿದೆ, ಇದು ನುಡಿದಂತೆ ನಡೆಯುತ್ತಿದೆ ಎನ್ನುವ ಭಾವನೆ ಜನರಲ್ಲಿ ಬರಬೇಕಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಈ ಜವಾಬ್ದಾರಿ ಯಾರಿಗೆ ಇತ್ತು. ಶ್ರೀಮಾನ್ ವೀರೇಂದ್ರ ಪಾಟೀಲರು ನಾನು ನುಡಿದಂತೆ ನಡೆಯುತ್ತೇನೆ ಎಂಬ ಆಶ್ವಾಸನೆಯನ್ನು ಜನಕ್ಕೆ ಕೊಡುತ್ತಾ, ಏನು ಹೇಳಿದರು ಎನ್ನುವುದನ್ನು ಹೇಳುತ್ತೇನೆ. ಇದು ಅವರ ಮೊದಲನೇ ಮಾತು. "ಇವತ್ತಿನ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟಿದೆ, ಅದಕ್ಕಾಗಿ ಎಷ್ಟು ಸಾಧ್ಯವಾಗುತ್ತದೋ ಅಷ್ಟು ದುಡ್ಡನ್ನು ಉಳಿಸುವುದಕ್ಕೆ, ವಿನಾಕಾರಣ ಹಣ ಪೋಲಾಗದ ರೀತಿಯಲ್ಲಿ ಕರ್ಚು ಮಾಡುತ್ತಿದ್ದಾರೆ ಎನ್ನುವ ಭಾವನೆ ಜನಸಾಮಾನ್ಯರಲ್ಲಿ ಮೂಡಿಸಬೇಕೆನ್ನುವ ಉದ್ದೇಶದಿಂದ, ಹೆಲಿಕ್ಯಾಪ್ಟರನ್ನು ಮೊದಲು ಮಾರಬೇಕೆಂದು ತೀರ್ಮಾನ ಮಾಡಿದ್ದೇನೆ".

"ಹೆಲಿಕ್ಯಾಪ್ಟರ್‌ನಿಂದ ನಮಗೆ ಹೆಚ್ಚು ಖರ್ಚು ಬರುತ್ತಿದೆ. ಈ ಹೆಲಿಕ್ಯಾಪ್ಟರನ್ನು 86 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮಾನ್ಯ ದೇವರಾಜ ಅರಸು ಸರಕಾರದವರು ಆ ಕಾಲಕ್ಕೆ ತೆಗೆದುಕೊಂಡರು. ಅದರ ಮೇಲೆ ಪ್ರತಿ ವರ್ಷ 27ರಿಂದ 30 ಲಕ್ಷ ರೂಪಾಯಿ ಮೇಂಟೆನೆನ್ಸ್ ಖರ್ಚು ಬರುತ್ತಿದೆ. ಹೆಲಿಕ್ಯಾಪ್ಟರ್‌ನಲ್ಲಿ ಹಾರಾಡಿದರೆ ಒಂದ ಘಂಟೆಗೆ 12 ಸಾವಿರ ರೂಪಾಯಿ ಖರ್ಚು ಬರುತ್ತದೆ. ವರ್ಷಕ್ಕೆ 50ರಿಂದ 60 ಲಕ್ಷ ರೂಪಾಯಿ ಖರ್ಚಾಗುವುದನ್ನು ಮೊದಲು ಉಳಿಸಿ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ".

ಇದು ಮೊದಲನೇ ಅಪ್ಪಣೆ. ಇದು ಕಾಂಗ್ರೆಸ್ ಸರಕಾರದ ಮುಖ್ಯ ಮಂತ್ರಿಯವರು ಈ ಸದನದಲ್ಲಿ ಜವಾಬ್ದಾರಿಯಿಂದ ಹೇಳಿದಂತಹ ಒಂದು ಮಾತು.

(ಸನ್ಮಾನ್ಯ ಶ್ರೀ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ಆ ಹೆಲಿಕ್ಯಾಪ್ಟರ್ ಹಾರಾಟ ನಿಂತಿದೆಯೋ? ಇವತ್ತು ಎಷ್ಟು ಹಾರಾಟವಾಗುತ್ತಿದೆ. ಹಾರಾಟ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಈ ದೇಶದಲ್ಲಿ ಅದರಿಂದ ಎಷ್ಟು ಖರ್ಚಾಗುತ್ತದೆ ಎನ್ನುವುದು ಪ್ರಶ್ನೆ. ನೀವು ಈ ಸದನದಲ್ಲಿ ಹೇಳಿದ್ದೀರಿ ಚುನಾವಣೆ ಆದ ತಕ್ಷಣ ಈ ಸದನದ ಮೂಲಕ ಜನಕ್ಕೆ ಆಶ್ವಾಸನೆ ಕೊಟ್ಟಿದ್ದೀರಿ. ನಾವು ಅದನ್ನು ಮಾರಿಬಿಡುತ್ತೇವೆ. ನೀವು ಖರ್ಚು ಮಾಡುತ್ತಿದ್ದೀರಿ ಎಂದು ಹೇಳಿದ್ದೀರಿ. ಏತಕ್ಕೆ? ಯಾವುದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯ ಇಲ್ಲ, ಅಂತಹ ಮಾತುಗಳು ಶಾಸನಸಭೆಯ ಕಡತಕ್ಕೆ ಏತಕ್ಕೆ ಹೋಗುವುದಕ್ಕೆ ಬಿಡುತ್ತೀರಿ? ಇದರಲ್ಲಿ ಇಡೀ ಪಕ್ಷದ ಜವಾಬ್ದಾರಿ ಇದೆ. ಮುಂದೆ ಈ ರೀತಿ ಹೇಳಿದ್ದಾರೆ. ಇದು ಎರಡನೆಯದು.

"ಮಂತ್ರಿಗಳು ಹೊಸ ಬಂಗಲೆಗಳಿಗೆ ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯವರು ಹಿಂದಿನ ಪರದೆಗಳನ್ನು ತೆಗೆದು ಅಲ್ಲಿ ಹೊಸದನ್ನು ಹಾಕುತ್ತಾರೆ. ಹೊಸದಾಗಿ ಹೋದಾಗ ಎಲ್ಲಾ ಗೋಡೆಗಳಿಗೆ ಬಣ್ಣ ಬಳಿಯಬೇಕು. ಅದಕ್ಕಾಗಿ ಏನೂ ಖರ್ಚು ಮಾಡಬಾರದೆಂದು ನಾನು ಕಟ್ಟಪ್ಪಣೆ ಮಾಡುತ್ತೇನೆ".

ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲರು ಜನರ ಮತ ತೆಗೆದುಕೊಂಡು ಮುಖ್ಯಮಂತ್ರಿಯಾಗಿ ಬಂದಾಗ, ಶಾಸನಸಭೆಯಲ್ಲಿ ಮೊದಲು ಆಡಿದ ಮಾತು ಇದು. ನಾವು ಮಂಡಿಸಿರುವ ಅವಿಶ್ವಾಸ ನಿರ್ಣಯ ಕಾಂಗ್ರೆಸ್ ಸರಕಾರದ ವಿರುದ್ಧ. ಅಂದು ಮುಖ್ಯ ಮಂತ್ರಿಗಳು ಕೊಟ್ಟ ಮಾತು. ಮುಖ್ಯಮಂತ್ರಿಗಳು ಬದಲಾವಣೆ ಆದ ತಕ್ಷಣ ಸರಕಾರ ಬದಲಾವಣೆ ಆಗಿಲ್ಲ, ಅದೇ ಕಾಂಗ್ರೆಸ್ ಸರಕಾರ ಇದೆ, ಅದೇ ಪಕ್ಷ ಇದೆ.

ಶ್ರೀ ಸಿ. ಬೈರೇಗೌಡ : ಪಕ್ಷವೂ ಬದಲಾವಣೆಯಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅದೇ ಪಕ್ಷ, ಕಾಂಗ್ರೆಸ್ ಸರಕಾರ ಇರುವುದು. ಆದುದರಿಂದ ನಾನು ಕೇಳುತ್ತೇನೆ, ಯಾವ ಯಾವ ಮಂತ್ರಿಗಳಿಗೆ ಎಷ್ಟೆಷ್ಟು ನಿಯಂತ್ರಣ ಮಾಡಿರುತ್ತೀರಿ, ಖರ್ಚು ಎಷ್ಟಾಗಿದೆ. ಎಂದು ಈ ಸದನಕ್ಕೆ ಮಾಹಿತಿ ಕೊಡಿ. ಹಿಂದೆ ಸದನದ ಮೂಲಕ ಜನಕ್ಕೆ ಹೇಳಿದ್ದೀರಿ. ಈ ಶಾಸನಸಭೆಯಲ್ಲಿ ಆಡುವ ಮಾತು ಒಂದು, ನಡೆದುಕೊಳ್ಳುವ ರೀತಿ ಮತ್ತೊಂದು. ಮತ್ತೆ ಆಡಳಿತದ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅದನ್ನು ಕ್ವೋಟ್ ಮಾಡುತ್ತೇನೆ. "We have inherited a demoralosed bureaucracy"

ಬಹುಶಃ ಅವತ್ತು ಭಾಷೆ ಬಳಸುವಾಗ ' ಸ್ವಲ್ಪ ತಪ್ಪು ಮಾಡಿದ್ದಾರೇನೋ ಎಂದು ಅನಿಸುತ್ತದೆ. ಅವರು ಕರೆಕ್ಟ್ ಮಾಡಿಕೊಳ್ಳಬೇಕಾಗಿತ್ತು. we have inherited ಎಂದು ಹೇಳಿದ್ದಾರೆ. ಅದರ ಬದಲು we have created ಎಂದು ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮುಂದೆ ಹೇಳುತ್ತೇನೆ. ಅದು ಆದಮೇಲೆ ಏನಾಯಿತು ಎಂದು ಹೇಳುತ್ತೇನೆ. ಇದು ವೀರೇಂದ್ರ ಪಾಟೀಲರ ಭಾಷೆ ಇದು, ನನ್ನದಲ್ಲ.

"ಎಲ್ಲರೂ ಭ್ರಷ್ಟರಾಗುತ್ತಿದ್ದಾರೆ; ನಾವೂ ಏತಕ್ಕೆ ಆಗಬಾರದು ಎನ್ನತಕ್ಕಂಥ ಟೆಂಪ್ಟೇಶನ್ ಬೇರೆಯವರಿಗೂ ಬರುತ್ತಿದೆ. ಇವತ್ತು ಆಡಳಿತದ ಬಗ್ಗೆ ಅನೇಕ ಸುಧಾರಣೆಗಳನ್ನು ಜಾರಿಗೆ ತರಬೇಕಾಗಿದೆ. ನಾನು ಮುಖ್ಯಮಂತ್ರಿಯಾಗಿ, ಆಡಳಿತ ಪಕ್ಷದ ನಾಯಕನಾಗಿ ಇವತ್ತು ಸ್ಪಷ್ಟವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಏನೆಂದರೆ, ಆಡಳಿತದಲ್ಲಿರುವಂತಹ ಭ್ರಷ್ಟಾಚಾರವನ್ನು ಪೂರ್ತಿಯಾಗಿ ತೆಗೆದುಹಾಕುತ್ತೇನೆಂದು ಹೇಳುವುದಕ್ಕೆ ಆಗುವುದಿಲ್ಲವಾದರೂ, ಭ್ರಷ್ಟಾಚಾರವನ್ನು ಇಲ್ಲಿಯವರೆಗೆ ಯಾರೂ ಕೂಡಾ

ಸಂಪೂರ್ಣವಾಗಿ ತೊಲಗಿಸುತ್ತೇವೆಂದು ಹೇಳಿಲ್ಲ. ಮತ್ತು ಇಲ್ಲಿಯವರೆಗೂ ಇದನ್ನು ಯಾರೂ ಸಾಧಿಸಿಲ್ಲ. ಬಹಳಮಟ್ಟಿಗೆ ಇದನ್ನು ಕಡಿಮೆ ಮಾಡಬಹುದು. ಇವತ್ತು ಎಷ್ಟರಮಟ್ಟಿಗೆ ಮೇಲೆ ಹೋಗಿದೆಯೋ ಅದನ್ನು ಕಡಿಮೆ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ.

ಇದರ ಬಗ್ಗೆ ಏನು ನಡೆದಿದೆ ಎನ್ನತ್ತಕ್ಕಂಥದ್ದನ್ನು ಮುಂದೆ ನಾನು ಆಡಳಿತದ ಬಗ್ಗೆ ಮಾತನಾಡುವಾಗ ಹೇಳುತ್ತೇನೆ.ಮಾನ್ಯ ಅಧ್ಯಕ್ಷರೆ,ಪುನ; ಏಪ್ರಿಲ್ 1990ಕ್ಕೆ ಅವರು ಮತ್ತೊಂದು ಮಾತನ್ನು ಈ ಸದನದಲ್ಲಿ ಹೇಳಿದ್ದಾರೆ. "ಆಡಳಿತದಲ್ಲಿ ಶಿಥಿಲತೆ ಬರುವುದಕ್ಕೆ ಡಿಮಾರಲೈಸೇಶನ್ ಬರುವುದಕ್ಕೆ ಭ್ರಷಾಚಾರ ತಾಂಡವವಾಡುವುದಕ್ಕೆ ಮುಖ್ಯವಾದ ಕಾರಣ, ರಾಜಕೀಯ ಆಡಳಿತದಲ್ಲಿ ಪ್ರವೇಶ,ಪೊಲಿಟಿಕಲ್ ಇಂಟರ್‌ಫಿಯರ್‌ನ್ಸ್, ಇದರಿಂದ ದುರ್ದೈವ;ಕೆಲವು ದಿವಸಗಳವರೆಗೆ ಈ ವರ್ಗಾವಣೆ ದೊಡ್ಡ ಇಂಡಸ್ಟ್ರಿಯಾಗಿ ಕರ್ನಾಟಕ ರಾಜ್ಯದಲ್ಲಿ ಬೆಳೆಯಿತು. ಇದು ಬೆಳೆಯಬಾರದು" ಇದು ಒಂದು ರೀತಿಯ Gospel truth ಎಂದು ಏನು ಹೇಳುತ್ತೇನೆ ಅಂತಹ ಮಾತನ್ನು ಹೇಳಿ,ಮುಂದೆ ನಮ್ಮ ಸರ್ಕಾರ ಏನು ಮಾಡಬಹುದು ಎಂದು ವೀರೇಂದ್ರಪಾಟೀಲರು ಊಹೆ ಮಾಡಿ ಹೇಳಿದರು. ಇವತ್ತು ಆ ಸತ್ಯವನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಅದು ಹೇಗೆ ಎನ್ನತಕ್ಕಂಥಾದ್ದನ್ನು ನಾನು ವಿವರವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ,ಸರ್ಕಾರದ ಆಡಳಿತ ವ್ಯವಸ್ಥೆಯ ಬಗ್ಗೆ ಹೇಳುವುದಕ್ಕೆ ಮುನ್ನ ಅವರು ಈ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ 1989ರಲ್ಲಿ ಯಾವ ಭಾಷೆಯನ್ನು ಹೊರಗಡೆ ಆಡಿದ್ದರೋ,ಆ ಭಾಷೆಯನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಈ ಸದನದಲ್ಲಿ ಏನು ಹೇಳಿದರೋ ಅದಕ್ಕೆ ಸಂಪೂರ್ಣವಾಗಿ ತಿಲಾಂಜಲಿ ಕೊಟ್ಟು, ಆಡಳಿತ ವ್ಯವಸ್ಥೆಯನ್ನು ಹೇಗೆ ಕೊಡುತ್ತಿದ್ದೀರಿ, ಅಧಿಕಾರ ವ್ಯವಸ್ಥೆ ಹೇಗಾಗಿದೆ, ಹೆಲಿಕ್ಯಾಪ್ಟರ್ ಹೇಗೆ ಓಡಾತುತ್ತಿದೆ. ಬಂಗಲೆಗಳಿಗೆ ಎಷ್ಟು ದುಡ್ಡು ಖರ್ಚಾಗಿದೆ, ಎಷ್ಟು ಹೊಸ ಕಾರುಗಳನ್ನು ಕೊಂಡಿದ್ದೀರಿ, ಅವನ್ನೆಲ್ಲಾ ಈ ಸದನಕ್ಕೆ ತಾವು ತಿಳಿ ಹೇಳಬೇಕು. ಒಂದು ವೇಳೆ ನಾವೇನಾದರೂ ಇಂತಹ ತಪ್ಪು ಮಾಹಿತಿ ಕೊಡುವುದಕ್ಕೆ ಪ್ರಯತ್ನಮಾಡಿದ್ದರೆ ಸರಿಪಡಿಸಿಕೊಳ್ಳುತ್ತೇವೆ. ಆದರೆ ಹೀಗೆ ಮಾತು ಕೊಟು ಅಧಿಕಾರಕ್ಕೆ ಬಂದ ಮೇಲೆ ನೀವು ಅದನ್ನು ಸರಿಪಡಿಸಲು ಏನಾದರೂ ಪ್ರಯತ್ನ ಮಾಡಿದ್ದೀರಾ? ಅದಾದ ಮೇಲೆ ಲೋಕಸಭಾ ಚುನಾವಣೆ ಆಯಿತು. ಲೋಕಸಭಾ ಚುನಾವಣೆಯಲ್ಲಿ ದುರ್ದೈವದಿಂದ ರಾಜೀವ್ ಗಾಂಧಿಯವರು ಗತಿಸಿ ಹೋದರು. ಅದು ಆಗಬಾರದಿತ್ತು. ಅದು ಈ ದೇಶದ ದುರಂತ. ಅದು ಆಗದೇ ಇದ್ದಿದ್ದರೆ ಫಲಿತಾಂಶ ಏನು ಆಗುತ್ತಿತ್ತು ಎಂದು ಇವತ್ತು ನಾವು ಚರ್ಚೆ ಮಾಡಿ ಪ್ರಯೋಜನವಿಲ್ಲ. ಈ ದೇಶದ ಜನತೆ 179 ಜನ ಸದಸ್ಯರನ್ನು ಕೊಟ್ಟು,ಒಂದು ಸರ್ಕಾರವನ್ನು ಕೊಟ್ಟು ಆಳತಕ್ಕಂಥ ಅವಕಾಶ ನಿರ್ಮಾಣ ಮಾಡಿಕೊಟ್ಟಿತು. ಕೇವಲ 11 ತಿಂಗಳಲ್ಲಿ ನಿಮ್ಮ ಬಗ್ಗೆ ಜನರ ಅಭಿಪ್ರಾಯ ಏನು ಇತ್ತು? ರಾಜೀವ್‌ಗಾಂಧಿಯವರ ಸಾವಿನಿಂದಾಗಿ ಒಂದು ರೀತಿ ಜನರ ಮನಸ್ಸಿನಲ್ಲಿ ಏನು ನೋವು ಉಂಟಾಯಿತು ಆ ನೋವಿಗೆ ಪ್ರತಿಧ್ವನಿಸಿದರೂ ಕೂಡ ನಿಮ್ಮದು ಶೇಕಡಾವಾರು ಸಂಖ್ಯೆಯಲ್ಲಿ 13ರಷ್ಟು ಕಡಿಮೆ ಆಯಿತು. ಸಿಂಪತಿ ಮತ ಬಂದರೂ ಕೂಡ ಕಾಂಗ್ರೆಸ್ ಪಕ್ಷಕ್ಕೆ ಶೇಕಡ 13ರಷ್ಟು ಮತ ಕಡಿಮೆ ಆಯಿತು. ಇದು ಜನಾಭಿಪ್ರಾಯವನ್ನು ಪ್ರತಿನಿಧಿಸುತ್ತದೆ

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ : ನಿಮ್ಮದು ಹೇಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಮೇಲೆ ಅವಿಶ್ವಾಸ ನಿರ್ಣಯ ತನ್ನಿ...

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಸರ್ಕಾರದ ಮೇಲೆ ಜನರಿಗೆ ವಿಶ್ವಾಸ ಇಲ್ಲ ಎನ್ನುವ ಮಾತನ್ನು ಪ್ರತಿಪಾದನೆ ಮಾಡುತ್ತಿದ್ದಾರೆ.

(ಗೊಂದಲ)

ಛೇರ್ಮನ್ : ಮಾನ್ಯ ಪ್ರತಿಪಕ್ಷದನಾಯಕರು ಮಾತನಾಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹೇಳಿದ್ದರಿಂದ ಇನ್ನೂ ಒಂದು ಸೆಂಟೆನ್ಸ್ ಮಾನ್ಯ ವೀರೇಂದ್ರ ಪಾಟೀಲರು ಹೇಳಿದ್ದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ನಾನು ಬಹಳ ಮುಂದಕ್ಕೆ ಹೋಗಬಾರದೆಂದು ಇದ್ದೆ;ಇರಲಿ.

ಶ್ರೀ ಡಿ.ಎ. ಚಿನ್ನಪ್ಪ : ನಮಗೆ 13ಬಂತು ಎಂದು ಹೇಳಿದಿರಿ. ನಿಮಗೆ ಎಷ್ಟು ಬಂತು ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಚಿನ್ನಪ್ಪನವರೇ, ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳಿ. ಒಂದು ನಿಮಿಷ ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಏಕೆ ಹೇಳುತ್ತಿದ್ದೇನೆಂದರೆ,ನಾನು ಹೇಳಿದ್ದಕ್ಕೆ ಕಾರಣ,ಚರ್ಚೆಯಲ್ಲಿ ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ,...

Sri D.A.Chinnappa;You go to specific charges and discuss.

Sri D.B.Chandregowda; Thank you for drawing my attention.

ಮಾನ್ಯ ವೀರೇಂದ್ರ ಪಾಟೀಲರು ಈ ಸದನದಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ. "ಅದೇ ರೀತಿ ಸರ್ಕಾರ ನಡೆಸುವವರು ಪ್ರಾಮಾಣಿಕವಾಗಿದ್ದರೆ ಕೆಳಗಿರುವವರೂ ಪ್ರಾಮಾಣಿಕರಾಗಿರುತ್ತಾರೆ. ಸರ್ಕಾರ ನಡೆಸುವವರು ಅಪ್ರಾಮಾಣಿಕವಾಗಿದ್ದರೆ ಕೆಳಗಿನವರಿಗೆ ಪ್ರಾಮಾಣಿಕವಾಗಿರಿ ಎಂದು ಹೇಳುವದಕ್ಕೆ ಸಾಧ್ಯವಾಗುವುದಿಲ್ಲ ಅದಕ್ಕಾಗಿ ನಾವು ಚುನಾವಣಾ ಪ್ರಣಾಳಿಕೆಯ ಮೂಲಕ ಜನತೆಗೆ ಸ್ವಚ್ಛ, ದಕ್ಷ ಹಾಗೂ ಪ್ರಾಮಾಣಿಕ ಆಡಳಿತವನ್ನು ನೀಡುತ್ತೇವೆಂದು ಸ್ಪಷವಾಗಿ ಹೇಳಿದ್ದೇವೆ. ಇದು ನಾನಲ್ಲ ಹೇಳಿದ್ದು. ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ.ಸ್ವಾಮಿ,ಚುನಾವಣೆ ಮುಗಿದ ತಕ್ಷಣ ಬಂದರಲ್ಲಾ ವೀರೇಂದ್ರ ಪಾಟೀಲರು,ನೀವು ಜನಕ್ಕೆ ಮಾತು ಕೊಟ್ಟಿದ್ದರಲ್ಲಾ, ಅದರಂತೆ ಸ್ವಚ್ಛವಾಗಿ ನಡೆದುಕೊಂಡಿದ್ದೀರಾ? ದಕ್ಷವಾಗಿ ನಡೆದುಕೊಂಡಿದ್ದೀರೋ,ಪ್ರಾಮಾಣಿಕವಾಗಿ ನಡೆದುಕೊಂಡಿದ್ದೀರೋ? ಎನ್ನುವುದು ಪ್ರಶ್ನೆ.

ಶ್ರೀ ಡಿ.ಎ. ಚಿನ್ನಪ್ಪ : ನಮ್ಮದಲ್ಲ,ನೀವು ನಡೆದುಕೊಂಡಿದ್ದೀರೊ ಹೇಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಏನು ಮಾಡಬೇಕೆಂದು ಮುಂದೆ ಜನರಿಗೆ ಹೋಗಿ ಹೇಳುತ್ತೇನೆ. ನಾನು ನಿಮಗಲ್ಲ ಹೇಳುವುದು.ಗೌಡರೇ ನಾನು 30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಇದ್ದೇನೆ. ನನಗೆ ಜನ ಉತ್ತರ ಕೊಟ್ಟಿರುವುದು ಕಳೆದುಕೊಂಡಿರುವುದು ಎಲ್ಲಾ ಗೊತ್ತಿದೆ;ಅನುಭವ ಇದೆ. ಆದ್ದರಿಂದ,ಸ್ವಚ್ಛ ,ದಕ್ಷತೆ ಎಷ್ಟರಮಟ್ಟಿಗಿದೆ? ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ "Beleguered Bangarappa"

ಎನ್ನತಕ್ಕಂಥ ಶಿರೋನಾಮೆಯಲ್ಲಿ ಒಂದು ಅಗ್ರ ಲೇಖನವನ್ನು ಬರೆದಿದ್ದಾರೆ. ಇದುವರೆಗೆ ಆ ಅಗ್ರ ಲೇಖನವನ್ನು ಯಾರೂ ಪ್ರಶ್ನೆ ಮಾಡಿಲ್ಲ. ಇದರಲ್ಲಿ ಬರೆದಿರತಕ್ಕಂಥಾದ್ದು ಸರಿಯಾಗಿಲ್ಲ ಎಂದಿದ್ದರೆ, ನಾನೇ ಅವರ ಸ್ಥಿತಿಯಲ್ಲಿ ಇದ್ದಿದ್ದರೆ ಇವತ್ತು ಆ ಪತ್ರಿಕೆ ಮೇಲೆ ಡೆಫಾಮೇಶಮ್ ಕೇಸ್ ಹಾಕುತ್ತಿದ್ದೆ. ಅಸತ್ಯವಾದುದನ್ನು ಬರೆದಿದ್ದಕ್ಕಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೆ. ಆದರೆ,ಯಾರೂ ಪ್ರಸ್ತಾಪ ಮಾಡಿಲ್ಲ.

ಒಬ್ಬ ಮಾನ್ಯ ಸದಸ್ಯರು : ಅದು ನಿಮ್ಮ ಪತ್ರಿಕೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗಿದ್ದರೆ "Deccan Herald"ಓದುತ್ತೇನೆ. ಆಗಬಹುದಾ ?

ದಿನಾಂಕ 13-8-1991ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಅಗ್ರಲೇಖನ ಬಂದಿದೆ. ಅದನ್ನು ಕ್ವೋಟ್ ಮಾಡುತ್ತೇನೆ. ಅದು ಈ ರೀತಿ ಇದೆ.

"It is not surprising that dissidence persists in the Karnataka Congress-I against Mr.S.Bangarappa whose tenure as Chief Minister has been scandalous in a literal sense. Charges of corruption have been mounting against his Government. The regained clout of the infamous liquor lobby, which was kept at bay during Mr.Veerendra Patil's Chief ministership, is blatantaly in evidence in the reappearance of the seconds(duty evaded) trade. Not so long ago, the grant of licences for lucrative granite quarrying to as many as 200 private parties had raised a stink. Corruption in transfers in Government jobs has reached unprecedented proportions, the "fee" reportedly varying from Rs.40,000 to Rs. 50,000 in the case of a sub-inspector,and Rs.4,00,000 to Rs.5,00,000 in the case of an Assistant commissioner of police. Officers of known integrity have been shunted out to sinecures. Those under a cloud have been given key postings.

Worse Mr. Bangarappa himself has been accused of having a hand in land scandel in Bangalore and acquiring sizable properties. These things need not have been themselves spurred a dissidence. Congress-I Chief Ministers with worse records have managed without much trouble. But then,Mr.Bangarappa never enjoyed a majority support in the party.Mr.K.H.Patil,the Panchayat Raj Minister had a bigger following at the informal voting in the wake of Veerendra Patil's sacking. Mr.Bangarappa was made the Chief Minister at Mr.Rajiv Gandhi's instance. This had underminoed his acceptability to a large section of the Party which resented the manner in which Mr.Rajiv Gandhi has sacked the ailing Mr.Patil. Mr.Bangarappa's arrogance and sidelining of powerful Vokkaligas and Lingayats in the grant of Ministerial Portfolios made things worse for him. If this underlined his political inaptitude,so did his melodramatic expansion of Ministers on July 27th,his ordinance on Cauvery waters,which seriously embrrassed the Prime Minister and his response to the Telephone Tapping issue. Mr.Narashimha Rao cannot ignore the Memorandum from the disidents against Mr.Bangarappa on Monday.Congress-Ilost considerable ground to the BJP in the recent Lokasabha Elections in Karnataka. Party will be asking for further trouble in the State should Mr.Bangarappa continue at the helm."

ಶ್ರೀ ಎಸ್. ಬಂಗಾರಪ್ಪ : ಬ್ರಹ್ಮ ಲಿಪಿನಾ ಅದು.

ಶ್ರೀ ಡಿ.ಬಿ. ಚಂದ್ರೇಗೌಡ : ಬ್ರಹ್ಮ ಲಿಪಿ ಅದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂಡಿಯನ್ ಎಕ್ಸ್‌ಪ್ರೆಸ್ ನಿಮಗೆ ಬೈಬಲ್ಲಾ?

ಶ್ರೀ ಎಸ್. ಬಂಗಾರಪ್ಪ : ಬ್ರಹ್ಮ ಲಿಪಿ ಫಾಲೋ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದ್ದು ಬ್ರಹ್ಮ ಲಿಪಿ.

ಶ್ರೀ ವಾಟಾಳ್ ನಾಗರಾಜ್ : ಇದು ಬ್ರಹ್ಮ ಲಿಪಿ ಅಲ್ಲ,ಯಮಲಿಪಿ

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಾನು ಬರೆದಿದ್ದಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪತ್ರಿಕೆಯಲ್ಲಿ ಬಂದಿದ್ದು ಬ್ರಹ್ಮ ಲಿಪಿಯಲ್ಲ. ಆಡಳಿತ ಪಕ್ಷದವರೇ ಬರೆದಂಥ ಲಿಪಿ. ಪತ್ರಿಕೆಯಲ್ಲಿ ವರದಿ ಆಗಿದೆ.

ಶ್ರೀ ಎಸ್. ಬಂಗಾರಪ್ಪ : ಒಂದು ಕೆಲಸ ಮಾಡಿ. Thus spake Mr. Goenka ಎಂದು ಕೆಳಗಡೆ ಒಂದು ಲೈನ್ ಹಾಕಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆಡಳಿತ ಪಕ್ಷದವರೇ ಆಪಾದನೆ ಮಾಡಿರುವುದನ್ನು ಅದರಲ್ಲೆ ಬರೆದಿದ್ದಾರೆ. ಅದು ಅವರ ಸ್ವಂತದ್ದಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಪತ್ರಿಕೆಯಲ್ಲಿ ವಿಚಾರ ಬಂದಿದೆ. ಈ ಕಡೆಯ ಸದಸ್ಯರು ಇರಲಿ ಅಥವಾ ಆ ಕಡೆಯ ಸದಸ್ಯರು ಇರಲಿ,ಸತ್ಯ ಸಂಗತಿಗಳನ್ನು ಪತ್ರಿಕೆಯಲ್ಲಿ ಬರೆದಾಗ,ಯಾವುದೇ ಪತ್ರಿಕೆಯಲ್ಲಿ ಬರಲಿ ಆಡಳಿತ ಪಕ್ಷದ ಸದಸ್ಯರು ಅದರ ಬಗ್ಗೆ ಲಘುವಾಗಿ, ಹಗುರವಾಗಿ ಮಾತನಾಡುವಂತಹದು ಚುನಾಯಿತ ಪ್ರತಿನಿಧಿಗಳಾಗಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವಂತಹ ಮಾತು ಆಗುತ್ತದೆ. ಆದ್ದರಿಂದ ಇವತ್ತು ಏನಾದರೂ ಸತ್ಯ ಹೊರ ಬರುತ್ತಿರುವಾಗ, ಪತ್ರಿಕೆಯವರು ಸತ್ಯ ಸಂಗತಿಯನ್ನು ವರದಿ ಮಾಡುತ್ತಿರುವಾಗ ಅದನ್ನು ಅಪ್ರಿಷಿಯೇಟ್ ಮಾಡಬೇಕೆ ವಿನಹ ತಮಗೆ ಕಹಿ ಆಗುತ್ತೆದ ಎಂಬುದನ್ನು ಹೇಳಿ ಈ ರೀತಿ ಅವಹೇಳನಕಾರಿ ಮಾತುಗಳನ್ನು ಆಡುವಂತಹದು ನಿಜವಾಗಿಯೂ ಸಹ ಪತ್ರಿಕಾ ವರದಿ ಬಗ್ಗೆ ಏನು ನಂಬಿಕೆ ಇಟುಕೊಂಡಿದ್ದಾರೆ,ಒಂದು ವಿಶ್ವಾಸವನ್ನು ಇಟುಕೊಂಡಿದ್ದಾರೆ,ಆ ವಿಶ್ವಾಸಕ್ಕೆ ಲೋಪ ಆಗುತ್ತದೆ. ನಾವು ಯಾವಾಗ ಆರೋಪ ಮಾಡಬೇಕು ಎಂದರೆ,ವರದಿಯಲ್ಲಿ ಸತ್ಯಕ್ಕೆ ದೂರವಾದ ಸಂಗತಿಗಳು ಬಂದಿದ್ದರೆ,ದಾಖಲೆಗಳು ಇದ್ದರೆ ಈ ರೀತಿ ಆರೋಪ ಮಾಡಬೇಕೇ ವಿನಹ,ಹಗುರವಾಗಿ ಮಾತನಾಡುವಂಥಾದ್ದು ಆ ಕಡೆ ಇರಲಿ ಅಥವಾ ಈ ಕಡೆ ಇರಲಿ ನಾವು ಯಾರೂ ಮಾತನಾಡುವುದು ಸರಿಯಲ್ಲ ಎಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ತಾವು ಹೇಳಬೇಕಾದರೆ ಒಂದು ಮಾತು ಪ್ರಯೋಗ ಮಾಡಿದ್ದೀರಿ. ಯಾವುದೇ ವಿಚಾರ ನಾವು ಹೇಳುತ್ತೇವೆ.ಅವರು ಬರೆಯುತ್ತಾರೆ, ಅಷ್ಟೇ ವ್ಯತ್ಯಾಸ. ಯಾವುದನ್ನೇ ಆಗಲಿ ಹೇಳತಕ್ಕ ಹಕ್ಕನ್ನು ನಾವು ಸದನದಲ್ಲಿ ಇಟುಕೊಂಡಿದ್ದೇವೆ. ಅಥವಾ ಪಬ್ಲಿಕ್ ಸ್ಪೀಚ್‌ನಲ್ಲಿ ಇಟ್ಟುಕೊಂಡಿದ್ದೇವೆ. ಅದೇ ಮಾತನ್ನು ಬರೆಯತಕ್ಕಂಥ ಸಾಧ್ಯತೆ ಅವರಿಗೆ ಇರುವುದರಿಂದ ಅವರು ಬರೆಯುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗಳು ಇದೆ.

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ. ಪ್ರಾಮಾಣಿಕವಾಗಿ ಅದು ಇರಬೇಕು ಎನ್ನತಕ್ಕ ಮಾತನ್ನು ತಾವು ಪ್ರಯೋಗ ಮಾಡಿದ್ದೀರೆ. ಬಹಳ ಜವಾಬ್ದಾರಿಯಿಂದ ಹೇಳಿದ್ದೀರಿ ಎಂದು ನಾನು ಭಾವಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಶ್ಚಿತವಾಗಿ..

ಶ್ರೀ ಎಸ್. ಬಂಗಾರಪ್ಪ : ಪ್ರಾಮಾಣಿಕತನವನ್ನು ಯಾವಾಗ ಪತ್ತೆ ಹಚ್ಚಬೇಕು ಎಂದರೆ ಸಕಾರಣಗಳು ಇವೆ ಎಂದಾಗ ಪತ್ತೆಹಚ್ಚಬೇಕು. ನೀವು ದಾಖಲೆಗಳು, ಮತ್ತೊಂದು ಇದೆಯೆಂದು ಹೇಳಿದಿರಿ. ಹಾಗಾದರೆ ಸರಿ. ಪತ್ರಿಕಾ ಮಾಧ್ಯಮಕ್ಕೆ ಸ್ವಾತಂತ್ರ್ಯಕ್ಕೆ ನಾವು ಗೌರವವನ್ನು ಕೊಟಿರತಕ್ಕಂಥವರು. ಈಗಲೂ ಕೂಡ ಕೊಡುತ್ತೇವೆ,ಮುಂದೆ ಕೂಡ ಕೊಡುತ್ತೇವೆ. ಯಾವುದು ಅಪ್ರಾಮಾಣಿಕವಾಗಿ ಇರುತ್ತದೆ. ದಾಖಲೆ ಇದ್ದರೂ ಕೂಡ ನೋಡದೇ ಬರೆಯತಕ್ಕ ಸ್ವಭಾವ ಇದೆ, ಮತ್ತೊಂದು ಏನು ಇದೆ, ಅದನ್ನು ಇಟ್ಟುಕೊಂಡು ಬರೆಯುವಂತಹುದು - Yellow Journalism - ಪೀತ ಪತ್ರಿಕೋದ್ಯಮ ಎಂದು ಏನು ಹೇಳುತ್ತೇವೆ ಅದಕ್ಕೆ ಬರುತ್ತದೆ.ಇದು ಈ ಪೀತ ಪತ್ರಿಕೋದ್ಯಮ ವ್ಯಾಪ್ತಿಗೆ ಬರಬಾರದು.

ಈ ಮಾತನ್ನು ನಾವು ಹೇಳುವುದಷ್ಟೆ ಅಲ್ಲ, ಪತ್ರಿಕಾ ವಲಯದಲ್ಲಿಯೂ ಇದೆ. ಇವತ್ತು ನಾನು ಪತ್ರಿಕಾ ವಿಚಾರವನ್ನು ಚರ್ಚೆಯ ವಿಷಯವಾಗಿ ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. It is a very big subject. ಇವೊತ್ತು ರಾಜಕಾರಣಿಗಳು ಯಾವರೀತಿಯಲ್ಲಿ ಇರುತ್ತಾರೆ,ಸೋಶಿಯಲ್ ಸರ್ವಿಸಲ್ಲಿ ಅಂದರೆ ಸಮಾಜ ಸೇವಕರು ಯಾವರೀತಿಯಲ್ಲಿ ಇರುತ್ತಾರೆ ಅಥವಾ ಮತ್ತೊಂದು ಕ್ಷೇತ್ರದಲ್ಲಿ ಯಾವರೀತಿಯಲ್ಲಿ ಇರುತ್ತಾರೆ ಹಾಗೆಯೇ ಪತ್ರಿಕಾ ಕ್ಷೇತ್ರದಲ್ಲಿಯೂ ಇದ್ದಾರೆ. ಇದನ್ನು ಮರೆಯಬೇಡಿ.

ಶ್ರೀ ವಾಟಾಳ್ ನಾಗರಾಜ್ : ಉಪದೇಶ ಬೇಡ..

ಶ್ರೀ ಎಸ್. ಬಂಗಾರಪ್ಪ : ಉಪದೇಶ ಬೇಡವಂದರೆ,ನಿಮ್ಮದೊಂದು ಉಪದೇಶವನ್ನು ಕೇಳುವುದಕ್ಕೆ ನಮಗೆ ಆಗುತ್ತದೆ. ನಮ್ಮ ಉಪದೇಶವನ್ನು ಕೇಳುವುದಕ್ಕೆ ನೀವು ತಯಾರಾಗಿರಬಾರದೆ?

ಶ್ರೀ ವಾಟಾಳ್ ನಾಗರಾಜ್ : ಉಪದೇಶ ಬೇಡ. ನಾನು ಪತ್ರಿಕೆಗಳ ಮೇಲೆ ಗಡಾ ಪ್ರಹಾರ ಬೇಡ ಎಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ ; ಒಂದು ಎಡಿಟೋರಿಯಲ್ ಬರೆದ ತತ್‌ಕ್ಷಣ ಅದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಇರಬಹುದು,ಮತ್ತೊಂದು ಪತ್ರಿಕೆ ಇರಬಹುದು,ಅದು ಪತ್ರಿಕೆ ಪತ್ರಿಕೆಯೇ,ಈ ಮಾತನ್ನು ನಾನು ಸ್ಪಷಪಡಿಸಬಯಸುತ್ತೇನೆ. ಯಾರೇ ಆಗಲಿ ಸಕಾರಣ ಕೊಟ್ಟು ಮತ್ತೊಂದು ವಿಚಾರವನ್ನು ಹೇಳಿದರೆ ನಾವು ನಿಜವಾಗಿಯೂ ಅದನ್ನು ಸ್ವಾಗತ ಮಾಡಬಹುದು. ಇವೊತ್ತು ಅಡ್ಮಿನಿಸ್ಟ್ರೇಶನ್ ವಿಚಾರ,ಮತ್ತೊಂದು ವಿಚಾರವನ್ನು ಹೇಳಿದರೆ ನಾವು ಅದನ್ನು ಸ್ವಾಗತ ಮಾಡೋಣ. ಅದು ಬೇಕಾದಷ್ಟು ಇರುತ್ತದೆ. ಅದನ್ನು ಬಿಟ್ಟು ಇದು ಒಂದು ರೀತಿ ಏನೋ ವಿಚಾರ ಬಂದಾಗ ಇದೂ ಕೂಡ ಒಂದು. ಓಹೋ ಇದೇನು ಬ್ರಹ್ಮಲಿಪಿಯೇ?ಅದು ಕೂಡ ಸಲಹೆಗಳಲ್ಲಿ ಒಂದು ಸಲಹೆ ಮಾತ್ರ. ಬೇಕಾದರೆ ಒಪ್ಪಬಹುದು,ಇಲ್ಲವಾದರೆ ಬಿಡಬಹುದು...

ಶ್ರೀ ಬಿ.ಎಸ್. ಯಡಿಯೂರಪ್ಪ : ಹೈಕೋರ್ಟ್,ಸುಪ್ರಿಕೋರ್ಟ್ ಆಜ್ಞೆಯನ್ನು ಕೂಡ ಧಿಕ್ಕರಿಸಿ ಕಾನೂನು ಬಾಹಿರವಾಗಿ ಯಾರಿಗೋ ಅನುಕೂಲ ಮಾಡಿಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುವಂತಹ ಮಟಕ್ಕೆ ಬಂದಿರುವ ದೃಷಿಯಿಂದ ಆಗ ಕೆಲವು ಸತ್ಯಸಂಗತಿಗಳನ್ನು ಬರೆದರೆ..

ಶ್ರೀ ಎಸ್. ಬಂಗಾರಪ್ಪ : ನೀವು ಇದನ್ನು ಜನರಲೈಸ್ ಮಾಡಬೇಡಿ. We want to place your arguments solely on the basis of the documents.You are referring to certain Court matters,whether it is High Court or Supreme Court.

You base your arguments on the basis of certain documents,if you are in possession of the documents...

ಆ ರೀತಿಯಲ್ಲಿ ಏನಾದರೂ ಇದ್ದರೆ ಹೇಳಿ. ಅದು ಏನೂ ಇಲ್ಲದೇನೇ,ಕೋರ್ಟ್‌ನ ಆಜ್ಞೆಯನ್ನು ಧಿಕ್ಕಾರ ಮಾಡುತ್ತೀರಿ,ಮತ್ತೊಂದು ಮಾಡುತ್ತೀರಿ ಅಂದರೆ ಹೇಗೆ? ಆ ರೀತಿಯಾಗಿ ಜನರಲೈಸ್ ಆಗಿ ತಾವು ಹೇಳಬೇಡಿ. ನೀವು ಇಷ್ಟೇ ಹೇಳಿ,ನಮ್ಮ ಭಾಷಣದಲ್ಲಿ ದಾಖಲೆ ಸಹಿತ ಹೇಳುತ್ತೇವೆ ಎಂದು ಹೇಳಿ. ಮಾನ್ಯ ಚಂದ್ರೇಗೌಡರ ಹಾಗೆ ಕುತ್ತಿಗೆ ದಾಖಲೆ ಸಹಿತ ಹೇಳಿ. ಅವರು ಹೇಳಿದ್ದನ್ನು ನೋಡಿ ಮೊದಲು ಶಿವರಾಮಗೌಡರ ಮೇಲೆ ಏನೋ ಕುತ್ತಿಗೆ ಬರುತ್ತಿದೆ, ಇನ್ನೇನು ನೇಣುಗಂಬವೇ ಗತಿ ಎಂದು ತಿಳಿದುಕೊಂಡು ಕೊನೆಗೆ ನೋಡಿದರೆ ಅದರಲ್ಲಿ ಎಫ್‌ಐಆರ್ ಮಾತ್ರ ಇದೆ, ಚಾರ್ಜ್‌ಶೀಟೇ ಇಲ್ಲ, ಅದಕ್ಕೇ ನಾನು ಹೇಳುವುದು...

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಸರಕಾರದಲ್ಲಿ ಏನು ಮಾಡಿದರೂ ಚಾರ್ಜ್‌ಶೀಟ್ ಬರುವುದಿಲ್ಲ, That is what I want to submit...

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ನಿಮ್ಮ ಸರಕಾರದಲ್ಲಿ ನ್ಯಾಯ ಇಲ್ಲ. ನ್ಯಾಯಕ್ಕೆ ಬೆಲೆಯೂ ಇಲ್ಲ, ಎರಡು ವರ್ಷದಿಂದ ಒಂದು ವರದಿಯೂ ಬಂದಿಲ್ಲ, ಯಾವುದೂ ವಿಚಾರಣೆಯಾಗಿಲ್ಲ.

(ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣರವರು) ತಮ್ಮ ಪೀಠವನ್ನು ಅಲಂಕರಿಸಿದರು.)

ಶ್ರೀ ಎಸ್. ಬಂಗಾರಪ್ಪ : ಎಫ್‌ಐಆರ್ ಬಂದರೆ ಬನ್ನಿಕೋಡ್‌ರವರಿಗೂ ಬರುತ್ತದೆ,ನಿಮಗೂ ಬರುತ್ತದೆ.ಇದೆ ಆರ್ಗ್ಯೂಮೆಂಟ್ ಮಾಡಿದರೆ ನಿಮಗೆ ತೊಂದರೆ ಬಂದೀತು. ಎಚ್ಚರಿಕೆಯಿಂದ ಮಾತನಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಎರಡು ವರ್ಷಗಳಿಂದ ಇನ್ವೆಸ್ಟಿಗೇಷನ್ ಏಕೆ ಆಗಿಲ್ಲ? ಇನ್ನೂ ವರದಿ ಏಕೆ ವಿಚಾರಣೆ ಆಗಿಲ್ಲ, ಅದಕ್ಕೂ ಒಂದು ಮಿತಿ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಪುನ; ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರಿಂದ ಅವರಿಂದ ಈ ವಿಚಾರದಲ್ಲಿ ಇನ್ನೊಂದು ಕ್ಲಾರಿಫಿಕೇಶನ್ ಕೇಳಬಯಸುತ್ತೇನೆ. ರಾಜ್ಯದ ಹೋಂ ಸೆಕ್ರೆಟರಿಯವರು ಈ ಸಂಬಂಧವಾದ ಫೈಲನ್ನು ಏಕೆ ತರಿಸಿದ್ದಾರೆ ಎಂಬುದನ್ನು ತಾವು ಸದನಕ್ಕೆ ಹೇಳಿ. ಇದಕ್ಕಿಂತ ಹೆಚ್ಚಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಡೆಕ್ಕನ್ ಹೆರಾಲ್ಡ್ ಪತ್ರಿಕೆ ವಿಚಾರ ಅವರು ಹೇಳಿದರು. ಆಗಸ್ಟ್ 7,1991

ಶ್ರೀ ಶಿವಾನಂದ ಹೆಚ್. ಕೌಜಲಗಿ : ಡೆಕ್ಕನ್ ಹೆರಾಲ್ಡ್ ಪತ್ರಿಕೆ ನಿಮ್ಮದು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಒಂದು ನಿಮಿಷ,ನಾನು ಇದಕ್ಕಾಗಿ ಕಾಯುತ್ತಾ ಇದ್ದೆ. ಈ ಮಾತು ಬರುತ್ತದೆ ಎಂದು ನನಗೆ ಗೊತ್ತಿತ್ತು. Mr. Koujalagi, will you stand by your statement?

(ಗೊಂದಲ)

Mr. Speaker: Order, Order please,

ದಯವಿಟ್ಟು ಕೂಡಿ.

ಶ್ರೀ ಗುರುದೇವ್ : ಬನ್ನಿಕೋಡರನ್ನೇ ಉಪನಾಯಕರನ್ನಾಗಿ ಮಾಡೋಣ;

ಶ್ರೀ ಎಸ್. ಬಂಗಾರಪ್ಪ : ಹಿರಿಯ ಸದಸ್ಯ ಶ್ರೀ ಕೌಜಲಗಿಯವರು ಒಂದು ಮಾತು ಆಡಿದ್ದಾರೆ. ಡೆಕ್ಕನ್ ಹೆರಾಲ್ಡ್ ನಿಮ್ಮ ಪತ್ರಿಕೆಯೆಂದು ನನಗೆ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ವಿರೋಧಪಕ್ಷದ ನಾಯಕರನ್ನು ಮಾತ್ರ ಮಾತನಾಡಲು ನಾನು ಕರೆದಿದ್ದೆ.

To make submissions on this No Confidence Motion, how does Mr.Konjalagi come into picture? Nothing he said shall go on record.ಮಧ್ಯೆ ಮಧ್ಯೆ ಆಡುವ ಮಾತುಗಳೆಲ್ಲ ರಿಕಾರ್ಡ್‌ಗೆ ಬಂದರೆ...

ಶ್ರೀ ಎಸ್. ಬಂಗಾರಪ್ಪ : ಇಂಡಿಯನ್ ಎಕ್ಸ್‌ಪ್ರೆಸ್ ನಿಮ್ಮ ಪತ್ರಿಕೆಯೆಂದು ನಾನು ಹೇಳಿದ್ದೇನೆಯೇ?

Sri.H.Dkanathaiah: It has gone on record.

Mr. Speaker: Newspapers are not subject of discusion here.

ನಾವು ಈ ಅವಿಶ್ವಾಸ ನಿರ್ಣಯದ ಚೌಕಟ್ಟನ್ನು ಮೀರಿ ಬಹಳ ದೂರ ಹೋಗುತ್ತಿದ್ದೇವೆ. ಪತ್ರಿಕೆಗಳು ಅವಿಶ್ವಾಸ ನಿರ್ಣಯದ ಸಬ್ಜೆಕ್ಟ್ ಮ್ಯಾಟರೇನು? ಈ ಕರ್ನಾಟಕ ರಾಜ್ಯದಲ್ಲಿ ಈ ದೇಶದಲ್ಲಿ ಪ್ರಕಟಣೆಯಾಗುತ್ತಿರುವ ಪತ್ರಿಕೆಗಳೆಲ್ಲ ನಮ್ಮ ಪತ್ರಿಕೆಗಳೇ, ಅವರ ಪತ್ರಿಕೆ,ಇವರ ಪತ್ರಿಕೆ ಎಂದು ಇಲ್ಲ. ಆದ್ದರಿಂದ ಇದಕ್ಕೆ ವಿರಾಮ ಕೊಟ್ಟು ಈ ಅವಿಶ್ವಾಸ ನಿರ್ಣಯಕ್ಕೆ ಬನ್ನಿ. I want caution the Reporters.

ವಿರೋಧಪಕ್ಷದ ನಾಯಕರು ಮಾತನಾಡುವುದು ಮಾತ್ರ ಕಡತಕ್ಕೆ ಹೋಗಲಿ, ಅಡ್ಡ ಮಾತುಗಳಿಗೆ ಗಮನ ಕೊಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ,ನಾನು ಒಂದು ಪತ್ರಿಕೆಯ ಅಗ್ರಲೇಖನವನ್ನು ಪ್ರಸ್ತಾಪ ಮಾಡಿದೆ. ಆಗಲೂ ಮುಖ್ಯಮಂತ್ರಿಗಳೂ ಒಂದು ಹೆಸರು ಹೇಳಿದರು. ನಾನು ಅದರ ಬಗ್ಗೆ ಪ್ರಸ್ತಾಪಿಸಲಿಲ್ಲ. ನಾನು ಪತ್ರಿಕೆಗಳನ್ನು ಪ್ರಾಂಜಲ ಮನಸ್ಸಿನಿಂದ ನೋಡುತ್ತೇನೆ ನನಗೆ ವೈಯಕ್ತಿಕವಾಗಿ ಯಾವ ಪ್ರೇಮ ಅಥವಾ ದ್ವೇಷಗಳಿಲ್ಲ. ನಾನು ಎಲ್ಲ ಪತ್ರಿಕೆಗಳನ್ನೂ ತಾವು ಅಪ್ಪಣೆ ಕೊಡಿಸಿದ ಹಾಗೆ ನೋಡುತ್ತೇನೆ. ಆದರೆ ಪತ್ರಿಕೆಗಳವರು ಅಗ್ರಲೇಖನ ಬರೆಯುವಾಗ ಜನಾಭಿಪ್ರಾಯವನ್ನು, ಪರಿಸ್ಥಿತಿಯನ್ನು ಅದರ ಗಂಭೀರತೆಯನ್ನು ಅಳೆದು-ತೂಗಿ ಬರೆಯುತ್ತಾರೆ. ಆದ್ದರಿಂದ ಅದನ್ನು ನೋಡುವ ದೃಷ್ಟಿ ಸ್ವಚ್ಛವಾಗಿರಬೇಕೆಂಬ ಉದ್ದೇಶದಿಂದ ನಾನು ತಮ್ಮ ಗಮನಕ್ಕೆ ತಂದೆ,ಅಷ್ಟು ಆಗಸ್ಟ್ 7ನೇ ತಾರೀಖಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಿಡಿಎ ಬಗ್ಗೆ ಈ ಸರ್ಕಾರ ತಂದಂತಹ ಅಥವಾ ತರಲು ಪ್ರಯತ್ನಿಸಿದಂತಹ ಒಂದು ಸುಗ್ರೀವಾಜ್ಞೆಯ ಬಗ್ಗೆ ಅದನ್ನು ತಿರಸ್ಕರಿಸಿದ ಬಗ್ಗೆ ಬರೆದಿದ್ದಾರೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಅದರಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ನೀವೇ ಓದಿದರೆ ಒಳ್ಳೆಯದು.ಅದೇ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಕೂಡ ಒಂದು ಅಗ್ರಲೇಖನವನ್ನು ಬರೆದಿದ್ದಾರೆ. ಅಗತ್ಯವಿದ್ದರೆ ಇವೆಲ್ಲವನ್ನೂ ನಾನು ಹೇಳುತ್ತೇನೆ. ಆದರೆ ಅಗ್ರಲೇಖನ ಬರೆದ ಪತ್ರಿಕೆಗಳು ಆ ಪಕ್ಷದವೋ ಈ ಪಕ್ಷದವೋ ಎಂಬ ಮಾತು ಬೇರೆ.

ಈ ರಾಜ್ಯದಲ್ಲಿ ಆಳುವ ಪಕ್ಷದಲ್ಲಿ ಇಂಥ ಒಂದು ಜಗಳ ಇದೆ ಎನ್ನತಕ್ಕಂಥದ್ದು ಗೊತ್ತಾಗಿ ಕೇಂದ್ರದ ಹೈಕಮ್ಯಾಂಡ್‌ನವರು ಒಬ್ಬ ಪ್ರತಿನಿಧಿಯನ್ನು ಕಳುಹಿಸಿದರು. ಅವರು ಗೌರವಾನ್ವಿತ ಮುಖ್ಯಮಂತ್ರಿಗಳು. ಪಕ್ಕದ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಕರುಣಾಕರನ್ ಅವವು ಈ ರಾಜ್ಯಕ್ಕೆ ಬಂದಿದ್ದರು. ಅವರು ಒಂದು ಇಂಟರ್‌ವ್ಯೂವನ್ನು ಕೊಟ್ಟಿದ್ದಾರೆ. ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಇಂಟರ್‌ವ್ಯೂವನ್ನು ಕೊಟಿದ್ದಾರೆ. ಏಕೆಂದರೆ, ಇಲ್ಲಿ ಬರೆದಿರ ತಕ್ಕಂಥದ್ದು ಸರಿಯಲ್ಲ, ಅಗ್ರಲೇಖನ ಬೇಡ, ಡೆಕ್ಕನ್ ಹೆರಾಲ್ಡ್‌ಪತ್ರಿಕೆದು ಬೇಡ. ಇದನ್ನು ಸರಿಪಡಿಸುವುದಕ್ಕೆ ಇಲ್ಲಿಗೆ ಬಂದರಲ್ಲಾ ಹೈಕಮಾಂಡ್ ಪ್ರತಿನಿಧಿ, ಅವರು ಏನು ಹೇಳುತ್ತಾರೆ ಎಂದು ನೋಡೋಣ. ನಾನು ಬಹಳ ದೂರಕ್ಕೆ ಹೋಗುವುದಿಲ್ಲ. ಟೈಮ್ಸ್‌ಪತ್ರಿಕೆಗೆ 26-8-91ರಂದು ಅವರು ಮಾಡಿದ ಇಂಟರ್‌ವ್ಯೂವನ್ನು ಇಲ್ಲಿ ಪ್ರಕಟಪಡಿಸಿದೆ.

Mr. Speaker : Are you moving No Confidence Against the Congress party OR GOVERNMENT.

Sri D.B. ChandreGowda : Government of the Congress Party,

Mr.Speaker : How does that become relevant?

ಶ್ರೀ ಡಿ.ಬಿ.ಚಂದ್ರೇಗೌಡ : ಏಕೆಂದು ಹೇಳಿದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ಅವರು ಒಪ್ಪುವುದಕ್ಕೆ ತಯಾರಾಗಿಲ್ಲ, ಆದುದರಿಂದ ಈ ಸರ್ಕಾರದಲ್ಲಿ ಭ್ರಷ್ಟಾಚಾರ ಇದೆ ಎಂದು ನಾನು ಆಪಾದನೆ ಮಾಡಿದ್ದೇನೆ. ಇದನ್ನು ನಾವು ಅಥಾವಾ ಪತ್ರಿಕೆಯವರು ಬರೆದರೆ ಅವರು ಒಪ್ಪುವುದಿಲ್ಲ, ಆದ್ದರಿಂದ ಕಾಂಗ್ರೆಸ್ ಮುಖಂಡರು ಏನು ಹೇಳಿದ್ದಾರೆ ಎನ್ನುವುದನ್ನು ಅದು ದಾಖಲೆಯಲ್ಲಿ ಇರಲಿ ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. Idon't speak on the party lines,only with respect to the administration.

"What steps do you have in mind"

ಇದು ಪ್ರಶ್ನೆ. ಉತ್ತರ: "Speaking for myself,..." a responsible Chief MInister of a State,"..good administration means that all sections should get equal treatment" , which means they are not getting. ಗುಡ್ ಅಡ್ಮಿನಿಸ್ಟ್ರೇಷನ್ ಇಲ್ಲ, ಎನ್ನುವುದು ಒಪ್ಪಿಕೊಳ್ಳುತ್ತಾರೆ. " .... and no one group should be favoured over the rest," I would show how one group is favuored against the rest." Secondly, corrupt officials should be proceeded against, so that people do not suffer" which means, ಹೈಕಮ್ಯಾಂಡ್‌ನ ಪ್ರತಿನಿಧಿ, ಇಲ್ಲಿ ಕರಪ್ಟ್ ಅಧಿಕಾರಿಗಳು ಇದ್ದಾರೆ, ಅವರನ್ನು ಕಳುಹಿಸಬೇಕಾದಂಥ ಅಗತ್ಯ ಇದೆ ಎನ್ನತಕ್ಕಂಥದ್ದು ಪತ್ರಿಕೆಯಲ್ಲಿ ಹೇಳಿದ್ದಾರೆ. "Thirdly, effcient officers should be given charge of the key Departments." "Are you hopefull of all these happenings?"

ಏನಾದರೂ ಇನ್ನು ನಿಮಗೆ ನಂಬಿಕೆ ಇದೆಯೇ? He smiles. "I am always hopefull and it is their best interest to do this." "should the administration be defficient and the base of Congress get weekened? "thus I am sure that the Chief Minister will take immediate steps.." ಎಂದು ಹೇಳಿದ್ದಾರೆ.

ನಾವು ಹೇಳಿದರೆ ವಿರೋಧಪಕ್ಷವಾಗುತ್ತದೆ, ಪತ್ರಿಕೆಯವರು ಬರೆದರೆ ಪರ, ವಿರೋಧ ಎಂದು ಆಗುತ್ತದೆ. ಹೈಕಮಾಂಡ್ ಪ್ರತಿನಿಧಿ ಬಂದು ಏನು ಹೇಳುತ್ತಾರೆ ಎಂದರೆ, "I am sure the Chief Minister will take immediate steps to imrove

the Government machinary through involvement of good non-corrupt individuals and removal of the bad elements." ಅರ್ಥಾತ್ ಬ್ಯಾಡ್ ಎಲಿಮೆಂಟ್ಸ್‌ನ್ನು ಈ ಸರ್ಕಾರದವರು ಪ್ರೋತ್ಸಾಹಿಸಿದ್ದಾರೆ, ಆಶೀರ್ವದಿಸಿದ್ದಾರೆ, ಒಳ್ಳೆಯವರನ್ನು ಕರೆದುಕೊಂಡು ಸರಿಯಾದ ಆಡಳಿತವನ್ನು ಕೊಟ್ಟು ಪಕ್ಷದ ಗೌರವವನ್ನು ಕಾಪಾಡಿ ಎಂದು ಹೈಕಮಾಂಡ್‌ನ ಪ್ರತಿನಿಧಿ ನಿಮಗೆ ಬುದ್ಧಿ ಹೇಳಿ ಹೋಗಿದ್ದಾರೆ. ಆದುದರಿಂದ ಆಡಳಿತಕ್ಕೆ ಸೀಮಿತವಾಗಿ ಸಾರ್ವಜನಿಕ ಅಭಿಪ್ರಾಯ ಒಂದು ಕಡೆ.ಪತ್ರಿಕೆಯಲ್ಲಿ ಅಗ್ರಲೇಖನ ಮತ್ತೊಂದು ಕಡೆ. ಆಡಳಿತದಲ್ಲಿ ಇರತಕ್ಕಂಥ ದೋಷವನ್ನು ಆಳುವ ಪಕ್ಷದ ಪ್ರತಿನಿಧಿಗಳು ಸದನದ ಹೊರಗೆ ವ್ಯಕ್ತಮಾಡಿದಂಥ ಅಭಿಪ್ರಾಯ- ಇವೆಲ್ಲವನ್ನೂ ಕ್ರೋಢೀಕರಿಸಿ ಆಡಳಿತ ಹೇಗೆ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು ಎನ್ನುವಂಥ ದೃಷ್ಟಿಯಿಂದ ಇದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಆಡಳಿತ ಎನ್ನುವಾಗ ನಾನು ಯಾವುದೋ ನಾಲ್ಕು ಟ್ರಾನ್ಸ್‌ಫರ್‌ಗಳ ಬಗ್ಗೆ ಹೇಳಬೇಕು ಎನ್ನುವುದು ನನ್ನ ಇಚ್ಛೆ ಅಲ್ಲ.

ಇದು ಕೇವಲ ನಾಲ್ಕು ಅಧಿಕಾರಿಗಳ ವರ್ಗಾವಣೆ ಪ್ರಶ್ನೆ ಅಲ್ಲ. ಸಾಮಾನ್ಯವಾಗಿ ನಾವೆಲ್ಲರೂ ಆಡಳಿತವನ್ನು ಇಂತಹ ಸೀಮಿತ ದೃಷ್ಟಿಯಿಂದ ನೋಡುವುದು ಅಭ್ಯಾಸ. ಆದರೆ ಕಳೆದ 8-10 ತಿಂಗಳಿಂದ ಆಡಳಿತ ಅಥವಾ ಕಾರ್ಯಾಂಗದಲ್ಲಿ ಕೇವಲ ವರ್ಗಾವಣೆ ಅಲ್ಲ, ಅದಕ್ಕಿಂತಲೂ ದೊಡ್ಡ ಪ್ರಶ್ನೆ ನಮ್ಮಲ್ಲಿ ಉದ್ಭವವಾಗಿದೆ. ಇಲ್ಲಿ ಎದ್ದು ಕಾಣುತ್ತಿರುವ ಪ್ರಶ್ನೆ ಏನೆಂದರೆ, ರಾಜಕಾರಣಿಗಳನ್ನು ವಶೀಕರಣ ಮಾಡಿಕೊಂಡು ತಮಗೆ ಬೇಕಾದಂತಹ ಲಾಭದಾಯಕವಾದ, ಆಕರ್ಷಕವಾದ ಹುದ್ದೆಗಳನ್ನು ಗಿಟ್ಟಿಸಿಕೊಳ್ಳುವ ಚಾಣಾಕ್ಷ ಅಧಿಕಾರಿಗಳು ಒಂದೆಡೆ ಇದ್ದಾರೆ. ಅದಕ್ಕೆ ಆಕ್ರಮಣಕಾರಿ ಪ್ರವೃತ್ತಿ ಯಾರು? ರಾಜಕಾರಣಿಗಳು ಕಾರ್ಯಾಂಗದ ಎಲ್ಲಾ ಮುಖಗಳನ್ನು ಉಪಯೋಗಿಸಿಕೊಂಡು, ತಮ್ಮ ಸ್ವಂತ ರಾಜಕಾರಣಕ್ಕಾಗಿ ಮತ್ತು ತಮ್ಮ ಕಕ್ಷಿದಾರರು ಯಾರು ಇದ್ದಾರೆ, ಎಕ್ಸೈಜ್‌ನವರು, ಗ್ರಾನೈಟ್‌ನವರು, ನಗರದ ಭೂಮಿಯನ್ನು ನುಂಗತಕ್ಕವರು ಇಂತಹ ಲಾಭ ಪಡೆದುಕೊಳ್ಳಲು ಅಧಿಕಾರಿಗಳಿಗೆ ಬೆದರಿಕೆ ಹಾಕುವ ಜನ ಮತ್ತೊಂದು ಕಡೆ ಇದ್ದಾರೆ. ನಾನು ಈ ಬೆದರಿಕೆ ಹೇಗೆ ಬಂದಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಾರಂಭಿಕ ದಿನಗಳಿಂದ ಇಲ್ಲಿಯವರೆಗೂ ಮಾಡಿದ ಹೇಳಿಕೆಗಳನ್ನು ಇಟ್ಟಿದ್ದೇನೆ, ಅದನ್ನು ತಮಗೆ ಕೊಡುತ್ತೇನೆ. ಇದರಿಂದಾಗಿ ಏನು ಆಗಿದೆ ಎಂದರೆ, ಅಧಿಕಾರಿಗಳು ಸಮಯಕ್ಕೆ ಅನುಗುಣವಾಗಿ ತಗ್ಗಿಬಗ್ಗಿ ನಡೆದುಕೊಳ್ಳುವಂತೆ ಪ್ರದರ್ಶನ ಮಾಡಿ ಸ್ವಾಮಿಕಾರ್ಯ, ಸ್ವಕಾರ್ಯ-ಇವರೆಡನ್ನೂ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ನಿಷ್ಠೆ, ನಿಷ್ಪಕ್ಷಪಾತವಾದಂತಹ ಧೋರಣೆ, ಕನ್ನಡಿಗರ ಹಿತ, ಕನ್ನಡ ನಾಡಿನ ಹಿತ-ಇವೆಲ್ಲಕ್ಕೂ ತಿಲಾಂಜಲಿ ಕೊಟ್ಟಿದ್ದಾರೆ. ಯಾವ ರೀತಿ ನೀತಿ ಇಲ್ಲದೆ, ಕಳೆದ 10 ತಿಂಗಳಿಂದ ಆಗಿರತಕ್ಕ ವರ್ಗಾವಣೆ ಇದೆಯೆಲ್ಲ, ಇದು ಸ್ವಾತಂತ್ರ್ಯ ನಂತರ 40 ವರ್ಷಗಳ ಕರ್ನಾಟಕದ ಇತಿಹಾಸದಲ್ಲಿ ಆಗಿರಲಿಲ್ಲ ಎನ್ನುವುದನ್ನು ಡಿಸಿಡೆಂಟ್ಸೂ ಸೇರಿ ಎಲ್ಲರೂ ಒಪ್ಪುತ್ತಾರೆ. ಇವತ್ತು ಏನಾಗಿದೆ ಎಂದರೆ, ಐ.ಎ.ಎಸ್. ಅಧಿಕಾರಿಗಳು ಕೂಡ ಸಂಪೂರ್ಣ ಭ್ರಷ್ಟರು ಎನ್ನುವ ಒಂದು ಭಾವನೆ ಜನರ ಮನಸ್ಸಿನಲ್ಲಿ ಉಂಟಾಗಿದೆ. ಸುಮಾರು 30 ಸಾವಿರ ವರ್ಗಾವಣೆಗಳಾಗಿವೆ. ನಾನು ಹಿಂದಿನ ಸಾರಿ ಇಲ್ಲಿ ಹೇಳಿದ್ದೆ. ಪ್ರತಿ ವರ್ಗಾವಣೆಗೂ ಶ್ರಾದ್ಧದಲ್ಲಿ ಮಂತ್ರ ಹೇಳಿದಹಾಗೆ 'ಪಬ್ಲಿಕ್ ಇಂಟರೆಸ್ಟ್' ಎಂದು ಹೇಳುತ್ತಾರೆ. What is that public interest? ಇವತ್ತು ನಾವು ಆ ಪಬ್ಲಿಕ್ ಇಂಟರೆಸ್ಟ್ ಅನ್ನು ಸಾರ್ವತ್ರಿಕವಾಗಿ ಚರ್ಚೆ ಮಾಡಿ, ಅದನ್ನು ಡಿಫೈನ್ ಮಾಡತಕ್ಕ ಸ್ಥಿತಿಗೆ ಬಂದಿದ್ದೇವೆ. ಆದ್ದರಿಂದ ಈ ಕಾರ್ಯಾಂಗದಲ್ಲಿ ಸುಧಾರಣೆಯನ್ನು ತರಲಿಕ್ಕಾಗಿ ಹಿಂದೆ ಮುಖ್ಯಮಂತ್ರಿಯಾಗಿದ್ದಂತಹ ಮಾನ್ಯ ವೀರೇಂದ್ರ ಪಾಟೀಲರು ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿದ್ದರು. ಆ ಯೋಜನೆಗಳೆಲ್ಲಾ ಕಸದ ಬುಟ್ಟಿ ಸೇರಿದವು. ಈಗಿರತಕ್ಕ ಸ್ಥಿತಿ ಏನು? ಬ್ರಿಟಿಷರು

ನಮಗೆ ಈ ಆಡಳಿತವನ್ನು ಬಳುವಳಿಯಾಗಿ ಬಿಟ್ಟು ಸ್ವತಂತ್ರ ಭಾರತದ ಜನರ ಅಭಿವೃದ್ಧಿ, ಸಮಾಜ ಕಲ್ಯಾಣ ಈ ಕಲ್ಪನೆಗಳು ನಾವು ಈಗ ಹೇಳಿಕೊಡಬೇಕಾದ ಸ್ಥಿತಿಯನ್ನು ತಲುಪಿದ್ದೇವೆ. ನಾನು ಇದಕ್ಕಾಗಿ ಇತ್ತೀಚೆಗೆ ಆಗಿರತಕ್ಕ ವರ್ಗಾವಣೆಗಳ ಪಟ್ಟಿಯನ್ನು ಇಲ್ಲಿಡಬೇಕಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ಸುಮಾರು 30 ಸಹಸ್ರ ವರ್ಗಾವಣೆಗಳು ಈ ರಾಜ್ಯದಲ್ಲಿ ಆಗಿದೆ. ಅದೆಲ್ಲಕ್ಕೂ ಪಬ್ಲಿಕ್ ಇಂಟರೆಸ್ಟ್ ಎನ್ನತಕ್ಕಂಥ ಲೇಬಲ್ ಅನ್ನು ಹಚ್ಚಿದ್ದಾರೆ. ಆದರೆ ನಾನು ಈ ರಾಜ್ಯದಲ್ಲಿ ಮುಖ್ಯವಾಗಿರತಕ್ಕ ಐಎಎಸ್, ಮತ್ತು ಐಪಿಎಸ್ ಹುದ್ದೆಗಳಲ್ಲಿ ಎಂತೆಂಥ ಪ್ರಾಮಾಣಿಕರನ್ನು ಎಲ್ಲೆಲ್ಲಿ ತಂದಿದ್ದಾರೆ ಎನ್ನತಕ್ಕ ಬಗ್ಗೆ ಸ್ವಲ್ಪ ಸಾರ್ವಜನಿಕರ ಗಮನವನ್ನು ಸೆಳೆಯಬೇಕು.

ಅಧ್ಯಕ್ಷರು : ಟ್ರಾನ್ಸ್‌ಫರ್ ಕಾರ್ಯಾಂಗ ಮಾಡತಕ್ಕ ಕೆಲಸ ಅದನ್ನು ನೀವು...

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ಏಕೆ ಹೇಳುತ್ತೇನೆ ಎಂದರೆ, ಕಾರ್ಯಾಂಗ ತಾನು ವರ್ಗಾವಣೆ ಮಾಡುವುದಕ್ಕೋಸ್ಕರ ಒಂದು ನಿಯಮವನ್ನು ರೂಪಿಸಿದೆ. ಆ ನಿಯಮವನ್ನು ತಾನೇ ರೂಪಿಸಿಕೊಂಡಿದೆ. ಆ ನಿಯಮದ ವ್ಯಾಪ್ತಿಯಲ್ಲಿ ಕೆಲಸ ಮಾಡಿದೆಯೋ ಇಲ್ಲವೇ ಎನ್ನತಕ್ಕಂಥಾದ್ದು ಮತ್ತು ಇದರ ಪರಿಣಾಮವಾಗಿ ಆಡಳಿತದಲ್ಲಿ ಇರತಕ್ಕಂಥ ದೋಷಗಳು ಏನು? ಇದು ನನ್ನ ಆಪಾದನೆಯಲ್ಲ. ಕಾಂಗ್ರೆಸ್ ಪಕ್ಷದ ವರಿಷ್ಠರು, ಮುಖಂಡರು ಎಲ್ಲೆಲ್ಲಿ ಈ ರೀತಿಯ ಆಡಳಿತದಲ್ಲಿ ದೋಷ ಇದೆ ಎಂದು ಹೇಳಿದ್ದಾರೆ ಅವರೆಲ್ಲಾ ಹೇಳಿದರೂ ನಾನು ಹೇಳದೆ ಇರುವುದಕ್ಕೆ ಸಾಧ್ಯವೇ. ಅದನ್ನು ನಾನು ಹೇಳುವುದ್ಕಕೆ ಪ್ರಯತ್ನ ಮಾಡುತ್ತಿದ್ದೇನೆ, ಮಾನ್ಯ ಅಧ್ಯಕ್ಷರೆ, ಪಾಲಿಸಿ ಡಾಕ್ಯುಮೆಂಟ್ ಒಂದು ಇದೆ. ಸನ್ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಮಾಡುರುವಂಥ ದಾಖಲೆ ಇದು. Official Memorandum, personnel and Administrative Reforms Secretariat, no.DPAR/2/SPR/90, Bangalore dated 29th March, 1990. Sub: Transfer of Government servants -policy regarding. The policy of the Government, I do not want to go into the details of the policy. ಈ ಪಾಲಿಸಿ ದಾಖಲೆಯೊಳಗೆ ಪ್ರತಿಧ್ವನಿ ಮಾಡಿದ್ದಾರಲ್ಲ ಅದರಲ್ಲಿ ಒಂದನ್ನಾದರೂ ಪಾಲನೆ ಮಾಡಿದ್ದಾರೆಯೇ? I can understand 10% flout, I can understand 20% flout, But, what has happened to this? Is it a scrap of paper?

ಏನು ನಡೆದಿದೆ ಇಲ್ಲಿ? ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ. ಇವತ್ತಿನವರೆಗೂ ಪಾಲಿಸಿ ಡಾಕ್ಯುಮೆಂಟ್ ಬದಲಾವಣೆಯಾಗಿಲ್ಲ. Statement of the Chief Minister, in Belgaum in December, 1990, which is painfully illegal, which is most un-constitutional. I would like to know from the Chief Minister. Is he running a secret service? Or are we going through the administration which we have set up? ಅವರ ಸ್ಟೇಟ್‌ಮೆಂಟ್ ಏನು ಹೇಳುತ್ತದೆ ಎಂದರೆ, Statement of the Chief Minister Sri Bangarappa in Belgaum in December, 1990 at the Officers meeting that dossiers and files were being opened on the individual officers and those who do not function properly will be dealth with severely. ಇದು ಎಲ್ಲಿ ಸಾಧ್ಯವಾಗುತ್ತದೆ ಎಂದರೆ. It is only in the secret service. It is not in the democratic service. ಇದು ಡೈರೆಕ್ಟ್ ಫೃಟ್ ಆಮೇಲೆ ದಿನಾಂಕ 25-1-91ರಲ್ಲಿ 'At the Tea given by him to the secretariat employees he stated that he will deal very serverely with officers who come in his way.' It is not in the way of the people or in the way of implementation of the programmmes and the polices of your party, but in his way. ದಿನಾಂಕ

16-291ರಲ್ಲಿ ಮತ್ತೊಂದು ಮಾತನ್ನು ಹೇಳಿದ್ದಾರೆ. While reffering to the recent transfer of Chief Secretary, he said that he is aware of the Officers who are going on a wrong track in this matter and that he knows how to deal with them. This is what I call Regimentation of the administration,

ನಿರಂಕುಶ ಆಡಳಿತ. ಬಾಯಿ ಬಿಟ್ಟರೆ ಡೊಸಿಯರ್ ತಯಾರು ಮಾಡುತ್ತೇವೆ, ನಿಮ್ಮ ವಿರುದ್ಧ ನೋಡುಕೊಳ್ಳುತ್ತೇವೆ ಎನ್ನುವಂಥದ್ದು. ಶ್ರೀ ರಮೇಶ್ ಎನ್ನುವಂಥ ಒಬ್ಬ ಮಂತ್ರಿಯವರು ಜನವರಿ 91ರಲ್ಲಿ Officers who do not obey orders will transferred within 24 hours. ಎಂದು ಒಂದು ಅಪ್ಪಣೆ ಕೊಡಿಸುತ್ತಾರೆ

*1.20* ಪಿ.ಎಂ

ಇದು ಏನು ಆಡಳಿತ? ನಾನು ಒಂದು ಕಾಲಕ್ಕೆ ಯೋಜನೆ ಮಾಡಿದೆ..

ಶ್ರೀ ಕೆ.ಎಚ್. ರಂಗನಾಥ್ : ಸರ್ಕಾರದ ಆಜ್ಞೆಯನ್ನು ಒಬೇ ಮಾಡಬಾರದೆಂದು ಹೇಳುತ್ತಿದ್ದೀರಾ ಏನು ತಮ್ಮ ಮಾತಿನ ಅರ್ಥ ಸ್ವಲ್ಪ ಸ್ಪಷ್ಟೀಕರಣ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ಸ್ಪಷ್ಟೀಕರಣ ಕೊಡಬೇಕೆಂಬುವುದೇ ನನ್ನ ಉದ್ದೇಶ.

ಶ್ರೀ ಕೆ.ಎಚ್. ರಂಗನಾಥ್ : ಸರ್ಕಾರ ಹೇಳಿದಂತೆ ಕೆಲಸ ಮಾಡಿಹೋದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಾರದಿತ್ತು ಎಂದು ತಮ್ಮ ಅಭಿಪ್ರಾಯವೇ ಆ ಮಾತು ತಪ್ಪಾಗುತ್ತದೆ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಚ್. ಏಕಾಂತಯ್ಯ : ಆದೇಶ ಕಾನೂನು ಬಾಹಿರವಾಗಿದ್ದರೆ, ಆ ಕಾನೂನು ಬಾಹಿರವಾಗುವಂಥಹ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಬೇಕು. ಅದು ಕರ್ನಾಟಕ ಕಾಂಡಕ್ಟ್ ರೂಲ್ಸ್ ಏನಿದೆ, ತಮ್ಮ ಈ ವ್ಯಾವಹಾರಿಕ ನಿಯಮಗಳು ಏನಿದೆ, ಆ ನಿಯಮಗಳ ಪ್ರಕಾರ ಅವರು ಹೇಳಬೇಕು. ಆ ಮಾತನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ ಇಲ್ಲಿ ಗೂಡಾರ್ಥ ಏನೆಂದರೆ, ಕಾನೂನಿನಂತೆ ನೀವು ಕೆಲಸ ಮಾಡಿದರೆ ನಿಮ್ಮ ಮೇಲೆ ಕ್ರಮ ತಗೆದುಕೊಳ್ಳುತ್ತೇವೆ ಎನ್ನುವಂಥ ಪರಿಸ್ಥಿತಿ ಒದಗಿ ಬಂದಿದೆ. ಇದನ್ನು ಬಹುಶಃ ಸನ್ಮಾನ್ಯ ವಿರೋಧಪಕ್ಷದ ನಾಯಕರು ಈ ರೀತಿ ಹೇಳಬೇಕಾಗಿತ್ತು. ಕಾನೂನಿನಂತೆ ಕೆಲಸ ಮಾಡಿದರೆ ನಿಮಗೆ ಪನಿಷ್‌ಮೆಂಟ್, ಕಾನೂನುಬಾಹಿರವಾಗಿ ಕೆಲಸ ಮಾಡಿದರೆ ಪ್ರೊಮೋಷನ್. ಈ ರೀತಿ ಪರಿಸ್ಥಿತಿ ಒದಗಿ ಬಂದಿರುವುದರಿಂದ ಗೊಂದಲ ಉಂಟಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಂಗನಾಥ್‌ರವರು ಏನು ಹೇಳುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರಾದ ನೀವು 11.20ಕ್ಕೆ ಪ್ರಾರಂಭ ಮಾಡಿದಿರಿ. ಈಗ 1 ಗಂಟೆ 20 ನಿಮಿಷವಾಗಿದೆ. ಸುಮಾರು ಎರಡು ಗಂಟೆಗಳ ಸಮಯ ಹೋಗಿದೆ ತಮಗೆ ಇನ್ನು ಎಷ್ಟು ಹೊತ್ತು ಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ : ಪಟ್ಟಿ ಓದಿ ಹೇಳಿದ್ದೇನೆ. ಈಗ ಪ್ರಾರಂಭ ಮಾಡಿದ್ದೇನೆ. Regimentation in administration. ಎಂದು ಪ್ರಾರಂಭ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೂರು ದಿವಸ ನೋ ಕಾನ್‌ಫಿಡೆನ್ಸ್ ಮೋಷನ್ ಮೇಲೆ ಚರ್ಚೆ ನಡೆಯಲಿ ಇದರಲ್ಲಿ ನಾವು ಎಲ್ಲವನ್ನೂ ಮಾತನಾಡಿ ಬಿಡುತ್ತೇನೆ. ಆ ಮೇಲೆ ಡಿಮ್ಯಾಂಡ್ಸ್ ಬಂದಾಗ ತಾವು ಎಷ್ಟು ಸಮಯ ಕೊಡುತ್ತೀರೋ ಅಷ್ಟರಲ್ಲಿ ಮುಗಿಸುತ್ತೇವೆ. ಆದರೆ ಇದರಲ್ಲಿ ನಾವು ಪೂರ್ಣ ವಿವರಕ್ಕೆ

ಹೋಗಬೇಕಾಗುತ್ತದೆ. ಆಗ ಅವರ ಮನಸ್ಸನ್ನು ಒಲಿಸಬಹುದು. ಅವರ ಆತ್ಮಸಾಕ್ಷಿಗೆ ಅನುಗುಣವಾಗಿ ನಮ್ಮ ಪರವಾಗಿ ಬರುತ್ತಾರೆಂಬ ವಿಶ್ವಾಸ ಇಟ್ಟುಕೊಂಡು ನಾವು ವಿವರ ಹೇಳಲು ಹೊರಟಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ ಬಹುಶಃ ಬಿಎಸಿ ಮೀಟಿಂಗ್‌ನಲ್ಲಿ ಈ ರೀತಿ ತೀರ್ಮಾನವಾಗಿದೆ ಒಂದು ದಿವಸವೆಲ್ಲ ಮಾತನಾಡುವುದು ಮಾರನೇ ದಿವಸ ಅವರು ರಿಪ್ಲೈ ಕೊಡುವುದು ಎಂದು ತೀರ್ಮಾನವಾಗಿದೆ. ಆದ್ದರಿಂದ ಮೂರು ದಿವಸ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : 24 ಗಂಟೆ ಮಾತನಾಡುವುದು, 24 ಗಂಟೆ ಉತ್ತರ ಕೊಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಧ್ಯೆ ನಾನು ಮಾತನಾಡಬೇಕೆಂದೇನೂ ಅಲ್ಲ ಅಥವಾ ಅವರು ಕಾಲವನ್ನು ಕಡಿಮೆ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯದಿಂದ ನಾನು ಮಾತನಾಡುತ್ತಿಲ್ಲ. ಅವರು ಯಾವ ರೀತಿ ಹೇಳಬೇಕೆಂದು ಸಿದ್ಧತೆ ಮಾಡಿಕೊಂಡಿದ್ದಾರೆ, ಹೇಳಲಿ. ಮಾನ್ಯ ಸದಸ್ಯರು ಆ ಕಡೆಯವರು ಮತ್ತು ಈ ಕಡೆಯವರು ಮಾತನಾಡಿದ ನಂತರ ಯಾವ ರೀತಿ ಉತ್ತರ ಕೊಡಬೇಕು ಅದನ್ನು ನಾವು ಕೊಡೋಣ. ಆದರೆ, ಇದು ಎಷ್ಟು ಕಾಲ ಚರ್ಚೆಯಾಗಬೇಕು ಎನ್ನತಕ್ಕಂಥ ಒಂದು ಚೌಕಟ್ಟನ್ನು ಹಾಕದೇ ಹೋದರೆ ಟೈಮ್ ಫ್ರೇಮ್ ಹಾಕದೇ ಹೋದರೆ ಇದು ಯಾವಾಗ ಮುಕ್ತಾಯವಾಗುತ್ತದೆ ಎಂಬುದು ಗೊತ್ತಾಗಬೇಕಲ್ಲ. ಯಾವಾಗ ಚರ್ಚೆ ಪ್ರಾರಂಭವಾಗಿದೆ ಎಂದು ನಮಗೆ ಗೊತ್ತಾಗಿದೆ. ಇದು ಮುಕ್ತಾಯವಾಗತಕ್ಕ ವಿಚಾರ ನಮಗೆ ಗೊತ್ತಾಗಿಬಿಟ್ಟರೆ ಬಹಳ ಒಳ್ಳೆಯದು ಏಕೆಂದರೆ, ಪಾರ್ಲಿಮೆಂಟ್‌ನಲ್ಲೂ ಕೂಡಾ ಒಂದೇ ಒಂದು ದಿವಸ ನೋ ಕಾನ್‌ಫಿಡೆನ್ಸ್ ಮೋಷನ್ ತೆಗೆದುಕೊಂಡು ಚರ್ಚೆ ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಮಾನ್ಯ ಅಧ್ಯಕ್ಷರ ಮೂಲಕ ಇದನ್ನು ತಮ್ಮ ಗಮನಕ್ಕೂ ಕೂಡಾ ತರುತ್ತಿದ್ದೇನೆ. ಇದಕ್ಕೆ ಟೈಮ್ ಫ್ರೇಮ್ ಇರಲಿ, ಕಾಲ ಮಿತಿ ಗೊತ್ತಿದ್ದರೆ ಬಹಳ ಒಳ್ಳೆಯದು ಎನ್ನತಕ್ಕ ದೃಷ್ಟಿಯಿಂದ ಹೇಳುತ್ತಿದ್ದೇನೆ ಏಕೆಂದರೆ, ಸಂಪೂರ್ಣವಾಗಿ ಹೀಗೆ ನಡೆಯುತ್ತಿದ್ದರೆ ಇದೇನು ಬಹಳ ದಿವಸಗಳವರೆಗೆ ನಡೆಯುತ್ತಿದೆ ಎನ್ನುವ ಭಾವನೆ ಜನರಲ್ಲಿ ಬಂದೀತು ಆದುದರಿಂದ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಾರ್ಲಿಮೆಂಟಿನಲ್ಲೂ ಕೂಡಾ ಅವತ್ತೇ ಪ್ರಾರಂಭವಾಗಿ ಅವೊತ್ತೆ ವೋಟಿಂಗ್ ಆಗಿ ಎಷ್ಟು ಹೊತ್ತಾದರೂ ಮುಕ್ತಾಯವಾದ ದಾಖಲೆ ಇರತಕ್ಕಂಥ ವಿಚಾರ. ಇವೊತ್ತು ವಿಶ್ವಾಸ ಮತ ಇರಬಹುದು, ಅವಿಶ್ವಾಸ ನಿರ್ಣಯ, ಯಾವುದೇ ಇರಬಹುದು. ಇಲ್ಲೂ ಕೂಡ ಅದೇ ರೀತಿ ಆಗಿದೆ. ಅದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲ ಅನಿಸುತ್ತದೆ, ನನಗೆ ನೆನಪು ಸರಿಯಾಗಿದ್ದರೆ. ಆಗಲೂ ಕೂಡ ಹಾಗೆ ನಡೆದಿದೆ. ಅದು ಸದನದ ದಾಖಲೆಯಾಗಿದೆ. ವಿಶ್ವಾಸ ಮತ ಇರಬಹುದು ಅಥವಾ ಅವಿಶ್ವಾಸ ನಿರ್ಣಯ ಇರಬಹುದು. ಎರಡನ್ನೂ ಒಂದೇ ರೀತಿ ನೋಡ ಬೇಕಾಗುತ್ತದೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದು ಯಾವಾಗ ಮುಕ್ತಾಯವಾಗುತ್ತದೆ ಎಂದು ಗೊತ್ತಾದರೆ ನಾನು ಉತ್ತರಕ್ಕೆ ರೆಡಿಯಾಗಬೇಕಾಗುತ್ತದೆ. ಏಕೆಂದರೆ ಇವೊತ್ತು ನಾನು.....

ಶ್ರೀ ಎಚ್. ಏಕಾಂತಯ್ಯ : ಅಲ್ಲಿ ವಿರೋಧಪಕ್ಷದ ಕಾಂಗ್ರೆಸ್ ಸದಸ್ಯರು ಆ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ವಿಶ್ವಾಸ ನಿರ್ಣಯವನ್ನು ಮಾನ್ಯ ಹೆಗಡೆಯವರು ತಂದಾಗ ಕಾಂಗ್ರೆಸ್ ವಿರೋಧಪಕ್ಷವಾಗಿತ್ತು. ಆವೊತ್ತು ಕಾಂಗ್ರೆಸ್ ವಿರೋಧಪಕ್ಷವಾಗಿತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ವಿಶ್ವಾಸ ನಿರ್ಣಯವನ್ನು ಮಂಡಿಸಿದ್ದರು. ಮಂಡಿಸಿದಂಥ ಕಾಲದಲ್ಲಿ ಕಾಂಗ್ರೆಸ್ ಪಕ್ಷದ, ಅಂದಿನ ವಿರೋಧಪಕ್ಷದ ಸದಸ್ಯರು ಅದರಲ್ಲಿ ಭಾಗವಹಿಸದೇ ಇರುವುದರಿಂದ ಜಾಗ್ರತೆ ಮುಗಿಯಿತು.

ಶ್ರೀ ಎಸ್. ಬಂಗಾರಪ್ಪ : ಅದೇನೇ ಇರಲಿ. ಕಾಲಮಿತಿ ನಿಗಧಿ ಮಾಡದೇ ಇದ್ದರೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಆ ಕಡೆ ಕುಳಿತಿರುವವರು ಈ ಕಡೆ ಕುಳಿತಿರುವವರು ಯಾರೇ ಇರಬಹುದು, ಇದು ಎಷ್ಟು ಹೊತ್ತು ಚರ್ಚೆಯಾಗುತ್ತದೆಂದು ತಾವು ಹೇಳದೇ ಇದ್ದರೆ ಕಷ್ಟವಾಗುತ್ತದೆ. ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೂ ಕೂಡಾ ತಂದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೆ ನಾನು ಈ ಆಡಳಿತದಲ್ಲಿ.....

ಅಧ್ಯಕ್ಷರು : ಏನು ಮಾಡಬೇಕೆದು ಹೇಳಿ...

(ಗೊಂದಲ)

ಅಧ್ಯಕ್ಷರು : ಕ್ಷಮಿಸಬೇಕು, ನಾನು ಮಧ್ಯೆ ಪ್ರವೇಶ ಮಾಡುತ್ತಿದ್ದೇನೆ. ಈಗ ನನ್ನ ಹತ್ತಿರ 18ಮಾನ್ಯ ಸದಸ್ಯರು ವಿರೋಧಪಕ್ಷದ ಪರವಾಗಿ ಭಾಷಣ ಮಾಡಬೇಕೆಂದು ಹೆಸರುಗಳನ್ನು ಕೊಟ್ಟಿದ್ದಾರೆ, ಆಡಳಿತ ಪಕ್ಷದ ಪರವಾಗಿ ನಾಲ್ಕು ಹೆಸರುಗಳು ಬಂದಿವೆ....

ಶ್ರೀ ಆರ್.ವಿ. ದೇಶಪಾಂಡೆ : ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ಸಮಗ್ರವಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಸದನಕ್ಕೆ, ಬಾಕಿ ಸದಸ್ಯರಿಗೆ ಎಷ್ಟು ಹೊತ್ತು ಈ ಚರ್ಚೆ ನಡೆಯುತ್ತದೆಂದು ಗೊತ್ತಾಗಬೇಕಲ್ಲ. ಈಗಾಗಲೇ 2 ಗಂಟೆಯಾಗಿದೆ. ಎಷ್ಟು ಗಂಟೆ ಚರ್ಚೆಯಾಗುತ್ತದೆ ಎನ್ನುವುದನ್ನಾದರೂ ತೀರ್ಮಾನ ಮಾಡಬೇಕಾಗಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ನಾವು 2-3 ದಿನ ಚರ್ಚೆ ಮಾಡಬೇಕಾಗುತ್ತದೆ. ಅವರ ಕಡೆ ಎಷ್ಟು ಜನ ಮಾತನಾಡುತ್ತಾರೆಂಬುದನ್ನು ಅವಲಂಬಿಸಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಅಧ್ಯಕ್ಷರು : ಬಹಳ ಮಂದಿ ಮಾನ್ಯ ಸದಸ್ಯರುಗಳು ಬೆಳಿಗ್ಗೆ ಬ್ರೇಕ್‌ಫಾಸ್ಟ್ ಮಾಡಿಕೊಂಡು ಬಂದಿದ್ದಾರೋ ಇಲ್ಲವೇ ಗೊತ್ತಿಲ್ಲ. ಅವರು ಮಧ್ಯಾಹ್ನವೂ ಕುಳಿತುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಜುಟ್ಟಲ್‌ರವರು ಬ್ರೇಕ್ ಫಾಸ್ಟ್ ಮಾಡಿಲ್ಲ ಅವರು ಎಷ್ಟು ನೊಂದಿದ್ದಾರೆ. ನಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದೇ ಪರಿಸ್ಥಿತಿಯಲ್ಲಿ ಇವರೂ ಇದ್ದರೆ ಇವರೂ ಸಹ ನೊಂದಿರುತ್ತಾರೆ. ಆದ್ದರಿಂದ ಅವರ ಮೇಲೆ ಸ್ವಲ್ಪ ಅನುಕಂಪವಿಲ್ಲದೆ ವಿರೋಧ ಪಕ್ಷದ ನಾಯಕರೆ? ಆದುದರಿಂದ ಈಗ ಲಂಚ್‌ಗೆ ಒಂದು ಘಂಟೆ ಸಭೆಯನ್ನು ಮುಂದೂಡೋಣ.

ಶ್ರೀ ವಾಟಾಳ್‌ನಾಗರಾಜ್ : ಇವತ್ತು ನಾವು 9 ಗಂಟೆಗೆ ಸೇರಿದ್ದೇವೆ, ಪ್ರತಿದಿನ ಬೆಳಿಗ್ಗೆ 9 ರಿಂದ 3 ಗಂಟೆಯವರೆಗೆ ಸೇರತಕ್ಕದ್ದು ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ ಅದರಂತೆ ಇವತ್ತು 3 ಗಂಟೆಯವರೆಗೂ ನಾವು ಮಾತನಾಡುತ್ತೇವೆ, ನಾಳೆ ಪುನಃ ಸೇರೋಣ. ಇನ್ನೂ ನಾವು ಎಷ್ಟೆಷ್ಟು ಹೊತ್ತಿಗೆ ಸೇರಬೇಕೆಂದು ತೀರ್ಮಾನ ಮಾಡಿಕೊಂಡಿಲ್ಲ, ಒಂದು ತೀರ್ಮಾನದ ಪ್ರಕಾರ 9 ರಿಂದ 3 ಗಂಟೆಯವರೆಗೆ ಮತ್ತೆ ಕಾಲ ಬದಲಾವಣೆ ಮಾಡುವುದಕ್ಕೆ ನಾವು ಸೇರಿಲ್ಲ, ತೀರ್ಮಾನ ತೆಗೆದುಕೊಂಡಿಲ್ಲ, ತಾವು ಅಪ್ಪಣೆ ಕೊಡಿಸಿದಗ ಪ್ರಕಾರ ಇವತ್ತು 3 ಗಂಟೆಯವರೆಗೆ ಸದನ ನಡೆಯುತ್ತದೆ. ಆದುದರಿಂದ 3 ಗಂಟೆಯವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ನಾಳೆಯೂ ಮಾತನಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ

ಶ್ರೀ ಎಂ.ವಿ. ವೆಂಕಟಪ್ಪ : ಇವತ್ತು 3 ಗಂಟೆಗೆ ಮುಗಿಯುವಂತಿದ್ದರೆ 3 ಗಂಟೆಯೊಳಗೆ ಚರ್ಚೆ ಮುಗಿಸಿ ನಾಳೆ ರಿಪ್ಲೆ ಆಗಬೇಕು. ಅಷ್ಟೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ತೀರ್ಮಾನವನ್ನು ಕೊಡುವವರು ತಮಗೆಲ್ಲರಿಗೂ ಗೊತ್ತಿರುವಂತೆ ಇಷ್ಟು ಪ್ರಮುಖವಾದಂತಹ ಒಂದು ಅವಿಶ್ವಾಸ ಗೊತ್ತುವಳಿ ಸೂಚನೆ ಇಲ್ಲಿ ನಡೆಯುತ್ತಿದೆ, ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾಗುತ್ತಿದೆ. ಇವತ್ತು ಸಾಕಷ್ಟು ಸಂಗತಿಗಳನ್ನು ತಿಳಿಸಬೇಕೆಂದು ಅನೇಕ ದಾಖಲೆಗಳೊಂದಿಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಆದುದರಿಂದ ನಾವು ವಿನಂತಿ ಮಾಡುವುದೇನೆಂದರೆ ಕನಿಷ್ಟ ಮೂರು ದಿವಸವಾದರೂ ತಾವು ಅವಕಾಶ ಮಾಡಿಕೊಡಿ. ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಬಜೆಟ್ ದೃಷ್ಟಿಯಿಂದ ನಾವು ಬಿಲ್ಲನ್ನು ಪಾಸ್ ಮಾಡಿಕೊಡಬೇಕಾಗುತ್ತದೆ. ಅನೇಕರು ಚರ್ಚೆಯಲ್ಲಿ ಭಾಗವಹಿಸುತ್ತಿರುವುದರಿಂದ ಆ ಸಮಯದಲ್ಲಿ ಹೆಚ್ಚಿನ ಅವಕಾಶ ಬೇಕಾಗುವುದಿಲ್ಲವೆಂದು ನನ್ನ ಭಾವನೆ. ಆದುದರಿಂದ 3 ದಿನ ಪೂರ್ಣ ಅವಕಾಶ ಕೊಟ್ಟು ಅರ್ಧ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು ರಿಪ್ಲೆ ಕೊಡುವುದಾದರೆ ಸ್ವಲ್ಪ ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ಚರ್ಚೆ ಮಾಡಲು ಮೂರು ದಿನ ಅವಕಾಶ ಕೊಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದರಲ್ಲಿ ಯಾರ್‍ಯಾರು ಹೆಚ್ಚು ಹೆಚ್ಚು ಅವಕಾಶ ತೆಗೆದುಕೊಳ್ಳುತ್ತಾರೋ ಅವರಿಗೆ ಬಜೆಟ್‌ನಲ್ಲಿ ಕಡಿಮೆ ಅವಕಾಶ ಕೊಡಿ..

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಊಟ ಮಾಡದೆ ಬಂದಿರತಕ್ಕ ಜನರು ಇದ್ದಾರೆ. ಬಹಳ ಹಿಂದೆ ಸದನ ಒಂದು ಗಂಟೆಗೆ ಪ್ರಾರಂಭವಾಗುತ್ತಿತ್ತು ಊಟ ಮಾಡಿಕೊಂಡು ಬಂದಮೇಲೆ ಸದನ ಒಂದು ಗಂಟೆಗೆ ಆರಂಭವಾಗುತ್ತಿತ್ತು 6-7-8 ಗಂಟೆಯವರೆಗೆ ನಡೆಯುತ್ತಿತ್ತು ಆದರೆ ಈಗ ಊಟವೂ ಮಾಡಬೇಕು, ಸಮಯವು ಇಲ್ಲ ಎಂದು ಹೇಳತಕ್ಕಂತಹ ಪರಿಸ್ಥಿತಿ ಬಂದಾಗ ಏನು ಮಾಡಬೇಕೆಂದು ಮಾನ್ಯ ಅಧ್ಯಕ್ಷರೆ ನಿಶ್ಚಯಿಸಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ಇದಕ್ಕೆ ಹೆಚ್ಚಿನ ಸಮಯ ಕೊಡಬೇಕಾಗುತ್ತದೆ.

ಡಾ ಎನ್.ಬಿ. ನಂಜಪ್ಪ : ಮಾನ್ಯ ಅಧ್ಯಕ್ಷರೆ ಬೆಳಿಗ್ಗೆಯಿಂದ ಇಲ್ಲಿ ಏನು ನೋಡಿದರೂ ಕೂಡ ಒಂದು ತರಹ ಕನ್‌ಫ್ಯೂಷನ್ ಪ್ರಾರಂಭವಾಗಿದೆ.

ಅಧ್ಯಕ್ಷರು : ವಿಶ್ವಾಸ-ಅವಿಶ್ವಾಸ ಬರುವಾಗ ಕನ್‌ಫ್ಯೂಷನ್‌ಗೆ ಅವಕಾಶವಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ವಿರೋಧಪಕ್ಷದ ನಾಯಕರ ಮಾತು ಗಡಸಾಗಿರುತ್ತದೆ ಬಿಗಿ ಇರುತ್ತದೆ ಎಂದು ಅಂದುಕೊಂಡಿದ್ದೆವು ಬಿಗಿ ಇಲ್ಲ. ನಮ್ಮ ಹಳ್ಳಿ ಕಡೆ ಕಾಟಾ ಕುಸ್ತಿ ಎಂದು ಮಾಡುತ್ತಾರೆ. ಹಾಗೆ ಸ್ವಲ್ಪ ಕಾಟಾ ಕುಸ್ತಿ ಮಾಡಿದರೆ ಎಲ್ಲರಿಗೂ ಬಿಗಿ ಬರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಕಾಟಾ ಕುಸ್ತಿ ಮಾಡಿದರೆ ಅವರಿಗೆ ಉಸಿರೇ ಇರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಇನ್ನು ಮೇಲೆ ಅವರಿಗೆ ಕಾಟಾ ಕುಸ್ತಿ ಏನು ಎಂದು ತೋರಿಸುತ್ತೇನೆ.

ಶ್ರೀ ಸಿ.ಬೈರೇಗೌಡ : ಶಿವರಾಮೇಗೌಡರು ನಾವು ಬಹಳ ಸೇಫ್ ಆಗಿದ್ದೇವೆ ಎನ್ನುತ್ತಾರೆ. ನಿಜ ಅವರು ಸೇಫ್‌ನಲ್ಲೇ ಇರುವುದು

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಕೇವಲ ಪತ್ರಿಕಾ ಹೇಳಿಕೆಯನ್ನು ಕೊಟ್ಟರು ಎನ್ನುವ ಒಂದೇ ಒಂದು ಕಾರಣಕ್ಕಾಗಿಯೇ ರಾಜ್ಯದಲ್ಲಿ ಆಗ ಮುಖ್ಯ ಕಾರ್ಯದರ್ಶಿಯಾಗಿದ್ದಂಥ ಶ್ರೀಮಾನ್ ಶಂಕರ್‌ನಾರಾಯಣ್‌ರವರನ್ನು ಅಮಾನತ್ತಿನಲ್ಲಿಟ್ಟರು. ಒಂದು ನ್ಯಾಯಾಂಗ ವ್ಯವಸ್ಥೆ ಅಂದರೆ ಲೋಕಾಯುಕ್ತ ಸಂಸ್ಥೆ.....

ಶ್ರೀ ಕೆ.ಎಸ್. ಕಾಳಮರಿಗೌಡ : ಇದನ್ನು ಎಲ್ಲಿಯವರೆಗೆ ಮುಂದುವರೆಸಿಕೊಂಡು ಹೋಗುವುದು ಎನ್ನುವುದು ಸಭೆಗೆ ಗೊತ್ತಾಗಲಿಲ್ಲ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ಇವತ್ತು ಮೂರು ಗಂಟೆಯವರೆಗೆ ಚರ್ಚೆ ನಡೆದರೆ ನಾಳೆ ಮುಖ್ಯ ಮಂತ್ರಿಯವರ ರಿಪ್ಲೈ ಆಗುತ್ತದೋ ಅಥವಾ ಇವತ್ತು ಮೂರು ಗಂಟೆಗೆ ಮುಕ್ತಾಯವಾಗುತ್ತದೋ ಅಥವಾ ಮೂರು ಗಂಟೆಗೆ ಸೇರಿ ಇವತ್ತು ಒಂದು ದಿವಸಕ್ಕೆ ಮುಗಿಸುತ್ತಾರೋ ನಮಗೆ ಯಾವುದಾದರೂ ಒಂದು ಅವಧಿ ಕಂಡಿಷನ್ ಆಗಿ ಗೊತ್ತಾಗಬೇಕಲ್ಲ.

ಶ್ರೀ ಕೆ.ಎಸ್. ಕಾಳಮರಿಗೌಡ : ಮಾನ್ಯ ಅಧ್ಯಕ್ಷರೇ, ತಾವು ಏನಾದರೂ ಅಧಿಕಾರ ತೆಗೆದುಕೊಂಡು ಬಿಸಿನೆಸ್ ಅಡ್‌ವೈಸರಿ ಕಮಿಟಿ ಇದೆಯಲ್ಲಾ ಅದರಲ್ಲೂ ಹೇಳುತ್ತೇನೆ ಎಂಬ ಅಭಿಪ್ರಾಯವನ್ನು ತಾವು ಕೊಡಬೇಕಾಗುತ್ತದೆ. ಅಥವಾ ಹೌಸ್ ಒಪೀನಿಯನ್ ತೆಗೆದುಕೊಂಡು ಎಷ್ಟು ದಿವಸಕ್ಕೆ ಅದನ್ನು ಮುಕ್ತಾಯ ಮಾಡುತ್ತೇವೆ ಎನ್ನತಕ್ಕಂಥಾದನ್ನು ನಮಗೆ ಹೇಳಬೇಕಾಗುತ್ತದೆ. ತಾವು ಏನಾದರೂ ಬಿ.ಎ.ಸಿ.ಯಲ್ಲಿ ತೀರ್ಮಾನ ಮಾಡುತ್ತೇವೆ ಎನ್ನುವುದಾದರೆ ಅದಕ್ಕೂ ಸಂತೋಷ.

ಬಿಸ್‌ನೆಸ್ ಅಡ್ವೈಸರಿ ಕಮಿಟಿ ಮುಂದೆ ಇಟ್ಟು ಆ ಮೇಲೆ ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ಬಿಸ್‌ನೆಸ್ ಅಡ್ವೈಸರಿ ಕಮಿಟಿ ಮುಂದೆ ಇಟ್ಟು ಆ ಮೇಲೆ ತಮಗೆ ತಿಳಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಕೇವಲ ಪತ್ರಿಕಾ ಸಂದರ್ಶನವನ್ನು ಕೊಟ್ಟರು ಎನ್ನುವ ಒಂದೇ ಕಾರಣಕ್ಕಾಗಿ ರಾಜ್ಯದ ಅಂದಿನ ಮುಖ್ಯಕಾರ್ಯದರ್ಶಿಯಾಗಿದ್ದ ಶ್ರೀಮಾನ್ ಎಂ. ಶಂಕರನಾರಾಯಣ್ ಅವರನ್ನು ಅಮಾನತ್ತಿನಲ್ಲಿ ಇಡಲಾಯಿತು. ಇವರ ಬಗ್ಗೆ ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಶ್ರೀ ವೀರೇಂದ್ರಪಾಟೀಲರು a man of uniumpeachable integrity ಎಂದು ಹೇಳಿದರು. ಇದು ಇಂಗ್ಲೀಷ್‌ನ ಪದ. ಅವರು ಪತ್ರಿಕಾ ಹೇಳಿಕೆ ಕೊಟ್ಟರು. ಆದರೆ ಒಂದು ನ್ಯಾಯಾಂಗ ವ್ಯವಸ್ಥೆ, ಲೋಕಾಯುಕ್ತ ಎನ್ನುವಂಥ ಒಂದು ಸಂಸ್ಥೆ ಮೇಲ್ನೋಟಕ್ಕೆ ಕಂಡುಬಂದಂತಹ ಅಪಾರ ಹಣ ಗಳಿಕೆ, ಭ್ರಷ್ಟಾಚಾರ ಇದನ್ನು ಸಾಕಷ್ಟು ತನಿಖೆ ನಡೆಸಿ ಕಾನೂನು ರೀತಿಯ ಸಂಸ್ಪೆಂಡ್ ಮಾಡಿ ಎಂದು ಶಿಫಾರಸು ಮಾಡಿದರೆ ಅಂಥ ಅಧಿಕಾರಿಗಳಿಗೆ ಸಸ್ಪೆನ್‌ಷನ್ ಆಗುವುದಿಲ್ಲ, ಅಮಾನತ್ತಿನಲ್ಲಿ ಇಡಲಾಗುವುದಿಲ್ಲ, ಪ್ರೊಮೋಷನ್ ಕೊಡುತ್ತಾರೆ, ಉನ್ನತ ಖಾತೆ ಸಿಗುತ್ತದೆ. ಲೋಕಾಯುಕ್ತದಲ್ಲಿ ಪ್ರಮಾಣಿಕವಾಗಿ ಸೇವೆಗೆ ಸಲ್ಲಿಸತಕ್ಕಂಥ ಶ್ರೀಮಾನ್ ಎ.ಜಿ.ಆನಂದನ್ ಎನ್ನುವರಿಗೆ ಪ್ರೆಸಿಡೆನ್‌ಷಿಯಲ್ ಮೆಡಲ್ ಬರುತ್ತದೆ. ರಾಷ್ಟ್ರಾಧ್ಯಕ್ಷರು ಮೆಡಲ್ ಕೊಡುತ್ತಾರೆ. ಅಂಥ ಮೆಡಲ್ ಕೊಡಬೇಕೆಂದು ಸರ್ಕಾರ ರೆಕಮಂಡ್

ಮಾಡುತ್ತದೆ ಆದರೆ ಅವರನ್ನು ಮತ್ತು ವೈ.ಎಸ್. ರಾವ್ ಎನ್ನತಕ್ಕಂಥವರನ್ನು ಲೋಕಾಯುಕ್ತದಿಂದ ಯಾವ ಕಾರಣವೋ ಏನೋ ಗೊತ್ತಿಲ್ಲ ತೆಗೆದಿದ್ದಾರೆ.

ಅಂದರೆ, ರಾಷ್ಟ್ರಪತಿ ಪದಕ, ಪ್ರಶಸ್ತಿ ಬರತಕ್ಕಂಥ ಒಬ್ಬ ಅಧಿಕಾರಿ ಲೋಕಾಯುಕ್ತದಲ್ಲಿ ಕೆಲಸ ಮಾಡಲಿಕ್ಕೆ ಅನರ್ಹನಾಗುತ್ತಾನೆ, ಈ ಸರ್ಕಾರದಲ್ಲಿ ನಾವು ಬಹಳ ವಿಶೇಷವಾದಂಥ ಪರಿಸ್ಥಿತಿಯಲ್ಲಿ ಇದನ್ನು ಏತಕ್ಕೆ ಚರ್ಚೆ ಮಾಡುತ್ತಿದ್ದೇನೆಂದರೆ, ಯಾರ ವಿರುದ್ಧ ಎಕ್ಸೈಜ್ ಇಲಾಖೆಯಲ್ಲಿ ಅಪಚಾರ ಮಾಡಿದ್ದೀರಿ ಎಂದು ಆಪಾದನೆ ಮಾಡಿ ಲೋಕಾಯುಕ್ತ ತನಿಖೆ ಮೂಲಕ ಸಸ್ಪೆನ್‌ಷನ್‌ಗೆ ರೆಕಮೆಂಡ್ ಮಾಡಿತ್ತೋ ಅವರಿಗೆ ಈ ರಾಜ್ಯದ ಆರ್ಥಿಕ ಜವಾಬ್ದಾರಿಯನ್ನು ಕೊಟ್ಟು, ಫೈನಾನ್ಸ್ ಸೆಕ್ರೆಟರಿ ಎಂದು ಮಾಡಿ, ಎಕ್ಸೈಜ್ ಇಲಾಖೆಯನ್ನು ಅವರಿಗೆ ಅಟ್ಯಾಚ್ ಮಾಡುತ್ತಾರೆ. ಹೀಗಾದರೆ ದೇಶದಲ್ಲಿ ಏನು ಉಳಿಯುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವೊತ್ತು ಪ್ರಮುಖವಾದಂಥ ವಿಷಯದ ಬಗ್ಗೆ ನಾವು ಚರ್ಚೆ ಮಾಡುತ್ತಿರಬೇಕಾದರೆ ಛೀಫ್ ಸೆಕ್ರೆಟರಿಯಿಂದ ಹಿಡಿದು ಯಾವುದೇ ಪ್ರಮುಖ ಅಧಿಕಾರಿ ಆ ಸ್ಥಾನದಲ್ಲಿ ಇಲ್ಲ.

MR. SPEAKER : It is none of our concern. It should not be our concern. It is totally irrelevant....

SRI B.S YEDIYURAPPA : I know they are not part of the House

ಆದರೆ ಅಗತ್ಯ ಇದೆ ಎಂದು ನಾನು ಹೇಳುತ್ತೇನೆ. ಇಲ್ಲ ಅಂದರೆ ಅದರ ಬಗ್ಗೆ ನನ್ನ ಅಬ್ಜೆಕ್ಷನ್ ಇಲ್ಲ.

ಅಧ್ಯಕ್ಷರು : ನಿಮಗೆ ಅಗತ್ಯ ಇದೆ ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾನು ತಮ್ಮನ್ನು ಕೇಳುತ್ತೇನೆ. ತಾವು ಏನು ಅಪ್ಪಣೆ ಕೊಡುಸುತ್ತೀರೋ ಅದರಂತೆ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು : ಅವರ ಅವಶ್ಯಕತೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಗತ್ಯ ಎಂದು ನನಗನ್ನಿಸಿತು. ತಾವು ಅಗತ್ಯ ಇಲ್ಲ ಅಂದರೆ ನನದೂ ಏನು ಅಬ್ಜೆಕ್ಷನ್ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ರಾಜ್ಯದ ಹಣಕಾಸು ವ್ಯವಸ್ಥೆ ಇದೆಯಲ್ಲಾ ಇದು ಮುಖ್ಯಮಂತ್ರಿಗಳು ಇರಲಿ, ಇಲ್ಲದೇ ಇರಲಿ, ಅಂದರೆ ಅರ್ಥಾತ್ ಯಾವುದೇ ಮುಖ್ಯಮಂತ್ರಿ ಇರಲಿ ರಾಷ್ಟ್ರಪತಿ ಆಡಳಿತ ಇರಲಿ, he is the brain thrust of the State. ಆತನ ಮೇಲೆ ಸಂಪೂರ್ಣವಾದ ಜವಾಬ್ದಾರಿ ಇರುತ್ತದೆ, ನಿಯಂತ್ರಣ ಇರುತ್ತದೆ. ಹತೋಟಿ ಇರುತ್ತದೆ. ಆದ್ದರಿಂದ ಈ ಒಂದು ಅರ್ಥ ಖಾತೆಯ ಕಾರ್ಯದರ್ಶಿಯವರನ್ನು ಆಯ್ಕೆ ಮಾಡುವಾಗ ಆತನ ಹಿನ್ನೆಲೆಯನ್ನು ನೋಡುತ್ತೇವೆ. ಇವೊತ್ತು ನಮ್ಮ ಫೈನಾನ್ಸ್ ಸೆಕ್ರೆಟರಿಯವರು ಏನಿದ್ದಾರೆ ಅವರ ಹಿಂದಿನ ಎಲ್ಲಾ ರೆಕಾರ್ಡ್‌ಗಳನ್ನು ನೋಡಿದೆ. ಎಲ್ಲಿಯೂ ಸಹ ಅವರು ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡಿದ ದಾಖಲೆಗಳು ಇಲ್ಲ, ಇವರು ಈ ಆರ್ಥಿಕ ಇಲಾಖೆಗೆ ಕಾರ್ಯದರ್ಶಿ ಮೇಲಾಗಿ ಕೇಂದ್ರದ ಪ್ಲಾನಿಂಗ್ ಮತ್ತು ಫೈನಾನ್ಸ್ ಎರಡು ಡಿಪಾರ್ಟ್‌ಮೆಂಟಿನಲ್ಲಿ he becomes a link. ರಾಜ್ಯದ ದುರ್ದೈವ ಏನೆಂದರೆ, ಇವೊತ್ತು ಕೇಂದ್ರದ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿಯಾಗಲಿ ಫೈನಾನ್ಸ್ ಇಲಾಖೆಯಲ್ಲಾಗಲಿ ರಾಜ್ಯಸರ್ಕಾರದ ಅಹವಾಲುಗಳನ್ನು ತೆಗೆದುಕೊಂಡು ಹೋದರೆ ಯಾರ ಚಾರಿತ್ರ್ಯ ಪ್ರಶ್ನಾತೀತವಾಗಿ ಇನ್ನೂ ಸುಪ್ರಿಮ್ ಕೋರ್ಟಿನಲ್ಲಿ ಉಳಿದಿದೆಯೋ ಸೆಂಟ್ರಲ್ ಟ್ರಿಬ್ಯುನಲ್‌ನಲ್ಲಿ ವಿಚಾರಣೆಗಾಗಿ ಉಳಿದಿದೆಯೋ ಆ ಮನುಷ್ಯ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಈ ರಾಜ್ಯವನ್ನು

ಪ್ರತಿನಿಧಿಸತಕ್ಕಂಥ ಗೌರವ ಉಳಿಯುತ್ತದೆಯೇ? ನಾವು ರಾಜ್ಯದ ಜನ ಇದನ್ನು ಒಪ್ಪಿಕೊಳ್ಳಬೇಕೆ? ಇದು ಬಹಳ ಮುಖ್ಯವಾದಂಥ ಪೋರ್ಟ್‌ಫೋಲಿಯೋ ಮಾನ್ಯ ಅಧ್ಯಕ್ಷರೆ, ವೈಯುಕ್ತಿಕವಾಗಿ ನಾನು ಯಾವ ಅಧಿಕಾರಿಯ ಬಗ್ಗೆ ಕೇಳುವುದಿಲ್ಲ, ನಾನು ಇಷ್ಟೇ ಪ್ರಶ್ನೆ ಮಾಡುತ್ತೇನೆ. ಫೈನಾನ್ಸ್ ಸೆಕ್ರೆಟರಿ ಆಗತಕ್ಕಂಥವರಿಗೆ ಫೈನಾನ್ಸ್‌ಷಿಯಲ್ ಎಕ್ಸ್‌ಪೀರಿಯನ್ಸ್ ಏನಿದೆ, ಬ್ಯಾಕ್‌ಗ್ರೌಂಡ್ ಏನಿದೆ good image ಏನಿದೆ ಎಂದು ಬಹಳ ಗಂಭೀರವಾಗಿ ರಾಜ್ಯದ ದೃಷ್ಟಿಯಿಂದ ಆಲೋಚನೆ ಮಾಡತಕ್ಕಂಥಾದ್ದು ಮುಖ್ಯ ಶಂಕರ್‌ನಾರಾಯಣ್ ಅವರನ್ನು ತೆಗೆದಿದ್ದಾಯಿತು. ಆದರೆ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದು ಯಾರನ್ನು ? ಈಗ ಇರತಕ್ಕಂಥ ಮುಖ್ಯ ಕಾರ್ಯದರ್ಶಿ ಬಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಸಸ್‌ಪೆಂಡ್ ಮಾಡಿ ಎಂದು ರೆಕಮೆಂಟ್‌ಮಾಡಿತು. ಲೋಕಾಯುಕ್ತ ರೆಕಮೆಂಡ್‌ಮಾಡಿತು. ಜಯರಾಮನ್ ಎನ್‌ಕ್ವಯಿರಿ ಕಮಿಟಿ ರೆಕಮೆಂಡ್ ಮಾಡಿತು. ಈ ಎಲ್ಲಾ ಕಮಿಟಿಗಳು ಮಾಡಿದಂಥ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಳ್ಳದೇ ಪತ್ರಿಕಾ ಹೇಳಿಕೆ ಕೊಟ್ಟರು ಎನ್ನುವ ಕಾರಣಕ್ಕಾಗಿ ಹಿಂದಿನ ಛೀಫ್ ಸೆಕ್ರೆಟರಿಯವರನ್ನು ಸಸ್ಪೆಂಡ್ ಮಾಡಿ ಇವರನ್ನು ಮುಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಿದರು.

ಅದು ಸರ್ಕಾರದ ನಿರ್ಧಾರ. ಸೆಲೆಕ್ಷನ್ ಪೋಸ್ಟ್ ಮಾಡಿದರು. ಆದರೆ ಹಿಂದಿನ ಕಾಂಗ್ರೆಸ್ ಸರ್ಕಾರ ಅವರನ್ನು ಹೊರಗಡೆ ಇಟ್ಟಿರತಕ್ಕಂಥದ್ದಕ್ಕೆ ಕಾರಣವೇನು? ಅದನ್ನು ಕೂಡ ಈ ಸರ್ಕಾರವೇ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ದುರಂತ ಕತೆಗಳು ನನ್ನಲ್ಲಿ ಸಾಕಷ್ಟು ಇವೆ. ಮಾಲ್‌ಅಡ್ಮಿನಿಸ್ಟ್ರೇಷನ್ ಆಗುತ್ತಿದೆ. ಇವತ್ತು ನಾನು ಇಂಟಿಮೇಡೇಷನ್ ಎಂದು ಹೇಳುವಾಗ, ನಿರಂಕುಶ ಆಡಳಿತವೆಂದು ಹೇಳುವಾಗ ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಕೆ.ಎಂ.ಪೊನ್ನಪ್ಪ ಎನ್ನತಕ್ಕಂಥವರು ಎಕ್ಸೈಸ್ ಕಮೀಷನರಾಗಿದ್ದರು. ನನಗೆ ಗೊತ್ತಿರುವಹಾಗೆ, ರಾಜ್ಯಕ್ಕೆ ಗೊತ್ತಿರುವಹಾಗೆ, ಆಡಳಿತ ವ್ಯವಸ್ಥೆಗೆ ಗೊತ್ತಿರುವಹಾಗೆ, he is suppose to be the honest and upright officer....

MR. SPEAKER : Is this House competent to write confidential Reports-I was really concerned. I thought that was exclusive privilege and prerogative of the Government and does it becomes a subject matter of discussion here in this House. I feel that you can make just passing remarks....ಏತಕ್ಕೆಂದರೆ ಮುಂದೆ ಈ ಶಾಸನ ಸಭೆಯ ವರದಿಯನ್ನು ಓದತಕ್ಕಂಥವರಿಗೆ ಇದು ಏನು ಸದನದಲ್ಲಿ ಆಫೀಸರ್‌ಗಳ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳನ್ನು ಚರ್ಚೆ ಮಾಡುತ್ತಿದ್ದಾರೋ ಏನೂ ಎನ್ನತಕ್ಕಂಥ ಅಭಿಪ್ರಾಯ ಬರಬಾರದು. ಒಂದು ಪಾಯಿಂಟ್ ಹೇಳಿ ಅಂದರೆ ಅಧಿಕಾರಿಗಳ ವರ್ಗಾವಣೆಯ ಬಗ್ಗೆ ಸಾಕಷ್ಟು ಲೋಪದೋಷಗಳಿವೆ ಎಂದು ಹೇಳಿ ಮುಂದಿನ ವಿಷಯಕ್ಕೆ ಹೋದರೆ ಚೆಂದ ಎಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ ; ಮಾನ್ಯ ಅಧ್ಯಕ್ಷರೆ, ನಾನು ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆ ಹೋಗುತ್ತಿದ್ದೇನೆಂದರೆ, Practically we have reached a stage that the Government of India i.e. the Ministry of Home should take note of it. ಅಂಥ ಸ್ಥಿತಿಗೆ ನಾನು ಆಡಳಿತದಲ್ಲಿ ತಲಪಿಬಿಟ್ಟಿದ್ದೇವೆ. ನಾನು ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಒಂದು ಸರ್ಕುಲರ್ ಅನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾವು ಎಲ್ಲಿಗೆ ಹೋಗಿದ್ದೇವೆಂದರೆ, ಇವತ್ತು ಈ ರಾಜ್ಯದ ಹಿರಿಯ ಐ.ಎ.ಎಸ್. ಅಧಿಕಾರಿಗಳ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ಯಾರು ಬರೆಯಬೇಕು ಎನ್ನುವುದು ಪ್ರಶ್ನೆ? ಮಾನ್ಯ ಅಧ್ಯಕ್ಷರೇ.....

Mr. SPEAKER : I did not mean to provoke you. ನೀವು ಏನನ್ನೂ ಹುಡುಕುತ್ತಿದ್ದೀರಲ್ಲ!

SRI D.B. CHANDRE GOWDA : Having provoked I should produce something.... No.DPAR 337 SAS 91, Government of Karnataka Karnataka Government Secretariat, Vidhana Soudha, Bangalore dated 18th July, 1991.

**OFFICIAL MEMORANDUM**

Writing and Reviewing of confidential Reports during the year 1990-91.

Sri M. Shankaranarayanan, IAS then Chief Secretary to Government has been placed under suspension, therefore, the present Chief Secretary to Government Sri N.K. Prabhakar Rao, shall be the writing authority and reviewing authority during the year 1990-91 as the case may be in respect of officers mentioned in the Annexure OM No.DPAR 17 SAS dt.2.9.86.

Confidential reports should have been done by Sri M. Shankaranarayanan. The present Chief Secretary did not complete, atleast three months period from the date of occupying the office to write the confidential reports. This becomes unconstitutional. We shall not allow even in the administration. Unconstitutional thing to happen. I am trying to write to the Home Ministry, Government of India to put a stop to such things I am seriously thinking on this. Before that I am trying to alert this Government, ಆ ಕಾರಣಕ್ಕಾಗಿ ನಾವು ಅಡ್ಮಿನಿಸ್ಟ್ರೇಷನ್‌ನಲ್ಲಿ ಎಷ್ಟು ದೂರಕ್ಕೆ ಹೋಗಿದ್ದೇವೆಂದರೆ, ಮಾನ್ಯ ಅಧ್ಯಕ್ಷರೇ, ಬೇರೇನು ಬೇಡ ಟ್ರಾನ್ಸ್‌ಫರ್ ವಿಚಾರ ತೆಗೆದುಕೊಳ್ಳೋಣ. 4-5 ಜನ ಸೆಕ್ರೆಟರಿಗಳು ಟ್ರಾನ್ಸ್‌ಫರ್ ಆಗಿದ್ದಾರೆಂದು ನಿನ್ನೆ ಬರುತ್ತದೆ.

ಅಧ್ಯಕ್ಷರು : ಯಾರಾದರೂ ರಿಟೈರ್ಡ್ ಆದರೆ ಆ ವೇಕೆನ್ಸಿಯನ್ನು ಫಿಲಿಫ ಮಾಡಬೇಕೋ ಬೋಡವೋ? ಆಗ ಯಾರನ್ನಾದರೂ ಪೋಸ್ಟ್ ಮಾಡಬೇಕೋ ಬೋಡವೋ? ಆಗ ಟ್ರಾನ್ಸ್‌ಫರ್ ಮಾಡಬೇಕೋ ಬೇಡವೇ ಹೇಳಿ.

SRI D.B. CHANDRE GOWDA : I weclcome that is the policy of the Government. It is totally given a good-bye. That is why I read Indian Express and Deccan Hearld editorials. ಇದನ್ನು ಒಂದು ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ಈ ರಾಜ್ಯದಲ್ಲಿ ಆಡಳಿತ ಕುಸಿದಿದೆ. ಈ ಕರ್ನಾಟಕ ರಾಜ್ಯ ಹಳೆಯ ಮೈಸೂರಿನ ಕಾಲದಿಂದ ಅಂದರೆ ನಮ್ಮ ದಿವಾನರ ಇತಿಹಾಸದಿಂದ ಹಿಡಿದು ದಕ್ಷತೆ ಮತ್ತು ಪ್ರಾಮಾಣಿಕತೆ ಎಂಬುವು ಈ ರಾಜ್ಯದ ಎರಡು ಕಣ್ಣುಗಳಾಗಿದ್ದವು. ಆ ಕಾಲದಲ್ಲಿ ಅಂದರೆ ಸರ್ ಮಿರ್ಜಾ ಇಸ್ಮಾಯಿಲ್ ಮತ್ತು ಅಲ್ಲಿಂದ ಆಚೆಗೆ ಬಂದಂಥ ಆಡಳಿತದಿಂದ ಈ ರಾಜ್ಯಕ್ಕೆ ಒಂದು ಅಪಾರ ಕೀರ್ತಿ ಇತ್ತು. ಆದರೆ ಇವತ್ತು Entire edifice of the administration Structure has collapsed. Can we rebuilt it. I don't thing we can rebuilt it, within a span of one decade. Sir, I can give umpteen number of instances but I would only bring to your kind notice one or two small things. ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತಿತರ ನಮ್ಮ ಸ್ನೇಹಿತರು ವೀರಪ್ಪನ್ ಹಿಡಿಯುವುದಕ್ಕೆ ಆಗಲಿಲ್ಲ. ವೀರಪ್ಪನ್‌ನ್ನೂ ಹಿಡಿಯುವುದಕ್ಕೆ ಆಗಲಿಲ್ಲ ಎಂದು ಈ ಸದನದಲ್ಲಿ ಕಳೆದ 2 ವರ್ಷಗಳಿಂದ ಪ್ರಸ್ತಾಪ ಮಾಡಿದ್ದೇವೆ.

ಈಗ ಮಾನ್ಯ ಬಸವಲಿಂಗಪ್ಪನವರು ಸದನದಲ್ಲಿಲ್ಲ ಅವರು ವೀರಪ್ಪನ್‌ನನ್ನು ಹಿಡಿಯಲು 15 ದಿವಸ ಒಂದು ತಿಂಗಳು ಎಂದು ವಾಯಿದೆ ಕೊಟ್ಟರು. ಆದರೆ ಮಾನ್ಯ ಬಸವಲಿಂಗಪ್ಪನವರು ಆ ಮಂತ್ರಿಗಿರಿಯಿಂದ ಬದಲಾವಣೆಯಾದರೇ ಹೊರತು ವೀರಪ್ಪನ್ ಮಾತ್ರ ಸಿಕ್ಕಲಿಲ್ಲ. ಆದರೆ ಒಂದು ಸಾರಿ ವೀರಪ್ಪನ್ ನಮ್ಮ ಕೈಗೆ ಸಿಕ್ಕಿದ್ದ. ಆಗ ಶ್ರೀಮಾನ್ ಕೆ.ಪಿ.ಎಸ್. ಮೂರ್ತಿ ಎನ್ನುವವರು ಈ ಫಾರೆಸ್ಟ್ ಇಲಾಖೆಯಲ್ಲಿ ಕೆ.ಎ.ಎಸ್. ಅಧಿಕಾರಿಯಾಗಿ ಡಿವೈ.ಎಸ್.ಪಿ.ಆಗಿದ್ದರು. ಆ ಕಾಲದಲ್ಲಿ ಅಂದರೆ ವೀರಪ್ಪನ್ ಅವರ ಕೈಗೆ ಸಿಕಿದ್ದ ಕಾಲದಲ್ಲಿ ಅವನು ತಪ್ಪಿಸಿಕೊಂಡು ಹೋಗುವುದಕ್ಕೆ ಶ್ರೀಮಾನ್ ಕೆ.ಪಿ.ಎಸ್. ಮೂರ್ತಿಯವರೇ ಕಾರಣ ಎನ್ನತಕ್ಕ ಕಾರಣದಿಂದಾಗಿ ಮೂರ್ತಿಯವರನ್ನು ಸಸ್ಪೆನ್‌ಷನ್‌ಲ್ಲಿ ಇಟ್ಟರು. ಹೌದೇಸ್ವಾಮಿ? ಆ ಕಾರಣಕ್ಕಾಗಿ ಮೂರ್ತಿಯವರಿಗೆ ಐ.ಪಿ.ಐಸ್ ಸಿಕ್ಕಲಿಲ್ಲ. ಇವತ್ತು ಆತನಿಗೆ ಐ.ಪಿ.ಐಸ್. ಕೊಡಿಸುತ್ತಾರೆ. ಸಸ್ಪೆನ್‌ಷನ್ ರಿವೋಕ್ ಆಗುತ್ತದೆ. ಅವನಿಗೆ ಪ್ರೊಮೋಷನ್ ಕೊಡಲಾಗಿದೆ. ಇವತ್ತು ಮಾನ್ಯ ಸದಸ್ಯರಾದ ಕಾನಡೆಯವರು ಇಲ್ಲ. ಅವರು ಗಲಾಟೆ ಮಾಡುತ್ತಿದ್ದರು. ಈ ಮೂರ್ತಿಯವರು ಇವತ್ತು ಉತ್ತರ ಕನ್ನಡ ಜಿಲ್ಲೆಗೆ ಅಂದರೆ ಮಾನ್ಯ ಕಾನಡೆಯವರ ಜಿಲ್ಲೆಗೆ ಜಿಲ್ಲಾ ಪೋಲೀಸ್ ಅಧಿಕಾರಿಯಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ನೀವು ಅವರೊಬ್ಬರಿಗೇ ಭಾಷಣ ಮಾಡುತ್ತಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಜಿಲ್ಲೆಗೆ ಜಿಲ್ಲಾ ಪೋಲೀಸ್ ಅಧಿಕಾರಿಯಾಗಿದ್ದಾರೆ.

ಶ್ರೀ ಕರಿಯಣ್ಣ : ನಮ್ಮ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ನಿಮ್ಮವರು ಹೇಳುತ್ತಾರೆ. ನಾನು ಕೊಟ್ಟರೂ....

ಶ್ರೀ ಡಿ.ಬಿ. ಚಂದ್ರೇಗೌಡ ; ಅವರ ವಿರುದ್ಧ ಕೋದಂಡರಾಮಯ್ಯ ಸಮಿತಿಯವರು ಸಲ್ಲಿಸಿದ ಅವದಿ ಏನಾಯಿತು? ತಮಗೆ ಒಂದೊಂದೇ ಸ್ಯಾಂಪಲನ್ನು ಕೊಡುತ್ತಿದ್ದೇನೆ. ಬೇಕೆಂದರೆ ಎಲ್ಲವನ್ನೂ ಕೋಡುತ್ತೇನೆ. ಕೃಷ್ಣಪ್ಪ ಎನ್ನತಕ್ಕ ಒಬ್ಬ ಕೆ.ಎ.ಎಸ್. ಅಧಿಕಾರಿಯನ್ನು ಆಫೀಸಿನಲ್ಲಿ ಹಿಡಿದುಕೊಂಡು ಹೋಡೆದರು. ಅವನನ್ನು ಅಲ್ಲಿಂದ ತೆಗೆದು ಪಿ.ಡಬ್ಲ್ಯು.ಡಿ.ಗೆ ಡೆಪ್ಯೂಟಿ ಸೆಕ್ರೆಟರಿಯಾಗಿ ಹಾಕಿದ್ದರು. Once he was suspended for corruption, now he is posted as Controller of Weights and Measures...

ನಾನು ಎಲ್ಲಾ ಅಧಿಕಾರಿಗಳ ಪಟ್ಟಿಯನ್ನೂ ಹೇಳುವುದಕ್ಕೆ ಹೋಗುವುದು.

Trying to tailor to suit to the convenience off the each Minister and the Chief Minister - I am trying to question.... ಅಡ್ಮಿನಿಸ್ಟ್ರೆಷನ್‌ನ್ನು

ಶ್ರೀ ಸಿ. ಬೈರೇಗೌಡ : ಸಸ್ಪೆಂಡ್ ಆದುದಕ್ಕೆ ಏನು ಕಾರಣ?

ಶ್ರೀ ಡಿ.ಬಿ. ಚಂದ್ರೇಗೌಡ : ಏತಕ್ಕೆ ಹಿಡಿದುಕೊಂಡು ಹೋಡೆದರೋ ಅದೇ ಕಾರಣ, ಕರೆಪ್‌ಷನ್ ಚಾರ್ಜಸ್

ಶ್ರೀ. ಸಿ. ಬೈರೇಗೌಡ ; ಮಾನ್ಯ ಅಧ್ಯಕ್ಷರೆ, ಸಸ್ಪೆಂಡ್ ಆದರು ಎಂದು ಹೇಳುತ್ತಾರೆ. ಹಿಡಿದುಕೊಂಡು ಹೊಡೆದರು ಎಂದು ಹೇಳುತ್ತಾರೆ. ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಇದು ಏನು ಎಂದು ನನಗೆ ಗೊತ್ತಿಲ್ಲ? ಇದು ರಾಜ್ಯದ ಜನರಿಗೆ ಗೊತ್ತಾಗಲಿ ಅವನು ಸಸ್ಪೆಂಡ್ ಆದುದು ಏತಕ್ಕೆ? ಯಾರು ಹೊಡೆದರು? ಹೊಡೆಯುವುದಕ್ಕೆ ಕಾರಣ ಏನು? ಅವರು ಯಾರು? ಎಂಬುದನ್ನು ಮಾನ್ಯ ವಿರೋಧಕ್ಷದ ನಾಯಕರು ದಯವಿಟ್ಟು ತಿಳಿಸಬೇಕು

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಈ ಅವಿಶ್ವಾಸ ನಿರ್ಣಯ ಏತಕ್ಕೆ ಎಂದರೆ, ಯಾರು ಯಾರು ಅಂಡರ್ ಸಸ್ಪೆನ್ಷನ್‌ನಲ್ಲಿ ಇರಬೇಕಾಗಿತ್ತೋ ಯಾರ್ಯಾರ ಚಾರಿತ್ರ್ಯ ಪ್ರಶ್ನಾರ್ಹವಾಗಿತ್ತೋ ಅಂಥವರನ್ನು ಅಧಿಕಾರದಲ್ಲಿ ಮುಂದು ವರಿಸಿದ್ದೀರಿ ಎಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ನಾವು ಎಂತಹ ಸ್ಥಿತಿಗೆ ಹೋಗಿದ್ದೇವೆಂದರೆ ಮಾನ್ಯ ಬೈರೇಗೌಡರು ಹೇಳಿದ ಮೇಲೆ ಈಗ ನೆನಪಿಗೆ ಬರುತ್ತಿದೆ. ಇತ್ತೀಚೆಗೆ ನಾವು ಕೈವಾರಕ್ಕೆ ಹೋಗಿದ್ದೆವು. ಅಲ್ಲಿ ಒಬ್ಬ ಬಡವ 20 X 30 ಅಡಿ ಅಳತೆಯ ನಿವೇಶನ ತೆಗೆದುಕೊಂಡು ಅದರಲ್ಲಿಒಂದು ಸಣ್ಣ ಮನೆಯನ್ನು ಕಟ್ಟಿದ್ದಾನೆ. ನಾವು ಅಂದರೆ, ಸರ್ಕಾರದವರು ಬಡವರಿಗೆ ಮನೆ ಕಟ್ಟಿಕೊಡುವವರು. 60 ಏಕರೆ, 70 ಎಕರೆ ಭೂಮಿಯನ್ನು ಬಿಟ್ಟುಬಿಡುತ್ತೇವೆ. ಮನೆ ಕಟ್ಟಿಕೊಡಿ ಎಂದು ಸಾರ್ವಜನಿಕ ಭೂಮಿಯನ್ನು ಕೊಡುತ್ತೇವೆ. ಆದರೆ ಕೈವಾರದಲ್ಲಿ ಒಬ್ಬ ಬಡವ ಮನೆಯನ್ನು ಕಟ್ಟಿದರೆ ತಹಶೀಲ್ದಾರರು ಹೋಗಿ ಎದುರುಗಡೆ ನಿಂತುಕೊಂಡು ಆ ಮನೆಯನ್ನು ನೆಲಸಮ ಮಾಡಿದ್ದಾರೆ. ನಾವೆಲ್ಲಾ ಹೋಗಿ ಕಣ್ಣಾರೆ ನೋಡಿಕೊಂಡು ಬಂದಿದ್ದೇವೆ. ಅಲ್ಲಿಗೆ ಹೋದರೆ ಅಲ್ಲಿನ ಜನರು ಗಾಬರಿಯಿಂದ ಹೆದರಿ ನಡುಗುತ್ತಾ ನಿಂತಿದ್ದಾರೆ.

ಶ್ರೀ ಚೌಡರೆಡ್ಡಿ : ಅದನ್ನು ಅವರು ಸುಮ್ಮನೆ ಹೇಳುತ್ತಿದ್ದಾರೆ. ಅದಕ್ಕೆ ಬೇಕಾದರೆ ಒಂದು ಸಮಿತಿಯನ್ನು ರಚನೆ ಮಾಡಿ. ಅದು ಪ್ರೂವ್ ಆದರೆ ನಾನು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ. ಅಲ್ಲಿ ಅವರು ದಾರಿಗೆ ಅಡ್ಡಲಾಗಿ ಕಾನೂನು ಬಾಹಿರವಾಗಿ ಮನೆ ಕಟ್ಟಿದ್ದಾನೆ. ಇವತ್ತಿನ ದಿವಸ ನಕಲಿ ಪತ್ರಗಳನ್ನು ತೆಗೆದುಕೊಂಡು ಇಡೀ ಊರಿನಲ್ಲಿ ಕೂನೂನು ಬಾಹಿರವಾಗಿ ಕಟ್ಟುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಂದು ನನ್ನ ಜೊತೆ ವಾಟಾಳ್ ನಾಗರಾಜ್‌ರವರೂ ಬಂದಿದ್ದರು ಮತ್ತು ಎಲ್ಲಾ ಮುಖಂಡರು ಬಂದಿದ್ದರು. ಒಂದು ವೇಳೆ ಕಾನೂನು ಬಾಹಿರವಾಗಿ ಕಟ್ಟಿದ್ದರೂ ಅದಕ್ಕೆ ಕೆಲವು ನಿಯಮಗಳು ಇವೆ.

ಅಧ್ಯಕ್ಷರು : ಮಾನ್ಯ ಸದಸ್ಯರು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಚೌಡರೆಡ್ಡಿ : ನಕಲಿ ಪತ್ರಗಳನ್ನು ತೆಗೆದುಕೊಂಡು ಸರ್ಕಾರಿ ಜಮೀನಿನಲ್ಲಿ ಎಷ್ಟೋಜನ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ, ಅದನ್ನು ನಾನು ಸಾಬೀತು ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಗೋಕುಲ ಕಂಪೆನಿಗೆ ನೂರಾರು ಎಕರೆ ಭೂಮಿಯನ್ನು ಕೊಡುತ್ತೀರಿ. ಬಡವರು ಒಂದು ಮನೆ ಕಟ್ಟಿದರೆ ಅದನ್ನು ನೆಲಸಮ ಮಾಡುತ್ತೀರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಬಡವರ ಪ್ರತಿನಿಧಿಗಳು. ಬಡವರ ಮನೆ ಒಡೆಯುತ್ತಾರೆಂದರೆ ಏಕೆ ಎಂದು ಕೇಳುವುದಿಲ್ಲ. ಇಂಥ ಬಡವರ ಪ್ರತಿನಿಧಿಗಳೇ ನಮ್ಮ ದೇಶದಲ್ಲಿ ತುಂಬ ಇರುವವರು. 20 X 30 ಅಡಿ ಅಳತೆಯ ನಿವೇಶನದಲ್ಲಿ ಮನೆ ಕಟ್ಟಿದ್ದರೆ ಅದನ್ನು ನೆಲಸಮ ಮಾಡುತ್ತಾರೆ.

ಶ್ರೀ ಕೆ. ಹರ್ಷಕುಮಾರ ಗೌಡ : ನನ್ನ ಕ್ಷೇತ್ರದಲ್ಲಿ ಕೂಡ ಅನೇಕ ಮನೆಗಳನ್ನು ಬುಲ್ಡೋಜರ್ ಹೊಡೆಸಿ ನೆಲಸಮ ಮಾಡಲಾಗಿ ಅವರೆಲ್ಲಾ ಬೀದಿ ಪಾಲಾಗಿದ್ದಾರೆ. ಇವತ್ತು ಅವರಿಗೆ ರಾಜ್ಯದಲ್ಲಿ ಎಲ್ಲಿಯೂ ನೆಲೆ ಇಲ್ಲ. ಮಾನ್ಯ ಬಂಗಾರಪ್ಪನವರು ಕೂಡ ಆ ಸ್ಥಳಕ್ಕೆ ಭೇಟಿ ನೀಡಿದ್ದರು. ಅವರು ಸಹ ಅದನ್ನು ವಿರೋಧಮಾಡಿದರು.
ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿರತಕ್ಕ ಆಪಾದನೆ ಸಾಬೀತಾದರೆ ಚೌಡರೆಡ್ಡಿಯವರು ರಾಜೀನಾಮೆ ಕೊಡುವುದಾಗಿ

ಹೇಳಿದ್ದಾರೆ. ದಯಮಾಡಿ ಮಾನ್ಯ ವಿರೋಧಪಕ್ಷದ ನಾಯಕರು ಈ ಸವಾಲನ್ನು ಸ್ವೀಕಾರ ಮಾಡಬೇಕು ಮತ್ತು ಅವರು ಸಾಬೀತು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಸವಾಲುಗಳನ್ನು ಸ್ವೀಕಾರ ಮಾಡತಕ್ಕ ಗರಡಿ ಮನೆ ಆಗುವುದು ಬೇಡ.

(ಗೊಂದಲ)

ಶ್ರೀ ಕೆ. ಹರ್ಷ ಕುಮಾರ ಗೌಡ : ಮಾನ್ಯ ದೇಶಪಾಂಡೆಯವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ನನ್ನ ಕ್ಷೇತ್ರದಲ್ಲಿ ಬುಲ್ಡೋಜರ್ ಹೊಡೆಸಿದ್ದಾರೆ.

ಶ್ರೀ ಆರ್. ದೇಶಪಾಂಡೆ : ದಾಖಲೆ ಕೊಡಿ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್ ಗೌಡ : ದಾಖಲೆ ಇದೆ. ನನ್ನ ಕ್ಷೇತ್ರಕ್ಕೆ ಸದನ ಸಮಿತಿ ಬರಲಿ. ಇವತ್ತು ನಾಶವಾಗಿರುವ ಮನೆಗಳು ಅಲ್ಲೇ ಇವೆ. ದಾಖಲೆ ಕರ್ನಾಟಕ ರಾಜ್ಯದಲ್ಲೇ ಇದೆ. ನನ್ನ ಕ್ಷೇತ್ರದಲ್ಲೇ ದಾಖಲೆ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದಾದರೂ ಇಷ್ಟೆ. ಅದರಲ್ಲಿ ಲೀಗಲ್ಲಾಗಿ ಕಟ್ಟಿದ್ದಾನೋ, ಇಲ್ಲೀಗಲ್ಲಾಗಿ ಕಟ್ಟಿದ್ದಾನೋ ಅದಲ್ಲ ಪ್ರಶ್ನೆ. ದಯಮಾಡಿ ತಿಳಿದುಕೊಳ್ಳಿ, ಇಲ್ಲಿ ಸವಾಲು ಪ್ರತಿಸವಾಲಿಗೆ ನಿಂತಿಲ್ಲ ನಾನು. ನಿನ್ನೆ ಅಲ್ಲ ಮೊನ್ನೆ ಮೂರು ದಿವಸದ ಕೆಳಗೆ......

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ದಯಮಾಡಿ ಮಾನ್ಯ ಚಂದ್ರೇಗೌಡರು ನಮಗೆಲ್ಲಾ ಹೇಳಬೇಕು ತಾವು ಹಿರಿಯ ಸದಸ್ಯರು.

ಶ್ರೀ ಡಿ.ಬಿ. ಚಂದ್ರೇಗೌಡ : ಹೇಳುತ್ತೇನೆ. ಕುಳಿತುಕೊಳ್ಳಿ, ನಾನು ಹೇಳಿದ್ದಾದರೂ ಇಷ್ಟೆ. ಮಾನ್ಯ ಅಧ್ಯಕ್ಷರೆ....

ಶ್ರೀ ಕೆ. ಹರ್ಷಕುಮಾರ ಗೌಡ : ಅಧ್ಯಕ್ಷರೆ, ರೆವಿನ್ಯೂ ನಿವೇಶನದಲ್ಲಿ ಕಟ್ಟಿಸಿದವರು ಯಾರು? ಅದಕ್ಕೆ ದಳ್ಳಾಳಿಗಳು ಯಾರು? ಕರ್ನಾಟಕದಲ್ಲಿ ಅದರ ಬಗ್ಗೆ ದಂಧೆ ನಡೆಸಿದವರು ಯಾರು ಎಂಬ ದಾಖಲೆಗಳಿವೆ. ಈವತ್ತಿನವರೆಗೂ ಅಂಥ ಕೆಲಸ ನಾವು ಮಾಡಿಲ್ಲ, ಕರ್ನಾಟಕ ರಾಜ್ಯದಲ್ಲಿ ಇವತ್ತು ಮಾಡಿದ್ದರೆ ಮಾಡುವವರೂ ನೀವೇ, ಹೇಳುವವರೂ ನೀವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಮಾಡಿ ಅಪರಾಧ ಇದ್ದರೆ ವಾಪಸ್ ಬರಲಾರದಷ್ಟು ಗುಂಡಿ ತೆಗೆದು ಅವರನ್ನು ಹೂತುಬಿಡಿ. ಆದರೆ ಇಲ್ಲಿ ಪ್ರಶ್ನೆ ಏನು ಕೇಳಿದೆ ಎಂದರೆ..

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ನಾವು ಪ್ರತಿ ಪಕ್ಷದ ಮುಖಂಡರುಗಳಾಗಿ ಕಣ್ಣಾರೆ ಹೋಗಿ ನೋಡಿಕೊಂಡು ಬಂದಿದ್ದೇವೆ. ರಸ್ತೆಗೆ ಅಡ್ಡವಾಗಿ ಕಟ್ಟಿದ್ದಾನೆ ಎಂದು ಬಡವನ ಮನೆ ಕೆಡವಿಬಿಟ್ಟರೆ ಅದಕ್ಕೆ ನಿಮ್ಮ ಅಧಿಕಾರಿಗಳು ಶಾಮೀಲಾಗುವುದಾದರೆ, ನೀವು ನಮ್ಮ ಜೊತೆ ಬನ್ನಿ ನೋಡಿಕೊಂಡು ಬರೋಣ. ನಾನು ಹೋಗಿದ್ದೆ ಯಾವುದೋ ಬುಲ್ಡೋಜರ್ ಹೊಡೆದರಂತೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟರೆ ಬೇಕಾದರೆ ಸಪರೇಟಾಗಿ ಉತ್ತರ

ಕೊಡೋಣ. ಏತಕ್ಕೆಂದರೆ ಸ್ಪೆಸಿಫಿಕ್ ಇಷ್ಯೂ ರೈಸ್ ಮಾಡಿದ್ದಾರೆ. ಪರ್ಟಿಕ್ಯುಲರ್ ಕಾನ್‌ಸ್ಟಿಟುಯೆನ್ಸಿಯಲ್ಲಿ, ಇಂಥ ಊರಿನಲ್ಲಿ ಅನ್ ಆಥರೈಸಾಗಿ ಕನ್‌ಸ್ಟ್ರಕ್ಷನ್ ಮಾಡಿದಂಥ ಮನೆಯನ್ನು ತಹಸೀಲ್ದಾರ್ ಡೆಮಾಲಿಶ, ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ವಿಷಯವನ್ನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡಿದರೆ ಉತ್ತರ ಕೊಡೋಣ. ಆದರೆ ಅದು ಅವಿಶ್ವಾಸ ನಿರ್ಣಯದಲ್ಲಿ ಪ್ರಸ್ತಾಪ ಮಾಡತಕ್ಕ ದೊಡ್ಡ ವಿಷಯವಲ್ಲ.

ಶ್ರೀ ಕೆ. ಹರ್ಷಕುಮಾರ್ ಗೌಡ : ಮಾನ್ಯ ಅಧ್ಯಕ್ಷರೆ...

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕೊನೇ ಮಾತು. ಈಗ ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ. ತಹಸೀಲ್ದಾರ್ ಮನೆ ಒಡೆದ ದಿವಸಬರೆದರಲ್ಲಾ ಅದರಲ್ಲಿ ಏನು ಹೇಳಿದ್ದಾರೆ ಗೊತ್ತಾ? ಅವರು ಸೈನ್ ಮಾಡುತ್ತಾರೆ ಸೀಲ್ ಹಾಕುತ್ತಾರೆ. ಕೊನೆಯದನ್ನು ಮಾತ್ರ ಹೇಳುತ್ತೇನೆ. ನಿಮಗೆ ಈ ಪತ್ರವನ್ನು ಕಳುಹಿಸಿಕೊಡುತ್ತೇನೆ. "ಮೇಲ್ಕಂಡ ಅಸಿಸ್ಟೆಂಟ್ ಕಮಿಷನರ್‌ರವರ ಆದೇಶದಂತೆ ಪ್ರತಿವಾದಿ ಸುಬ್ಬಣ್ಣನವರಿಗೆ ಸರ್ಕಾರಿ ಜಮೀನಿನಲ್ಲಿ ಕಟ್ಟುತ್ತಿರುವ ಕಟ್ಟಡವನ್ನು ನಿಲ್ಲಿಸಲು ಆದೇಶಿಸಿದ್ದಾರೂ ಕೂಡ ಕೆಲಸ ಮುಂದುವರೆಸಿರುವುದು ತಿಳಿದು ಬಂದಿದ್ದರಿಂದ ನೆಲಸಮಗೊಳಿಸಲಾಗಿದೆ". ಎಂದು ತಹಸೀಲ್ದಾರ್ ಬರೆದಿದ್ದಾರೆ. ವೈಯುಕ್ತಿಕವಾಗಿ ನಾನು ಏತಕ್ಕೆ ಹೇಳಲಿ?

ಶ್ರೀ ಕೆ. ಹರ್ಷಕುಮಾರ್‌ಗೌಡ : ಅಧ್ಯಕ್ಷರೆ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ನೀವು ಅಷ್ಟೇ ಹೇಳಲಿಲ್ಲ. ಬೇರೆ ವಿಷಯ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಕೆ. ಹರ್ಷಕುಮಾರ ಗೌಡ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಕೇಳುತ್ತೇನೆ. ಅಕ್ರಮವಾಗಿ ಕಟ್ಟಿದರೆ ಅವರಿಗೆ ಅವಾರ್ಡ್ ಕೊಡಬೇಕಾ? ಅಥವಾ ಬಹುಮಾನ ಕೊಡಬೇಕಾ?

ಶ್ರೀ ಚೌಡರೆಡ್ಡಿ : 1981ನೇ ಇಸವಿಯಲ್ಲಿ ಒಂದು ನಕಲಿ ಪತ್ರ ತಯಯಾರು ಮಾಡಿದ್ದಾನೆ. ಆಗ ಅದು ಗುಂಡುತೋಪು. ಬಿ.ಡಿ.ಒ.ಗೆ. ಟ್ರಾನ್ಸ್‌ಫರ್ ಆಗಿರಲಿಲ್ಲ. ಟ್ರಾನ್ಸ್‌ಫರ್ ಆಗಿರುವುದು 1988-89ರಲ್ಲಿ. ಬಿ.ಡಿ.ಒ. ಫಾರ್ಮೇಷನ್ ಮಾಡಿಲ್ಲ. ಯಾರು ಕಟ್ಟಡ ಕಟ್ಟಿದ್ದಾರೆ ಅದು ದಾರಿಗೆ ಅಡ್ಡ ಇರುವುದರಿಂದ ಕಾನೂನು ಪ್ರಕಾರ ಅಸಿಸ್ಟೆಂಡ್ ಕಮಿಷನ್ ಎನ್‌ಕ್ವೈರಿ ಮಾಡಿ ಅಪರ್ಚುನಿಟಿ ಕೊಟ್ಟು ನೀವೇನಾದರೂ ಕಟ್ಟಿದರೆ ಡಿಮಾಲಿಷ್ ಮಾಡುತ್ತೇವೆ ಎಂದು ನೋಟೀಸ್ ಕೊಟ್ಟಿದ್ದಾರೆ. ಈ ರೀತಿ ಅವಕಾಶ ಕೊಡುತ್ತಾ ಹೋದರೆ ವಿಧಾನಸೌಧಕ್ಕೆ ಕೂಡ ದಾರಿ ಇಲ್ಲದಂತೆ ಕಟ್ಟುತ್ತಾರೆ.

ಆಮೇಲೆ ಬೇರೆ ಕಡೆಯಿಂದ ಬರುವುದು ಎಂದರೆ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಮಾನ್ಯ ಬೈರೇಗೌಡರಿಗೆ ಸಂಬಂಧಪಟ್ಟ ವಿಚಾರ. ಈ ಬಗ್ಗೆ ಇವರು ಏಕೆ ಗಲಾಟೆ ಮಾಡುತ್ತಿದ್ದಾರೆ?

ಶ್ರೀ ಚೌಡರೆಡ್ಡಿ : ಪ್ರಾಮಾಣಿಕ ಅಧಿಕಾರಿಗಳ ಮೇಲೆ ಗೂಬೆ ಕೂರಿಸಿದರೆ ಇನ್ನು ಯಾರು ಕೆಲಸ ಮಾಡುತ್ತಾರೆ?

ಅಧ್ಯಕ್ಷರು ; ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಇತ್ಯರ್ಥವಾಗಬೇಕಾಗಿರುವ ವಿಚಾರವನ್ನು ಇಲ್ಲಿ ತಂದು ಪ್ರಸ್ತಾಪ ಆಗುತ್ತಿದೆ ಅದನ್ನು ಬಿಡಿ. ಸರ್ಕಾರದ ವಿಚಾರಕ್ಕೆ ಬನ್ನಿ.

ಶ್ರೀ ಸಿ. ಬೈರೇಗೌಡ ; ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಷಯ ತರುವುದೇನೆಂದರೆ, ಮೊನ್ನೆ ನಾನು ಒಂದು ಗಮನಸೆಳೆಯುವ ಸೂಚನೆ ತಂದಾಗ

ತಾವು ಅದಕ್ಕೆ ಅಲೌ ಮಾಡಿದ್ದಿರಿ. ಆದರೆ ಅದು ಇಲ್ಲಿ ಚರ್ಚೆಗೆ ಬರಲಿಲ್ಲ. ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟಿಹಾಗೆ ಎಲ್ಲ ದಾಖಲೆಗಳು ನನ್ನ ಹತ್ತಿರ ಇವೆ. ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುತಕ್ಕ ವಿಚಾರ. ತಾವು ಹೇಳಿದ ಹಾಗೆ, ಅದನ್ನು ದೊಡ್ಡದಾಗಿ ಮಾಡಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಸುಮ್ಮನೆ ಕುಳಿತ್ತಿದ್ದೆ. ಆದರೆ ರಾಜೀನಾಮೆ ಕೊಡುತ್ತೇನೆನ್ನುವ ವಿಚಾವರನ್ನು ಅವರು ಹೇಳಿದ್ದಾರೆ. ಇವತ್ತು ಇದರ ಬಗ್ಗೆ ಈ ಸದನದ ಸಮಿತಿ ರಚನೆ ಮಾಡಿ.

(ಗೊಂದಲ)

ಅಧ್ಯಕ್ಷರು : ಈ ಸದನದಲ್ಲಿ 224...

ಶ್ರೀ ಸಿ. ಬೈರೇಗೌಡ : ಈ ವಿಚಾರ ಗೊತ್ತಿದ್ದರೂ ಕೂಡ ನಾನು ಸುಮ್ಮನೆ ಕುಳಿತಿದ್ದೆ. ಈ ವಿಚಾರದಲ್ಲಿ ತಲೆ ಹಾಕತಕ್ಕಂಥ ಕೆಲಸವನ್ನು ಮಾಡಲಿಲ್ಲ. ಆದರೆ ಸತ್ಯ ಮರೆಮಾಚತಕ್ಕದ್ದು, ಸತ್ಯದಿಂದ ದೂರ ಇರತಕ್ಕಂಥಹ ವಿಚಾರ ಇಲ್ಲಿ ನಡೆದಾಗ ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಕಾರಣವಿದೆ ಎನ್ನುವುದಕ್ಕೆ ಮಾತ್ರ ನಾನು ತಮ್ಮ ಮುಂದೆ ನಿಂತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಇವರು....

ಶ್ರೀ ಸಿ. ಬೈರೇಗೌಡ : ನೀರು ಸೇಫ್ ಆಗಿರುವವರು, ನೀವು ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ...

ಶ್ರೀ ಸಿ. ಬೈರೇಗೌಡ : ಅವರು ಯಾವ ಸೇಫ್‌ನಲ್ಲಿದ್ದಾರೆಂದು ನನಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಸಂಪೂರ್ಣ ದಾಖಲೆಗಳು ಇವೆ. ಅದುದರಿಂದ...

ಶ್ರೀ ಎಲ್. ಆರ್. ಶಿವರಾಮೇಗೌಡ : 34 ಸಾವಿರ ಮತಗಳಲ್ಲಿ ನನ್ನನ್ನು ನನ್ನ ಕ್ಷೇತ್ರದ ಜನತೆ ಗೆಲ್ಲಿಸಿ ಕಳುಹಿಸಿದೆ.

ಶ್ರೀ ಸಿ. ಬೈರೇಗೌಡ : ನಿಮ್ಮ ಸೇಫ್ ಯಾವುದು ಎಂದು ನನಗೆ ಗೊತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ನಿಮ್ಮ ಸೇಫ್ ದೇಶಕ್ಕೆ ಗೊತ್ತಿದೆ.
ಶ್ರೀ ಸಿ. ಬೇರೇಗೌಡ : ಇದು ನಕಲಿ ಹಕ್ಕು ಪತ್ರ ಅಲ್ಲ. ವಾಸ್ತವವಾಗಿ ಅತನಿಗೆ ಅಲ್ಲಿ ಮಂಜೂರು ಆಗಿರತಕ್ಕದ್ದು. ಅಲ್ಲಿ ದಾರಿ ಎನ್ನುವುದಾಗಲೀ ದಾರಿಯ ಕುರುಹು ಆಗಲೀ ಇಲ್ಲ. ಇವತ್ತು ಅಲ್ಲಿರತಕ್ಕ ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇದೆ. ಅಸಿಸ್ಟೆಂಟ್ ಕಮೀಷನರ್‌ರವರು ಏನು ಹೇಳುತ್ತಾರೆಂದು ನಾನು ಓದಿ ಹೇಳುತ್ತೇನೆ.

"This is a public complaint that Sy.No.34 of Hulagomanahalli is being encroached. The Revenue Inspector, Kaiwar, the Deputy Tahsildar, Kaiwar is directed to survey the sopt and evict the encroacher as per Sec.104 of the Karnataka Land Revenue Act after giving opportunity to the parties. The Respondent is directed to stop illegal construction.."

ಶ್ರೀ ಬಿ.ಹೆಚ್ ಲಕ್ಷ್ಮಣಯ್ಯ : ಅಧ್ಯಕ್ಷರೇ, ನನ್ನದು ಒಂದು ಕ್ರಿಯಾಲೋಪ ಇದೆ. ಈ ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯಾಗಿ ಆ ಬಗ್ಗೆ ಚರ್ಚೆ ನಡೆಯುತ್ತದೆ. ಅವಿಶ್ವಾಸ ನಿರ್ಣಯದಲ್ಲಿ ಅವರು ಹೇಳುತ್ತಿರುವ ವಿಷಯ ಸೇರಿಲ್ಲ. ಅದನ್ನು ಅವರು ರೆಫರೆನ್ಸ್ ಮಾಡಬಹುದೇ ಹೊರತು, ವಿವರವಾದ ಚರ್ಚೆಗೆ ಅವರು ಹೋಗಬೇಕಾಗಿಲ್ಲ. ವಿವರ ಚರ್ಚೆ ಮಾಡುವುದಾದರೆ ಅದನ್ನು ಬೇರೆ ರೀತಿಯಲ್ಲಿ ತಂದು ಚರ್ಚೆ ಮಾಡಲಿ. ಆದ್ದರಿಂದ ಈ ವಿಚಾರದ ಬಗ್ಗೆ ಅವರು

ವಿವರವಾದ ಚರ್ಚೆಗೆ ಹೋಗುವುದಕ್ಕೆ ತಾವು ಅವಕಾಶ ಕೊಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

MR. SPEAKER : I will not permit it. I uphold the point of order raised by Shri Laxmanaiah.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ಸ್ವಲ್ಪ ಸೀರಿಯಸ್ಸಾಗಿ ಇರುವುದಕ್ಕೆ ಆಗುವುದಿಲ್ಲವೆ. It is a very serious matter which the House is addressing itself. ಅಂಥಾದ್ದರಲ್ಲಿ ನೀವು ಸ್ಥಳ ಬಿಟ್ಟು ಬರುವುದು...

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಬಗ್ಗೆ ಬಹಳಷ್ಟು ಹೇಳುವುದಿದೆ. ಆದರೆ ಇಲ್ಲಿ I will reserve my right to speak on the demand of administration. ಈ ರಾಜ್ಯದಲ್ಲಿ ಸುಮಾರು 1599 ಹೌಸ್ ಬಿಲ್ಡಿಂಗ್ ಸೊಸೈಟಿಗಳಿವೆ. ಅದಕ್ಕೆ 6 ಲಕ್ಷ 10 ಸಾವಿರದ 761 ಸದಸ್ಯರಿದ್ದಾರೆ. ಬೆಂಗಳೂರಿನಲ್ಲಿ ಇಂತಹ 358 ಹೌಸ್ ಬಿಲ್ಡಿಂಗ್ ಸೊಸೈಟಿಗಳಿವೆ. ಇದರಲ್ಲಿ ಜಿವಿಕೆ ರಾವ್ ಕಮಿಟಿ ಆದರಿಸಿ ಹಿಂದೆ ಸಾಕಷ್ಟು ವಿಚಾರಣೆ ನಡೆಸಿ, ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಸರ್ಕಾರದವರು ಸುಮಾರು 129 ಹೌಸ್ ಬಿಲ್ಡಿಂಗ್ ಸೊಸೈಟಿಗಳನ್ನು ಗುರ್ತಿಸಿದ್ದಾರೆ. ಇದರಲ್ಲಿ ಸುಮಾರು 2 ಲಕ್ಷ 37 ಸಾವಿರ 610 ಜನ ಸದಸ್ಯರಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಆಶ್ಚರ್ಯವಾಗತಕ್ಕ ವ್ಯವಹಾರ ಇದರಲ್ಲಿದೆ. ಈ ಸಂಸ್ಥೆಯಲ್ಲಿ ಬೆಂಗಳೂರಿನ ಹೌಸಿಂಗ್ ಸೊಸೈಟಿಯೊಳಗೆ 476ಕೋಟಿ ರೂಪಾಯಿಗಳಷ್ಟು ಹಣದ ವ್ಯವಹಾರ ಇದರಲ್ಲಿ ಸೇರಿಕೊಂಡಿದೆ. ಈ 476 ಕೋಟಿ ರೂಪಾಯಿಯಲ್ಲಿ ಲೀಗಲ್ಲಾಗಿ ಲ್ಯಾಂಡ್ ಅಕ್ವಿಜಿಶನ್‌ಗೆ ಖರ್ಚು ಮಾಡಿರತಕ್ಕಂಥ ಹಣ 50 ಕೋಟಿ ರೂಪಾಯಿಗಳು. ಏಜೆಂಟರುಗಳಿಗೆ ಕಮಿಷನ್ ಕೊಟ್ಟಿರತಕ್ಕ ಹಣ 250 ಕೋಟಿ ರೂಪಾಯಿಗಳು. ಇಷ್ಟೆಲ್ಲಾ 476 ಕೋಟಿ ರೂಪಾಯಿಗಳ ದೊಡ್ಡ ವ್ಯವಹಾರ ಮಾಡಿ, ಸೈಟ್ ಎಷ್ಟು ಹಂಚಿದ್ದಾರೆಂದರೆ ಹತ್ತು ಸಾವಿರ ಇದೊಂದು ದೊಡ್ಡ ಕರ್ಮಕಾಂಡ. ಇವರ ಇತಿಹಾಸ ಎಷ್ಟು ದೂರಕ್ಕೆ ಹೇಳಬೇಕೋ ತಾವು ಎಷ್ಟು ಹೊತ್ತು ಅನುಮತಿಕೊಡುತ್ತಿದ್ದೀರೋ?

ಒಬ್ಬ ಮಾನ್ಯ ಸದಸ್ಯರು ; ಮೊದಲು ಗುದ್ದಲಿ ಪೂಜೆ ಮಾಡಿರುವವರು ಯಾರು?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಆ ಕೆಲಸ ನೀವು ಮಾಡಿ. ಅಧಿಕಾರ ನಿಮ್ಮ ಕೈಲಿದೆ. ಸರ್ಕಾರ ನಿಮ್ಮದು. ನೀವು ಮಾಡಿ. ನನ್ನ ಕೆಲಸ ನಾನು ಮಾಡುತ್ತೇನೆ. ನೀವು ಒಬ್ಬ ಏಜೆಂಟರೇ ಒಬ್ಬ ಮಾನ್ಯ ಸದಸ್ಯರು ಅಲ್ಲ.

ಶ್ರೀ ಡಿ.ಬಿ ಚಂದ್ರೇಗೌಡ : ಮೊತ್ತೆ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೇ, ಬಹಳ ದೊಡ್ಡ ಪ್ರಮಾಣದ ಅವ್ಯವಹಾರಗಳು ಈ ಹೌಸ್ ಬಿಲ್ಡಿಂಗ್ ಸೊಸೈಟಿಗಳಲ್ಲಿ ನಡೆದಿವೆ. ಆದರೆ, ಎಲ್ಲಾ ಸೊಸೈಟಿಗಳಲ್ಲಿ ಹೀಗಾಗಿದೆ ಎಂದು ನಾನು ಹೇಳುವುದಿಲ್ಲ. ಸಾರ್ವಜನಿಕ ಹಿತ ದೃಷ್ಟಿಯಿಂದ ಇದು ಮೇಕೆ ತಿಂದು ಕೋತಿ ಬಾಯಿಗೆ ಒರೆಸಿದಂತೆ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿರತಕ್ಕಂಥವರಿಗೆ ಸಿಗಲಿಲ್ಲ. ಇಲ್ಲಿ ನಾವು ತೋರಿಸಿರತಕ್ಕಂಥ ನಾನು ಲೆಕ್ಕ ಏನು ಹೇಳಿದೆ, ಇದಕ್ಕಿಂತ ಲೆಕ್ಕ ಸಿಗದೇ ಇರತಕ್ಕಂಥ ಹಣ ಸಾಕಷ್ಟಿದೆ. ಸುಮಾರು 8-10 ವರ್ಷಗಳಿಂದ ಈ ಫ್ರಾಡ್ ನಡೆಯುತ್ತಿದೆ. ನಾನು ನಿಮಗೆ ಎರಡು ವರ್ಷಗಳಿದ್ದು ಹೇಳುತ್ತಿದ್ದೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ನಾನು ಯಾವುದನ್ನು ಮುಚ್ಚಿಬಿಡುತ್ತಿಲ್ಲ, ಮುಚ್ಚಿಬಿಡುವ ಆಗತ್ಯವೂ ಇಲ್ಲ, ನಿಮ್ಮ ಸರ್ಕಾರ ಯಾವು ಸಿಬಿಡಿ

ತನಿಖೆಯನ್ನು ಮಾಡಿಸಿದೆ ಅ ತನಿಖೆಯ ವರದಿ ಆದರಿಸಿ ಹೇಳುತ್ತಿದ್ದೇನೆ. ಇದು ನನ್ನದಲ್ಲ. ವಿವಾಳಿ ತನಿಖೆಯಾಗಿದೆ. ಆ ತನಿಖೆ ಏನು ಹೇಳಿದೆ ಅದನ್ನಷ್ಟೇ ಹೇಳುತ್ತೇನೆ ನನ್ನ ಸ್ವಂತಿಕೆ ಏನೂ ಇಲ್ಲ. ಹೈಕೋರ್ಟ್‌ನವರು ಇಂಥ ಸೊಸೈಟಿಗಳನ್ನು ನಿಯಂತ್ರಿಸುವುದಕ್ಕೆ ಕೆಲವು ನಿಭಂಧನೆಗಳನ್ನು ಹಾಕಿದ್ದಾರೆ.

"INDIAN LAW REPORTS - Karnataka Serias - First of July 1991- Page 2248: Co-operative Societies with less than 55% financial participation by the Government cannot acquire the lands for public purpose. Acquisition of land for a co-operative society without approving an housing scheme is a colourable exercies of power. High court has prescribed some corrective steps to the Government regarding illegal membership and for prevention Housing Societies from committing criminal and illegal acts and with regard to the Membership, dealing with the agents and payment of unauthorised commissions, government's inaction in the face of malpractices committed by the Housing Society..." ಮಾನ್ಯ ಅಧ್ಯಕ್ಷರೇ, ಈ ಸೊಸೈಟಿ ವ್ಯವಹಾರ,ಅನೇಕ ಜನ ಮಂತ್ರಿಗಳು ತಮ್ಮ ಖಾತೆಯನ್ನು ಕಳೆದುಕೊಳ್ಳುವಷ್ಟು ದೊಡ್ಡ ಪ್ರಭಾವಯುತವಾಗಿ ನಡೆದಿದೆ. ಅಲ್ಲಿ ಏನು ನಡೆದಿದೆ ಎನ್ನುವುದನ್ನು ನಿಮಗೆ ಒಂದೇ ಒಂದು ಸೊಸೈಟಿಯ ಬಗ್ಗೆ ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ ; ಸೊಸೈಟಿಗಳು ಬೇಡವೆಂದು ಹೇಳುತ್ತಿರೋ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ಸೊಸೈಟಿಗಳು ಬೇಡವೆಂದು ನಾನು ಹೇಳುತ್ತಿಲ್ಲ. ಯಾವ ಆದೇಶವನ್ನು ಹೈಕೋರ್ಟ್ ಕೊಟ್ಟಿತ್ತು, ಆ ಆದೇಶಕ್ಕನುಗುಣವಾಗಿ ಯಾವುದು ಸರಿಯಾಗಿ ಕೆಲಸಮಾಡುತ್ತಿದೆ ಅಂತಹ ಸೊಸೈಟಿಗಳಿಗೆ ಯಾವುದೇ ತೊಂದರೆ ಇಲ್ಲದೆ ಕೊಡಿ. ಯಾವ ಸೊಸೈಟಿಗಳು ತಮ್ಮ ಶಕ್ತಿಯನ್ನು ಮೀರಿ 1200 ರಿಂದ 1600 ಜನರಿಗೆ ಸೈಟುಗಳನ್ನು ಕೂಡತಕ್ಕ ಸಾಮರ್ಥ್ಯವಿರತಕ್ಕ ಸೊಸೈಟಿಗಳು 25 ರಿಂದ 27ಸಾವಿರ ಜನಗಳಿಗೆ ಆಗತಕ್ಕ ಭೂಮಿಯನ್ನು ಅಕ್ರಮ ಮಾಡಿಕೊಂಡಿದ್ದಾರೂ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ..........

ಶ್ರೀ ಎಸ್. ಬಂಗಾರಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಮಿಷ ಕುಳಿತುಕೊಳ್ಳಿ. ನಾನು ಉತ್ತರ ಕೊಡಬೇಕಾದರೆ ಇದರ ಬಗ್ಗೆ ವಿವರವಾಗಿ ಹೇಳುತ್ತೇನೆ. ಏತನ್ಮಧ್ಯ ಕ್ಲಿಯರ್ ಕಟ್ ವೀವ್ಸ್ ಇಟ್ಟುಕೊಳ್ಳೋಣ. ಗೃಹ ನಿರ್ಮಾಣ ಸಹಕಾರ ಸಂಘಗಳು ಬೇಡವೆಂದು ಹೇಳಿದರೆ ಬೇಡವೆಂದು ಹೋಗೋಣ. ನಾನು ನೇರವಾಗಿ ಈ ಪ್ರಶ್ನೆಯನ್ನು ಇಡುತ್ತೇನೆ. ಆದರೆ ಸಹಕಾರ ಸಂಘಗಳಿಗೆ ಕೊಡತಕ್ಕ ವಿಚಾರದಲ್ಲಿ ಹಲವಾರು ಜನ ಈ ಸದನದ ಮಾನ್ಯಸದಸ್ಯರು ಕೂಡ ಡೆಲಿಗೇಷನ್ ಬಂದಿದ್ದರು. ಇದರಲ್ಲಿ ಏನಾಗಿದೆ ಅಂದರೆ ನಾನು ಕೂಡ ಹಿಂದೆ ಇದರ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದೇವೆಂದು ನನ್ನ ಭಾವನೆ. ತಮ್ಮ ಕಡೆಯಿಂದ ತಾವು ಹೇಳಿದ್ದೀರಿ. ಇದರಲ್ಲಿ ಒಳ್ಳೆಯ ಸದಸ್ಯರು ಇರತಕ್ಕ ಸಹಕಾರ ಸಂಘಗಳು ಇವೆ. ಕೆಟ್ಟ ಸದಸ್ಯರು ಇರತಕ್ಕ ಸಹಕಾರ ಸಂಘಗಳು ಇವೆ. ಒಂದೇ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಒಳ್ಳೆಯವರು ಇದ್ದಾರೆ. ಕೆಟ್ಟವರೂ ಇದ್ದಾರೆ. ಅದನ್ನು ಪತ್ತೆ ಹಚ್ಚುವುದು ಅಷ್ಟು ಸುಲಭವಲ್ಲ ಎನ್ನುವುದನ್ನು ತಾವು ಒಪ್ಪುತ್ತೀರಿ ಎಂದು ನಾನು ಬಾವಿಸಿದ್ದೇನೆ. ರೈಲ್ವೇ ಎಂಪ್ಲಾಯೀಸ್ ಯೂನಿಯನ್‌ನವರನ್ನು ಈ ಸದನದ ಮಾನ್ಯ ಸದಸ್ಯರು ಕರೆದುಕೊಂಡು ಬಂದಿದ್ದರು. ಅವರ ಯಜಮಾನರುಗಳೆಲ್ಲ ಸತ್ತುಹೋಗಿದ್ದಾರೆ. ಕೆಲಸ ಮಾಡಿ ರಿಟೈರ್ಡ್ ಆಗಿ ಹೊರಟು ಹೋದರು. ಗ್ರಾಚ್ಯುಯಿಟಿ ಮತ್ತೊಂದು

ಹಣ ಬಂತು. ಅದನ್ನು ತೆಗೆದುಕೊಂಡು ಹೋಗಿ ಸೈಟು ಸಿಗುತ್ತದೆಂದು ಸಹಕಾರ ಸಂಘದಲ್ಲಿ ಹಾಕಿದ್ದಾರೆ.

ಶ್ರೀ ಆರ್. ದಯಾನಂದರಾವ್ : ಒಡವೆಗಳನ್ನು ಅಡವಿಟ್ಟು ಹಣ ತುಂಬಿದ್ದಾರೆ.

ಶ್ರೀ ಎಸ್. ಬಂಗಾರಪ್ಪ ; ಮಾನ್ಯ ಸದಸ್ಯರು ಹೇಳಿದಹಾಗೆ ಒಡವೆಗಳನ್ನು ಮತ್ತೊಂದನ್ನು ಅಡವಿಟ್ಟು ಒತ್ತೆಯಿಟ್ಟು ಹಣ ತುಂಬಿದ್ದಾರೆ. ಇಲ್ಲಿ ಏನಾಗಿದೆ ಅಂದರೆ, ಹಣ ಹೋಯಿತು, ಮತ್ತೊಂದು ಹೋಯಿತು ಎನ್ನುವ ಹೆದರಿಕೆ ಅವರಿಗೆ ಬಂದಿದೆ. ನಾನು ಕೃಷ್ಣಾ ಬಿಲ್ಡಿಂಗ್‌ನಲ್ಲಿದ್ದಾಗ ಸಾವಿರಾರು ಜನ ರೋಡ್ ಭರ್ತಿಯಾಗುವಷ್ಟು ಜನ ಬಂದಿದ್ದರು. ಅದು ಯಾರಿಗಾದರೂ ಬೇಜಾರು ಆಗತಕ್ಕ ವಿಚಾರ. ಅದನ್ನು ತಾವು ಸೂಕ್ಷ್ಮವಾಗಿ ಹೇಳಿದ್ದೀರಿ. I appreciate your stand. ಅದರಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಇವತ್ತೂ ನಾವು ಸಂಪೂರ್ಣವಾಗಿ ಬಾಗಿಲು ಮುಚ್ಚಿದರೆ ಎಲ್ಲಾ ಹೊರಟುಹೋಗುತ್ತವೆ. ಹೈಕೋರ್ಟ್‌ನಿಂದ ಏನು ಬಂದಿದೆ ಎಂದರೆ ಬಲ್ಕ್ ಅಲಾಟ್‌ಮೆಂಟ್ ಕೊಡತಕ್ಕ ವಿಚಾರದಲ್ಲಿ ನೀವು ಅದನ್ನು ಮಾಡದೇ ಇದ್ದರೆ ಪ್ರಾವಿಜನ್ ಇಲ್ಲವೆಂದರೆ, ಪ್ರಾವಿಜನ್ ಮಾಡಿಕೊಂಡಾದರೂ ಮಾಡಿಯೆಂದು ಹೇಳಿದ್ದಾರೆ. colourable exercise of power - ಇದರ ಅರ್ಥವೇನು? ಬಲ್ಕ್ ಅಲಾಟ್‌ಮೆಂಟ್‌ಗೆ ಪ್ರಾವಿಜನ್ ಮಾಡದೆ ನೀವು ನೀವೇ ಮಾಡಿಕೊಂಡಿದ್ದಾರಿ ಎನ್ನುವ ವಿಚಾರ. ನಾನು ಒಂದು ವಿಚಾರ ಹೇಳುತ್ತೇನೆ. ಅದು ನಮ್ಮ ಕಾಲದಲ್ಲಿ ಆಗಿರತಕ್ಕ ವಿಚಾರವಲ್ಲ. ನಿಮ್ಮ ಪಕ್ಷದ ಸರ್ಕಾರ ಇದ್ದಾಗ ಮಾಡಿದ್ದೀರಿ ಎಂದು ಗೂಬೆಕೂರಿಸುವುದಕ್ಕೋಸ್ಕರ ನಾನು ಮಾತನಾಡುತ್ತಿಲ್ಲ. ಕಾನೂನಿನ ವಿವರಣೆ ವಾಚಾರವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಲ್ಲಿ ಏನು ಆಗಿದೆ? You have to fill up that gap. ಆ ಲಕುನಾ ಏನಿದೆ ಅದನ್ನು ಸರಿ ಮಾಡಿ ಎನ್ನತಕ್ಕಂಥ ವಿಚಾರ ಇದೆ. ಇದನ್ನು ಎಲ್ಲಾ ಕಡೆಗೂ ತೆಗೆದುಕೊಂಡು ಹೋಗಿಬಿಟ್ಟರೆ ಎಲ್ಲರಿಗೂ ಇದು ತಗಲಿಕೊಳ್ಳುತ್ತದೆ. ಇವತ್ತು ಶಾಸಕರಿಗೆ ಸಂಬಂಧಪಟ್ಟಹಾಗಿ ಲೆಜಿಸ್ಲೇಟರ್ಸ್ ಹೌಸಿಂಗ್ ಕೋಪರೇಟಿವ್ ಸೊಸೈಟಿ ಇದೆ. Today it is also one of the Co-operative societies. Are you going to forego that? These are all the matters. ಪಾಪ ಅವರು ಸೊಸೈಟಿಯಿಂದ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಯಾರು ಸೈಟುಗಳನ್ನು ತೆಗೆದುಕೊಂಡಿದ್ದಾರೆ, ಅವರು ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ. ಅದಕ್ಕೋಸ್ಕರ ಇದರ ವಿಚಾರ ಎಲ್ಲವನ್ನೂ ಬಿಚ್ಚಿಕೊಂಡು ಕುಳಿತುಕೊಂಡರೆ ಇದು ಯಾರುಯಾರಿಗೆ ಏನೇನು ತಗುಲಿಕೊಳ್ಳುತ್ತದೆ ಎಂದು ನಾನು ಹೇಳಲಾರೆ. ಆದರೆ ಇದರಲ್ಲಿರತಕ್ಕವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ. That is not my point. ಇದು ಸದುದ್ದೇಶದಿಂದ ಮಾಡಿದಂಥ ಸಹಕಾರ ಸಂಘ, ಲೆಜಿಸ್ಲೇಟರ್ಸ್ ಕೋ-ಆಪರೇಟೀವ್ ಹೌಸಿಂಗ್ ಸೊಸೈಟಿಯನ್ನು ತಪ್ಪು ಎನ್ನತಕ್ಕಂಥ ಮಾತನ್ನು ನಾನು ಆಡುತ್ತಿಲ್ಲ ಅಥವಾ ಬೇರೆ ಸೊಸೈಟಿಗಳು ತಪ್ಪು ಎನ್ನತಕ್ಕಂಥ ಮಾಡನ್ನು ನಾನು ಹೇಳುತ್ತಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಅದರಲ್ಲಿ ದುರುಪಯೋಗ ನಡೆದಿದ್ದರೆ ಅದು ಯಾವ ಕೋ-ಆಪರೇಟಿವ್ ಸೊಸೈಟಿ ಏನು ಎನ್ನತಕ್ಕಂಥ ವಿಚಾರಕ್ಕೆ ಹೋಗೋಣ. ಅದನ್ನು ನೋಡದೆ ಸುಮ್ಮನೆ ಜನರಲೈಸ್ ಆಗಿ ಮಾಡುತ್ತಾ ಹೋದರೆ ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಸೂಕ್ಷ್ಮವಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ವಿವರವಾಗಿ ಚರ್ಚೆ ಮಾಡಬೇಕು ಎಂದರೆ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ, ಚರ್ಚೆಗೆ ಕುಳಿತುಕೊಳ್ಳೋಣ. ಆದರೆ ಸಹಕಾರ ಸಂಘಗಳಲ್ಲಿ ಕಡುಬಡವರು ಕೂಡ ಇದ್ದಾರೆ. ಅನ್ಯಾಯಕ್ಕೆ ಒಳಪಟ್ಟಿರತಕ್ಕಂಥವರು ಇದ್ದಾರೆ. ಈ ಸಹಕಾರ ಸಂಘಗಳ ಸದಸ್ಯರು ಯಾರು ಇದ್ದಾರೆ ಅವರಿಗೆ ಸಹಾಯ ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ, ನಿಮ್ಮ ಮೇಲೆ

ಇದೆ, ಎಲ್ಲರ ಮೇಲೂ ಇದೆ. ಆದರೆ ಕೆಟ್ಟವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಇಷ್ಟನ್ನು ನಾನು ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡುವಂಥ ಕಾಲದಲ್ಲಿ ಹಿಂದಿನ ಸರ್ಕಾರ ಇದಕ್ಕೆ ಕಾರಣ, ಮೊದಲಿನಿಂದಲೂ ಇದು ಆಗಿದೆಯೆಂದು ಹೇಳಿದರು. ಯಾವ ಅವ್ಯವಹಾರಗಳು ಆಗಿವೆ, ಆ ಅವ್ಯವಹಾರಗಳ ಬಗ್ಗೆ ಆಗ ಇದ್ದಂಥ ಸರ್ಕಾರದ ನೀತಿ ಏನು ಎನ್ನುವುದು ಬಹಳ ಮುಖ್ಯವಾದದ್ದು. ಇವತ್ತಿನ ದಿವಸ ಇಲ್ಲಿ ಯಾವ ಸಂಘದ ಸದಸ್ಯರು ಒಳ್ಳೆಯವರು ಇದ್ದಾರೆ, ಕೆಟ್ಟವರಿದ್ದಾರೆ ಎಂಬ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅಷ್ಟಕ್ಕೆ ಸೀಮಿತಗೊಳಿಸಲಿಲ್ಲ. ಈ ಸಹಕಾರ ಸಂಘಗಳ ಹೆಸರಿನಲ್ಲಿ ದಳ್ಳಾಳಿಗಳು ಏನಿದ್ದಾರೆ, ಅವರು ಕೋಟ್ಯಾಂತರ ರೂಪಾಯಿಗಳನ್ನು ಇವತ್ತಿನ ದಿವಸ ಲಪಟಾಯಿಸಿದ್ದಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ ಎನ್ನತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ.

ಶ್ರೀ ಆರ್. ದಯಾನಂದರಾವ್ : ತಾವು ಕೂಡ ಮಂತ್ರಿಯಾಗಿದ್ದೀರಿ. ತಾವು ಏನು ಮಾಡಿದ್ದೀರಿ?

ಶ್ರೀ ಎಚ್. ಏಕಾಂತಯ್ಯ ; ಆ ವಿಚಾರ ನಾನು ಮಾತನಾಡುವಾಗ ಹೇಳುತ್ತೇನೆ. ನಾನು ಹದಿನೆಂಟು ತಿಂಗಳು ಮಂತ್ರಿಯಾಗಿದ್ದ ಕಾಲದಲ್ಲಿ ನೀವು ಏನು ಮಾಡಿದ್ದೀರಿ? ಎಂಬ ಮಾತನ್ನು ಮಾನ್ಯ ದಯಾನಂದರಾಯರು ಕೇಳುತ್ತಿದ್ದಾರೆ. ಅವರು ಮಾನ್ಯ ಸಹಕಾರ ಸಚಿವರಲ್ಲಿಗೆ ಹೋಗಿ ಸಂಬಂಧಪಟ್ಟ ಕಡತಗಳನ್ನು ತೆಗೆದು ನೋಡಿ, ನಾನು ಏನು ಮಾಡಿದ್ದೇನೆ ಎಂದು ಓದಿಕೊಂಡು ಬಂದು ನಾಳೆಯ ದಿವಸ ಇಲ್ಲಿ ಕುಳಿತುಕೊಳ್ಳಲಿ. ಆಗ ಅವರಿಗೆ ನಾನು ಉತ್ತರ ಕೊಡುತ್ತೇನೆ. ಆದರೆ ಇವತ್ತು ಮುಖ್ಯವಾಗಿರತಕ್ಕಂಥ ಪ್ರಶ್ನೆ ಏನಿದೆಯೆಂದರೆ ಕೋಟ್ಯಾಂತರ ರೂಪಾಯಿಗಳನ್ನು ದಳ್ಳಾಳಿಗಳಿಗೆ ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಏನು ಕೊಟ್ಟಿದ್ದೀರಿ, ಇದನ್ನು ಏನು ಕಾನೂನು ಬಾಹಿರವಾಗಿ ಕೊಟ್ಟಿದ್ದೀರಾ ಅಥವಾ ಈ ದೇಶದ ಸಾಮಾನ್ಯ ಜನ ಏನಿದ್ದಾರೆ, ಸಹಕಾರ ಸಂಘಗಳು ಸದಸ್ಯರು, ಅವರ ಪರವಾಗಿ ಇರುವ ನೀತಿಯನ್ನು ತಾವು ಅನುಸರಿಸಿದ್ದೀರಾ ಎನ್ನತಕ್ಕಂಥಾದ್ದು ಇಲ್ಲಿ ಮುಖ್ಯವಾದ ಪ್ರಶ್ನೆ. ಅದಕ್ಕೆ ಉತ್ತರವನ್ನು ನಾನು ಭಾಷಣ ಮಾಡುವಾಗ ಅಥವಾ ಚರ್ಚೆ ಕಾಲದಲ್ಲಿ ಕೇಳುತ್ತೇನೆ. ಇವತ್ತು ತಾವು ಏನು ಹೇಳಿದ್ದೀರಿ ಅದು ಅಷ್ಟು ಮಾತ್ರಕ್ಕೇ ಸೀಮಿತಗೊಂಡಿಲ್ಲ. ಸಹಕಾರ ಸಂಘಗಳಲ್ಲಿ ಯಾರು ಕೋಟಾ ಸದಸ್ಯರು ಇದ್ದಾರೆ, ಅವರನ್ನು ಕಂಡುಹಿಡಿಯಿರಿ, ಅವರನ್ನು ತೆಗೆದುಹಾಕಿ ಎಂಬ ಮಾತು ಮುಖ್ಯ ಅಲ್ಲ. ಈ ಸಹಕಾರ ಸಂಘಗಳಿಗೆ ಬೇಕಾದ ಭೂಮಿಯನ್ನು ಏನು ಸ್ವಾಧೀನಪಡಿಸಿಕೊಂಡಿದ್ದೀರಿ. ಅಲ್ಲಿ ಏನೇನು ಅಕ್ರಮಗಳನ್ನು ಮಾಡಿದ್ದೀರಿ ಅವ್ಯವಹಾರಗಳನ್ನು ಮಾಡಿದ್ದೀರಿ. ಅವರು ಯಾರೇ ಇರಲಿ, ಅದರ ಬಗ್ಗೆ ವಿಚಾರಣೆ ಆಗಬೇಕೇ ಬೇಡವೇ ಎಂಬ ಬಗ್ಗೆ ತಾವು ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಯಾವ ಮಾತನ್ನು ಹೇಳಿದ್ದೀರಿ. ಆ ಮಾತುಗಳನ್ನು ನಾನು ತಮ್ಮ ಎದುರಿಗೆ ಇಡುತ್ತೇನೆ. ಅಲ್ಲಿಯವರೆಗೂ ದಯವಿಟ್ಟು ಅವಕಾಶ ಕೊಡಿ.

ಶ್ರೀ ಎಸ್. ಬಂಗಾರಪ್ಪ : ತಾವು ಈಗ ಮಾತನಾಡುವಾಗ ಸಾವಿರಾರು ಕೋಟಿ ರೂಪಾಯಿಗಳನ್ನು ನೀವು ದಳ್ಳಾಳಿಗಳಿಗೆ ಕೊಟ್ಟಿದ್ದೀರಿ ಎಂದು ಹೇಳಿದಿರಿ.

ಶ್ರೀ ಎಚ್. ಏಕಾಂತಯ್ಯ : ಸಾವಿರಾರು ಅಲ್ಲ, ನೂರಾರು.....

ಶ್ರೀ ಎಸ್. ಬಂಗಾರಪ್ಪ ; ನೂರಾರು ಕೋಟಿ ರೂಪಾಯಿಗಳನ್ನು ದಳ್ಳಾಳಿಗಳಿಗೆ ಕೊಟ್ಟಿದ್ದೀರಿ ಎಂದರೆ ಯಾರು ಕೊಟ್ಟಿರುವುದು? ಸರ್ಕಾರದ ಬೊಕ್ಕಸದಿಂದ ಕೊಟ್ಟಿದ್ದೀರಿ

ಎಂದು ಹೇಳಿದಿರೋ ಹೇಗೆ? ನಿಮ್ಮ ಮಾತಿನ ಅರ್ಥ ಏನು? ಇದು ನಿನಗೆ ಗೊತ್ತಾಗಲಿಲ್ಲ, ಏಕೆಂದರೆ ನಾಳೆ ಇದು ಪತ್ರಿಕೆಗೆ ಹೋಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಪುನಃ ಹೇಳುತ್ತೇನೆ. ನೂರಾರು ಕೋಟಿ ರೂಪಾಯಿಗಳನ್ನು ದಳ್ಳಾಳಿಗಳಿಗೆ ಕೊಡುವಾಗ ಸರ್ಕಾರದ ಹೊಣೆಗಾರಿಕೆ ಇದೆಯೇ ಇಲ್ಲವೇ? ಅದಕ್ಕಾಗಿ ನಾನು ಹೇಳಿದ್ದು....

(ಗೊಂದಲ)

ಶ್ರೀ ಹೆಚ್ ಏಕಾಂತಯ್ಯ : ನಿಮಗೆ ಎಷ್ಟು ವಿವರಗಳು ಗೊತ್ತಿವೆಯೋ, ಅಷ್ಟೇ ವಿವರಗಳು ನನಗೂ ಜ್ಞಾಪಕ ಇದೆ. ನೂರಾರು ಕೋಟಿ ರೂಪಾಯಿಗಳನ್ನು ದಳ್ಳಾಳಿಗಳಿಗೆ ಕೊಟ್ಟಿದ್ದೀರಿ ಅಥವಾ ಸಹಕಾರ ಸಂಘಗಳಲ್ಲಿ ಇರುವಂಥ ಪದಾಧಿಕಾರಿಗಳು ಕಾನೂನು ಬಾಹಿರವಾಗಿ ಏನು ಕೊಟ್ಟಿದ್ದಾರೆ, ಇದರ ಬಗ್ಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ನಿರ್ಧಿಷ್ಟವಾದ ತೀರ್ಮಾನವನ್ನು ನಮ್ಮ ಕಾಲದಲ್ಲಿ ನಾವು ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ ; ಕೊಟ್ಟಿದ್ದೀರಿ ಎಂದು ಹೇಳುವುದಕ್ಕೆ ಹೋಗಬೇಡಿ ಕೊಟ್ಟಿದ್ದೀರಿ ಎಂದರೆ...

SRI H. EKANTHAIAH : I never meant it. ಕೊಟ್ಟಿದ್ದೀರಿ ಅಂದರೆ ಸಂಬಂಧಪಟ್ಟ ಸಹಕಾರ ಸಂಘಗಳವರು ಏಜೆಂಟ್‌ಗಳಿಗೆ ಏನು ಕೊಟ್ಟಿದ್ದಾರೆ....

SRI S. BANGARAPPA : That is the point. ಹಾಗೆ ಹೇಳಿ. ನೀವು ಕೊಟ್ಟಿದ್ದೀರಿ ಎಂದು ಕೇಳಬೇಡಿ.

(ಗೊಂದಲ)

ಶ್ರೀ ಎಚ್. ಏಕಾಂತಯ್ಯ : ಇದು ಸರ್ಕಾರದ ಗಮನಕ್ಕೆ ಬಂದಮೇಲೆ ಇದನ್ನು ಸರಿಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ : ನೀವು ಏನು ಮಾಡಿದ್ದೀರಿ?

ಶ್ರೀ ಎಚ್. ಏಕಾಂತಯ್ಯ : ಮಾನ್ಯ ಕಾಗೋಡು ತಿಮ್ಮಪ್ಪನವರೆ, ನಾನು ಏನು ಮಾಡಿದ್ದೇನೆ ಎಂಬುದನ್ನು ಹೇಳುತ್ತೇನೆ. ಈಗಲೇ ಹೇಳಬೇಕಾ? ಈಗಲೇ ಹೇಳಬೇಕೆಂದರೆ ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆ ಮಾಡುತ್ತಾ ಇರುವುದರಿಂದ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಪ್ರಸ್ತಾಪ ಮಾಡಿ, ಈ ಅವ್ಯವವಹಾರಗಳ ಬಗ್ಗೆ ಆಗ ಇದ್ದಂಥ ಸರ್ಕಾರ ಯಾವ ಯಾವ ತೀರ್ಮಾನಗಳನ್ನು ತೆಗೆದುಕೊಂಡಿದೆ, ಆ ತೀರ್ಮಾನಗಳನ್ನು ನೀವು ಜಾರಿಗೆ ತಂದಿದ್ದೀರಾ ಎಂಬುದು ಬಹಳ ಮುಖ್ಯವಾದ ಪ್ರಶ್ನೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ದಾಖಲೆಗಳು ಯಾವುದೂ ಇಲ್ಲ, ಜನ ಮಾತನಾಡುತ್ತಾರೆ, ಸುಪ್ರಿಂ ಕೋರ್ಟ್, ಹೈಕೋರ್ಟ್ ಎಂದು. ಜನಗಳಲ್ಲಿ ಏನು ಸಂಶಯ ಬಂದಿದೆಯೆಂದರೆ, ಈ ವ್ಯವಹಾರಗಳನ್ನು ಮಾಡತಕ್ಕ ಸಂದರ್ಭದಲ್ಲಿ ಒಳ ವ್ಯವಹಾರ ನಡೆದು ಬಡವರಿಗೆ ಹಂಚಿದ ಸೈಟುಗಳನ್ನು ವಾಪಸ್ಸು ಪಡೆದು, ಬೇರೆ ಬೇರೆ, ದೊಡ್ಡ ದೊಡ್ಡ ಸೊಸೈಟಿಗಳಿಗೆ ಕೊಡುತ್ತಿದ್ದಾರೆ ಎಂಬ ಆರೋಪ ಬಹಿರಂಗವಾಗಿದೆ. ಆ ರೀತಿ ಕೊಟ್ಟಿದ್ದು, ತೆಗೆದುಕೊಂಡಿದ್ದಕ್ಕೆ ಸಾಕ್ಷಿಗಳು ಸಿಕ್ಕುತ್ತಾ ಇಲ್ಲ, ಅದನ್ನು ಸರ್ಕಾರದವರು ಏನಾದರೂ ಒದಗಿಸಿಕೊಟ್ಟರೆ ಒಳ್ಳೆಯದು. ಅಂದರೆ, ಕೊಟ್ಟು ತೆಗೆದುಕೊಳ್ಳುವ ಒಳ ವ್ಯವಹಾರ ನಡೆದಿದೆ ಎಂದು ಜನ ಮಾತನಾಡುತ್ತಿದ್ದಾರೆ. ಇದು ಹೌದೋ ಅಲ್ಲವೋ ಎನ್ನುವುದನ್ನು ಸರ್ಕಾರ ಸ್ಪಷ್ಟ ಮಾಡಬೇಕಾಗುತ್ತದೆ.....

ಶ್ರೀ ಹೆಚ್. ಏಕಾಂತಯ್ಯ : ಈಗ ಆ ಪ್ರಶ್ನೆ ಅಲ್ಲ. ಈ ಮುಖ್ಯಮಂತ್ರಿಗಳ ಸರ್ಕಾರ ಏನು ಕೆಲಸ ಮಾಡಿದೆ ಅಥವಾ ನಮ್ಮ ಸರ್ಕಾರ ಇದ್ದಾಗ ಏನು ಕೆಲಸ ಮಾಡಿದೆ ಎನ್ನುವುದನ್ನು ತುಲನೆ ಮಾಡುವುಂಥ ಪ್ರಶ್ನೆ ಬಂದಾಗ, ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಈ ಅವ್ಯವಹಾರಗಳು ನಮ್ಮ ಗಮನಕ್ಕೆ ಬಂದಾಗ, ನಾವು ನಿರ್ಧಿಷ್ಟಪಡಿಸಿದ ರೀತಿಯಲ್ಲಿ ನಿರ್ಧಾರ ಮಾಡಿದ ನೀತಿ ಏನು ಎನ್ನುವುದನ್ನು ತೆಗೆದು ನೋಡಬೇಕು. ಈ ಅವ್ಯವಹಾರಗಳನ್ನು ಕೊನೆಗಾಣಿಸುವುದಕ್ಕೆ ಆ ಸರ್ಕಾರ ಪರಿಶೀಲನೆ ಮಾಡಿತ್ತೇ ಇಲ್ಲವೇ? ಮಾಡಿದ್ದರೆ ಆ ತೀರ್ಮಾನ ಏನು? ಆ ತೀರ್ಮಾನ ಇಲ್ಲಿಯವರೆಗೂ ಕಾರ್ಯಗತ ಆಗಿದೆಯೋ? ಆಗಿಲ್ಲದಿದ್ದರೆ ಅದಕ್ಕೆ ಏನು ಕಾರಣ? ಆವತ್ತಿನದಿವಸ ಶ್ರೀ ಜಿ.ವಿ.ಕೆ. ರಾವ್ ಕಮಿಟಿ ವರದಿ ಏನು ಬಂತು ಆ ವರದಿ ಬಂದಾಗ ಇಲ್ಲಿಂದ್ದಂಥ ವಿರೋಧಪಕ್ಷದ ಸದಸ್ಯರು, ಯಾವ ಯಾವ ಆರೋಪಗಳನ್ನು ಮಾಡಿದರು. ತಾವೇ ಮಾಡಿದಿರಿ, ಯಾವ ಯಾವ ವಿಚಾರಗಳನ್ನು , ವಿಚಾರಣೆ ಆಗಬೇಕೆಂದು ತಾವು ಮಂಡಿಸಿದಿರಿ. ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ಇಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಹೇಳಿದೆ, ತಾವು ದಯಮಾಡಿ ಅವಕಾಶ ಕೊಡಿ.

ಶ್ರೀ ಕರಿಯಣ್ಣ : ಯಾವುದು ಸರಿ, ಯಾವುದು ಸರಿಯಲ್ಲ ಎನ್ನುವುದನ್ನು ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕಾಗುತ್ತದೆ. ತಾವು ಹಿರಿಯರು, ಮಂತ್ರಿಯಾಗಿದ್ದವರು, ಸಾರಾಸಗಟಾಗಿ ಕಮೀಷನ್ ಹೊಡೆದರು ಎಂದು ಹೇಳಿದರೆ ಯಾವರೀತಿ ತನಿಖೆ ಮಾಡುವುದಕ್ಕಾಗುತ್ತದೆ.? ನಮ್ಮ ನಾಯಕರು ಹೇಳಿದ್ದಾರೆ. ಯಾವುದು ಸ್ಪಷ್ಟವಾಗಿದೆ. ಎನ್ನುವುದನ್ನು ಕೊಡಿ ತನಿಖೆ ಮಾಡೋಣ, ಶಿಕ್ಷೆ ಮಾಡೋಣ, ನಾವೂ ನಿಮ್ಮ ಪರವಾಗಿದ್ದೇವೆಂದು ಹೇಳಿದ್ದಾರೆ. ಅದುಬಿಟ್ಟು ಸುಮ್ಮನೆ ಗೂಬೆ ಕೂರಿಸುವುದಕ್ಕೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದಾರೆ, ಸಾಕ್ಷಿ ಇಲ್ಲ, ಆಧಾರ ಇಲ್ಲ ಎಂದು ಹೇಳಿದರೆ ಸರಿಯೇ. ಅವರಲ್ಲಿ ಸ್ಪಷ್ಟ ನಿಲುವು ಇಲ್ಲ. ನೀವು ಕೊಡಬೇಕೆಂದು ಹೇಳಿದಿರಿ. ಅದಕ್ಕೆ ನಮ್ಮ ನಾಯಕರು ಯಾವ ರೂಪದಲ್ಲಿ ಕೊಡಬೇಕೆಂದು ಕೇಳಿದರು ಮಾನ್ಯ ಏಕಾಂತಯ್ಯನವರು ಯಾವುದೋ ಒಂದು ಆಗಿದೆ ಎಂದು ಹೇಳಿದರು. ಯಾವುದಕ್ಕೂ ಒಂದು ಸ್ಪಷ್ಟವಾದ ನಿಲುವೇ ಇಲ್ಲದೇ ಮಾತನಾಡಿದರೆ ಏನು ಬರುತ್ತದೆ. ಯಾವುದಕ್ಕೂ ಒಂದು ನಿಲುವು ಇಲ್ಲ, ಚೌಕಟ್ಟು ಇಲ್ಲ. ಸುಮ್ಮ ಸುಮ್ಮನೆ ಆಪಾದನೆ ಮಾಡುವುದು ಅದನ್ನು ನಾಳೆ ಪತ್ರಿಕೆಯವರು ಹಾಕುತ್ತಾರೆ. ನಿಲುವು ಏನು ಚೌಕಟ್ಟು ಏನು ಎನ್ನುವುದನ್ನು ಹೇಳಿ.......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕರಿಯಣ್ಣನವರು ಹೇಳಿದಮೇಲೆ, ಪತ್ರಿಕೆಯವರು ಹಾಕಬಾರದು. ಎಲ್ಲರೂ ಪತ್ರಿಕೆಯವರಿಗೆ, ಧಾರಾಳವಾಗಿ ಉಪದೇಶ ಹೇಳುತ್ತಾ ಇದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಕರಿಯಣ್ಣನವರನ್ನು ಕೇಳಿ ನಾವು ನಿಲುವು ತೆಗೆದುಕೊಳ್ಳಬೇಕಾಗಿಲ್ಲ. ನೀವು ಕೇಳಿದ್ದರಿಂದ, ಪೂರ್ತಿ ವಿಷಯ ಹೇಳುತ್ತೇನೆ, ನೀವು ಮಾತನಾಡುವುದಕ್ಕೆ ಮುಂಚೆ ದಯಮಾಡಿ ವಿಷಯ ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅಷ್ಟೊಂದು ಗೌರವ ಇಲ್ಲದಿದ್ದರೆ, ನೀವು ಮಾತನಾಡಬೇಡಿ, ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ : ನಿಮ್ಮ ಬಗ್ಗೆ ಅಪಾರವಾದ ಗೌರವ ಇದೆ. ಇನ್ನೊಬ್ಬರ ಬಗ್ಗೆ ಅವಹೇಳನ ಮಾಡಿ ಮಾತನಾಡುವುದನ್ನು ಕಡಿಮೆಮಾಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅವಹೇಳನಕರವಾಗಿ ಏನು ಮಾತನಾಡಿದ್ದೇನೆ, ದಾಖಲೆ ತೆಗೆಸಿ.

ಅಧ್ಯಕ್ಷರು : ಯಾರೂ ಅವಹೇಳನಕರವಾಗಿ ಏನೂ ಹೇಳಿಲ್ಲ. ಬಹಳ ಗೌರವ ಇದೆಯೆಂದು ಹೇಳಿದ್ದಾರೆ. ನಿಮ್ಮ ಬಗ್ಗೆ ಬಹಳ ಗೌರವ ಇದೆಯೆಂದು ಹೇಳಿದ್ದಾರೆ. ಇದನ್ನು ಅಲ್ಲಿಗೇ ಬಿಟ್ಟುಬಿಡೋಣ, ನೀವೇನೂ ಹೇಳಿಲ್ಲ. ನಾನು ಹೇಳುತ್ತಿದ್ದೇನೆ, ನೀವೇನೂ ಹೇಳಿಲ್ಲ. ನೀವು ಮುಂದುವರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಒಂದು ವೈಯಾಲಿಕಾವಲ್ ಕೋ-ಆಪರೇಟೀವ್ ಸೊಸೈಟಿ ಎಂದು ಇದೆ. ನಿಮ್ಮ ಬಿ.ಡಿ.ಎ. ಮುಚ್ಚಿ ಬಿಡಿಸಿ ಕಾರ್ಪೊರೇಷನ್ ಮುಚ್ಚಿಬಿಡಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷರಾಗಿದ್ದಾರಲ್ಲಾ ಆ ಹೌಸಿಂಗ್ ಬೋರ್ಡ್‌ನ್ನೂ ಮುಚ್ಚಿಬಿಡಿರಿ. ಎಲ್ಲಾ ಸೊಸೈಟಿಗೆ ವಹಿಸಿಕೊಟ್ಟುಬಿಡಿರಿ.

ಶ್ರೀ ಕಾಗೋಡು ತಿಮ್ಮಪ್ಪ : ಒಂದು ನಿಮಿಷ ಸಿಟ್ಟಾಗಬೇಡಿ. ಈ ಹೌಸ್ ಬಿಲ್ಡಿಂಗ್ ಸೊಸೈಟೀಸ್ ಪ್ರಸ್ತಾಪ ಏನಿದೆ, ವೈಯಾಲಿ ಕಾವಲ್ ಸೊಸೈಟಿ ಮತ್ತು ಇನ್ನೊಂದಷ್ಟು ಸೊಸೈಟಿಗಳು ಇವೆಯಲ್ಲ ಅವುಗಳ ಬಗ್ಗೆ ಈ ಸದನದಲ್ಲಿ ಸುಮಾರು ಒಂದು ಡಜನ್ ಟೈಮ್ ಚರ್ಚೆಯಾಗಿರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಏಕೆಂದರೆ ಹೈಕೋರ್ಟಿನವರುನ Colourable exercise of powers ಎಂದು ಹೇಳಿದ್ದಾರಲ್ಲ, ಅದಕ್ಕಾಗಿ ನಿಮ್ಮ ಸರಕಾರ ಏನು ಮಾಡಿದೆ ಎನ್ನುವುದನ್ನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಸುಮಾರು 476ಕೋಟಿ ರೂಪಾಯಿಗಳ ವ್ಯವಹಾರ ಇದು. ಅದರಲ್ಲಿ ಸುಮಾರು 300 ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ಈಗ ನಾನು ಪ್ರಸ್ತಾಪ ಮಾಡಿದ್ದೇನೆ. ಒಂದು ಸೊಸೈಟಿಯಲ್ಲಿ ಏನು ನಡೆದಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದರೆ ಒಳ್ಳೆಯದು. ಇದು ನಾನು ಬರೆದುಕೊಂಡಿರುವ ನೋಟ್ಸ್ ಸಿ.ಒ.ಡಿ. ತನಿಖೆಯಿಂದ ಬಂದಿರತಕ್ಕಂಥ ವರದಿ. ಸಿ.ಒ.ಡಿ. ತನಿಖೆಯ ವರದಿಯಲ್ಲಿ ಏನು ಹೇಳಿದ್ದಾರೆ ಅದನ್ನು ತಮಗೂ ತಮ್ಮ ಮೂಲಕ ಮಾನ್ಯ ಕರಿಯಣ್ಣನವರ ಗಮನಕ್ಕೂ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕರಿಯಣ್ಣನವರನ್ನು ನೀವು ಪದೇ ಪದೇ ಕರೆಯಬೇಡಿ. ಅವರು ಸುಮ್ಮನೆ ಎದ್ದು ನಿಂತುಕೊಂಡು ತೊಂದರೆ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ನಮ್ಮ ಜಿಲ್ಲೆಯವರು ತಿಳಿದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ದಿನಾಂಕ 25-1-1973ರಲ್ಲಿ ಅನ್ನಪೂರ್ಣಮ್ಮ ಎನ್ನತಕ್ಕಂಥ ಒಬ್ಬರಿಗೆ ಸೇರಿದ 40 ಎಕರೆ ಭೂಮಿಯನ್ನು ಬಾಪೂಜಿ ನಗರ ಇಂಡಸ್ಟ್ರಿಯಲ್ ವರ್ಕರ್ಸ್ ಹೌಸಿಂಗ್ ಸೊಸೈಟಿಗೆ 4 ಲಕ್ಷದ 50 ಸಾವಿರ ರೂಪಾಯಿಗಳಿಗೆ ಮಾರುತ್ತಾರೆ. ನಂತರ 20-4-1980 ರಲ್ಲಿ ಇದೇ ಭೂಮಿಯನ್ನು ಅಂದರೆ 40ಎಕರೆಯನ್ನು ಎಕರೆಗೆ 70 ಸಾವಿರ ರೂಪಾಯಿ ಎಂದುಹೇಳಿ ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಗೆ ಮಾರುತ್ತಾರೆ. ಒಂದು ಒಕರೆಗೆ 70 ಸಾವಿರ ರೂಪಾಯಿ ಅಂದರೆ 28 ಲಕ್ಷ ರೂಪಾಯಿ ಆಯಿತು. ಆದರೆ ಇವರಿಗೆ ಅಡ್ವಾನ್ಸ್ ಎಷ್ಟು ಕೊಡುತ್ತಾರೆ ಎಂದರೆ, ಒಂದು ಕೋಟಿ ಹದಿಮೂರು ಲಕ್ಷ, ಎಂಬತ್ತೇಳು ಸಾವಿರದ ಆರುನೂರ ಎಂಬತ್ತುನಾಲ್ಕು ರೂಪಾಯಿಗಳನ್ನು ಚೆಕ್‌ಗಳ ಮೂಲಕ ಕೊಡುತ್ತಾರೆ. ಪ್ಲೀಸ್ ಮಾರ್ಕ್

ಶ್ರೀ ಎಸ್. ಬಂಗಾರಪ್ಪ : 1973 ರಲ್ಲಿ

ಶ್ರೀ ಡಿ.ಬಿ. ಚಂದ್ರೇಗೌಡ : 1973ರಲ್ಲಿ ಬಾಪೂಜಿ ನಗರ.....

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಯಾರಿಗೆ ಕೊಟ್ಟರು?

(ಗೊಂದಲ)

SRI D.B. CHANDRE GOWDA : I don't think that the Debate will have its seriousness, if there is no discipline. Senior Members like, my friend Sri Kagodu Thimmappa.

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿರಿ.

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರೇ ಏತಕ್ಕೆ ನೀವು ಹೀಗೆ ಆಗಿಬಿಟ್ಟಿರಿ. ನೀವು ಮೊದಲು ಚೆನ್ನಾಗಿದ್ದಿರಿ. ಅವರು ಹೇಳುವುದನ್ನು ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : 25.1.73 ರಲ್ಲಿ 40 ಎಕರೆ ಜಮೀನನ್ನು ನಾಲ್ಕೂವರೆ ಲಕ್ಷಕ್ಕೆ ಬಾಪೂಜಿ ನಗರ ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿಗೆ ಕೊಟ್ಟು....

ಶ್ರೀ ವಾಟಾಳ್ ನಾಗರಾಜ್ : ಇದೊಂದು ಕರ್ಮಕಾಂಡ

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಕರ್ಮಕಾಂಡ. ವೈಯಾಲಿ ಕಾವಲ್ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗೆ ಇದೇ ಅನ್ನಪೂರ್ಣಮ್ಮನವರು ಎಕರೆಗೆ 70 ಸಾವಿರದಂತೆ ಮಾತನಾಡಿ ಚೆಕ್ ಮೂಲಕ ಒಂದು ಕೋಟಿ ಹದಿಮೂರು ಲಕ್ಷದ ಎಂಬತ್ತೇಳುಸಾವಿರ ರೂಪಾಯಿಗಳನ್ನು ಅಡ್ವಾನ್ಸಾಗಿ ತೆಗೆದುಕೊಳ್ಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಯಾವಾಗ ತೆಗೆದುಕೊಂಡರು?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇಲ್ಲಿ ಪಾಟೀ ಸವಾಲು ಬೇಡ

ಅಧ್ಯಕ್ಷರು : ನಿಜ ನಿಮ್ಮ ಕ್ರಿಯಾಲೋಪಗಳನ್ನು ಎತ್ತಿಹಿಡಿಯುತ್ತೇನೆ. ಇಲ್ಲಿ ಪಾಟೀ ಸವಾಲೆಗೆ ಅವಕಾಶ ಕೊಡುವುದಿಲ್ಲ. ನೀವು ಹೇಳತಕ್ಕಂಥಾದ್ದನ್ನು ಹೇಳಿ. ಅನ್ನಪೂರ್ಣಮ್ಮನವರು ಎಂದು ನಾಲ್ಕು ಸಲ ಹೇಳಿದಿರಿ ನೀವು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರಿಗೆ ಹೇಳಿದರೂ ತಿಳಿಯುವುದಿಲ್ಲವಲ್ಲ

ಅಧ್ಯಕ್ಷರು : ತಾವು ಮುಂದುವರಿಸಿರಿ, ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ದಿನಾಂಕ 29-7-82ಕ್ಕೆ ಮೊದಲನೇ ಸೊಸೈಟಿ ಅಂದರೆ ಈ ಬಾಪೂಜಿ ಇಂಡಸ್ಟ್ರಿಯಲ್ ವರ್ಕರ್ಸ್ ಸೊಸೈಟಿವರು ನಾಲ್ಕುವರೆ ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟ ಅಪರಾಧಕ್ಕಾಗಿ ಬಿ.ಡಿ.ಎ.ಗೆ. ಈ 40 ಎಕರೆ ಭೂಮಿಯನ್ನು ನಮಗೆ ಕೊಡಬೇಕೆಂದು ಕೇಳುತ್ತಾರೆ. ಬಿ.ಡಿ.ಎ. ದಿನಾಂಕ 1-12-82ರಂದು ರೆಜಲ್ಯೂಷನ್ ಮಾಡಿದ್ದಾರೆ. and asks this Society to deposit Rs.22,14,522/- at the rate of Rs.65,000/- per acre. The same annapurnamma applies tothe Government not to acquire the lands which she has sold to Bapujinagar Industrial Co-operative Society and permit her to sell it to Vyalikaval Society.

SHRI S. BANGARAPPA : When?

SHRI D.B. CHANDRE GOWDA : 1982. ಏತಕ್ಕೆ ನಗುತ್ತೀರಿ? ಬರುತ್ತೇನೆ ನಾನು ಬರುತ್ತೇನೆ ಎಂದು ನಿಮಗೆ ಗೊತ್ತಾಗುತ್ತದೆ. ನಿಮ್ಮ ಕುತ್ತಿಗೆ ಎಲ್ಲಿ ಹಿಡಿಯಬೇಕೆಂದು ನನಗೆ ಗೊತ್ತು...

(ಗೊಂದಲ)

ಅಧ್ಯಕ್ಷರು : ನೀವು ಕೈಗೆ ಪೆನ್ಸಿಲ್ ತೆಗೆದುಕೊಂಡು ಎಲ್ಲಾ ಬರೆದುಕೊಳ್ಳಿ. ಅವರು ಹೇಳಿದ್ದನ್ನು.

ಶ್ರೀ ಡಿ.ಬಿ. ಚಂದ್ರೇಗೌಡ : 1983ರಲ್ಲಿ ನಮ್ಮ ಸರ್ಕಾರ ಮಾಡಿದ್ದನ್ನು ನಿಮಗೆ ಹೇಳುತ್ತೇನೆ. ದಿನಾಂಕ 25-5-83ರಲ್ಲಿ Government directions to the Commissioner for BDA to sell the land only to Vyalikaval House Building Co operative Society. ಇದು 1983ರಲ್ಲಿ ಆಗಿದೆ. ದಿನಾಂಕ 24-4-80ರಲ್ಲಿ registration in favour of Vyalikaval House Building Co-operative Society. ದಿನಾಂಕ 25-7-833ಕ್ಕೆ ಈ ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಯ ಸೆಕ್ರೆಟರಿ ಶ್ರೀ ಅನಂತ ಪದ್ಮನಾಭ ಎನ್ನತಕ್ಕಂಥವರು ಫ್ರೆಶ್ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಯಾರ ಹತ್ತಿರ ಎಂದರೆ ಇದೇ ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಯವರ ಹತ್ತಿರ ಫ್ರಶ್ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಮೊದಲು , ಎಕರೆಗೆ 70 ಸಾವಿರ ರೂಪಾಯಿಯಂತೆ 40 ಎಕರೆಗಳಿಗೆ 28 ಲಕ್ಷ ರೂಪಾಯಿಗಳು ಅಡ್ವಾನ್ಸ್ ತೆಗೆದುಕೊಂಡಿದ್ದು 1 ಕೋಟಿ 13 ಲಕ್ಷ. ಎರಡನೆಬಾರಿ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಇದೇ ಸೊಸೈಟಿಯ ಸೆಕ್ರೆಟರಿಯವರು 2 ಕೋಟಿ 71 ಲಕ್ಷ 4 ಸಾವಿರ ರೂಪಾಯಿಗಳಿಗೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ದಿನಾಂಕ 25-7-83ರಲ್ಲಿ ಶ್ರೀ ಅನಂತ ಪದ್ಮನಾಭ ಎನ್ನತಕ್ಕಂಥಾ ಈ ಸೊಸೈಟಿಯ ಸೆಕ್ರೆಟರಿಯವರು 22-9-1984ರಲ್ಲಿ Government directed the BDA to hand over the Bapujinagar Industrial Co-operative society. ದಿನಾಂಕ 28-9-84ರಲ್ಲಿ High Court issued a stay order ಇದು ಫಸ್ಟ್ ಕ್ಲಾಸ್ ಚೀಟಿಂಗ್ ಕೇಸ್. ಇದನ್ನು ನಮ್ಮ ಶ್ರೀ ಕೆ.ಎಚ್. ಪಾಟೀಲರು ಮಂತ್ರಿಗಳಾಗಿ ವಿಚಾರಣೆ ಮಾಡಿದರು. ಇದು 35-36 ಕೋಟಿ ರೂಪಾಯಿಗಳ ವ್ಯವಹಾರ. ಇದು ಒಂದು ಸೊಸೈಟಿಯದು. ನಾನು ಬಾಕಿ ಸೊಸೈಟಿಗಳ ವಿಚಾರಣೆಯನ್ನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ವಿಚಾರಣೆ ಮಾಡಿದರು. ಸೆಕ್ಷನ್ 30 (ಬಿ) ಯಂತೆ ಈ ಸೊಸೈಟಿಯನ್ನು ಸರ್ಕಾರ ವಹಿಸಿಕೊಂಡಿತು. ಸರ್ಕಾರ ವಹಿಸಿಕೊಂಡು ಇದನ್ನು ನಡೆಸುವುದಕ್ಕೆ ಒಬ್ಬ ಸೀನಿಯರ್ ಐ.ಎ.ಎಸ್. ಅಧಿಕಾರಿಗೆ ಜವಾಬ್ದಾರಿ ಕೊಟ್ಟರು. ಇದು ನನ್ನಲ್ಲಿರತಕ್ಕಂಥ ದಾಖಲೆಗಳ ಪ್ರಕಾರ. ಆದರೆ ಈ ಐಎಎಸ್ ಅಧಿಕಾರಿ ಸೊಸೈಟಿಗಳನ್ನು ತಾನು ವಹಿಸಿಕೊಂಡು ಅಲ್ಲಿರತಕ್ಕಂಥ ಜಾಗವನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎಂದು ಪೋಲೀಸಿನವರಿಗೆ ಬರೆದರೆ ಇದೇ ಸರ್ಕಾರದ ಪೋಲೀಸರು ಅವರಿಗೆ ರಕ್ಷಣೆ ರಕ್ಷಣೆ ಕೊಡುವುದಿಲ್ಲ ರಕ್ಷಣೆ ಯಾರಿಗೆ ಸಿಗುತ್ತದೆಂದರೆ ಶ್ರೀ ಅನಂತಪದ್ಮನಾಭ ಎಂಬ ಕಾರ್ಯದರ್ಶಿಗೆ The paid secretary of the Society files a case against the same society.

ಇದನ್ನು ಗಮನಿಸಿ ಈ ಸೊಸೈಟಿಯನ್ನು ಸೂಪರ್ ಸೀಡ್ ಮಾಡಿ ಐಎಎಸ್ ಅಧಿಕಾರಿಯನ್ನು ಹಾಕಿದ್ದಾರೆ. ಇಂತಹ ನಾಲ್ಕೈದು ಸೊಸೈಟಿಗಳಿಗೆ ಹಾಕಿದ್ದಾರೆ. ಇದರ ಪರಿಣಾಮ ಏನು? ಇವತ್ತು ನಮ್ಮ ಪತ್ರಿಕೆ ಸಂಯುಕ್ತ ಕರ್ನಾಟಕದಲ್ಲೂ ಕೂಡ ಪ್ರಸಿದ್ಧಿಯಾಗಿದೆ. ಯಾವಾಗ ಇಷ್ಟು ದೊಡ್ಡ ಪ್ರಮಾಣದ ಅನ್ಯಾಯ ಇಲ್ಲಿ ನಡೆಯುತ್ತಾ ಇದೆಯೆಂದು ಗೊತ್ತಾಗಿ ಕಾರ್ಯೋನ್ಮುಖರಾದರೋ ತಕ್ಷಣವೇ ಎಎಸ್‌ಸಿಎಮ್ 1224/91 ದಿನಾಂಕ 20-7-91ಕ್ಕೆ ಎಲ್ಲಾ ಈ ಸೊಸೈಟಿಗಳ ಫೈಲ್ ಗಳನ್ನು ಕಳುಹಿಸಿ ಎಂದು ಹೇಳಿದರು. ಏತಕ್ಕೆ?

(MADAM DY. SPEAKER IN THE CHAIR)

I will read out the note. It has already appeared in the press.

"All related files pertaining to all house building co-operative societies will have to be obtained from the Secretary to Government, Co-operation

Department, today only, as desired by the Hon'ble Chief Minister."

Why? "Instructions may be issued accordingly." Immediately on the same day, the Chief Secretary writes to the Secretary to Government , Co-operation Department. ಫೈಲ್‌ಗಳು ಎಷ್ಟು ಕ್ವಿಕ್ ಆಗಿ ಹೋಗುತ್ತವೆ. ನೋಡಿ.

The Chief Secretary, on the same day writes.

"Immediate : 22nd July, 1991. CSC 5924 CM/91.

"Kind attention of the Secretary to Government, Co-operation Department is invited to the note No. SCM/1224/91 dated 22nd July 1991. The instructions of the Chief Minister's Secretary may kindly be complied with immediately and the relevant files handed over to the bearer of this note."

The Minister concerned, I know, he is not here, I want to clerify from him. He resents it. 400 ಫೈಲ್ಸ್ ಕಳುಹಿಸಿ ಎಂದು ನಾನು ಯಾವ ಸೊಸೈಟಿಯ ಫೈಲ್ಸ ಕಳುಹಿಸಬೇಕು, ಸಂಬಂಧ ಏನು ದಯವಿಟ್ಟು ತಿಳಿಸಿ ಎಂದು ಅವರು ಬರೆಯುತ್ತಾರೆ. ಅದಕ್ಕೆ ಯಾರದೂ ಉತ್ತರ ಹೋಗುವುದಿಲ್ಲ.

I would like to ask the Minister. He is a Senior man, Shri K.H. Patil. ಈ ಕಾರಣಕ್ಕಾಗಿ ಖಾತೆ ಬದಲಾವಣೆ ಆಯಿತೇ? ಹಾಗಿಲ್ಲದಿದ್ದರೆ ಮುಖ್ಯ ಮಂತ್ರಿಗಳಿಗೂ ಸಹಕಾರಿ ಮಂತ್ರಿಗಳಿಗೂ ಈ ವಿಚಾರದಲ್ಲಿ ನಡೆದಿರತಕ್ಕಂಥ ಎಲ್ಲಾ ದಾಖಲೆಗಳನ್ನು ಈ ಸದನದಲ್ಲಿ ಇಡಿ. ನಮ್ಮ ಮಾನ್ಯ ಮಿತ್ರರು ಕೂಗುತ್ತಿದ್ದ ಹಾಗೆ ಇದು ಯಾವುದೋ ಗೂಬೆಯನ್ನು ತಲೆ ಮೇಲೆ ಕೂರಿಸುವುದಕ್ಕೆ ಮಾಡಿದ್ದಲ್ಲ. ಇಷ್ಟು ಸ್ವಿಫ್ಟ್ ಆಗಿ 22ನೇ ತಾರೀಖು ನಡೆಯುತ್ತದೆ. 27ನೇ ತಾರೀಖು ಮಂತ್ರಿಗಳ ಖಾತೆ ಬದಲಾವಣೆಯಾಗುತ್ತದೆ.

Why? I would like to know being a responsible Member of this House, as to why it should happen? What transpired between them? Yesterday or day before yesterday, the concerned Co-operation Secretary, the senior IAS Officer , is also changed. why? What is the shady deal here? ಇದಕ್ಕೆ ಸಮಜಾಯಿಸಿ, ಉತ್ತರದಲ್ಲಿ ಸಿಗಲಿ. ನಂತರ ಯಾರಿಗೆ ಸರ್ಕಾರ ಈ ಸೊಸೈಟಿಯ ಜವಾಬ್ದಾರಿಯನ್ನು ವಹಿಸಿಕೊಡುತ್ತದೋ ಅವರು ದಿನಾಂಕ 6-7-1991ರಲ್ಲಿ ಒಂದು ಪತ್ರವನ್ನು ಬರೆಯುತ್ತಾರೆ.

"Vyalikaval House Building Co-operative Society is constructing a block of files called Kasturidhama Apartments in Malleshwaram, Bangalore. When I enquired with the Secretary of the Vyalikaval House Building Co-operative Society, Shri Ananthapadmanabha, as to how decisions were taken on the selection of the Companies for the purchase of basic raw materials like cement and steel, I was informed, no tenders have been called for steel but have been called for the purchase of cement." This is a society registered under the Societies Act for which there is a Minister, there is a department . ಈ ರೀತಿ ಸೊಸೈಟಿಗಳು ಕೆಲಸ ಮಾಡುತ್ತಿವೆ. 22-7-91ಕ್ಕೆ ಒಂದು ಪತ್ತ ಬರೆಯುತ್ತಾರೆ. ದಯವಿಟ್ಟು ಈ ಪತ್ರಗಳನ್ನು ಸದನದ ಮುಂದೆ ಇಡಿ ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ.

Let all of them come on record. ನಾನು ಈ ಬಗ್ಗೆ ಎಲ್ಲಾ ವಿಚಾರಗಳನ್ನು ಹೇಳುವುದಿಲ್ಲ. ಒಂದೇ ಒಂದು ವಿಚಾರವನ್ನು ಹೇಳುತ್ತೇನೆ.

"Prevention of such construction was quite vague on any account painstaking and tedious venture which requires daily vigilance and attention of the society. Now I am instructed not to approach competent authority that he is the police for further help in this matter. Since there are instructions ..." This is now the Government functions.

ಜವಾಬ್ದಾರಿಯನ್ನು ಹೊತ್ತುಕೊಂಡು 36ಕೋಟಿ ರೂಪಾಯಿಗಳನ್ನು ಮುಳುಗಿಸತಕ್ಕಂತಹ ಸೊಸೈಟಿಯನ್ನು ಸೂಪರ್ ಸೀಡ್ ಮಾಡಿ , ಅಲ್ಲಿಗೆ ಸೀನಿಯರ್ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿ ಅವರಿಗೆ ಪೋಲೀಸರ ಸಹಾಯವನ್ನು ಕೊಡುವುದಕ್ಕೆ ನೀವು ತಯಾರಾಗಿಲ್ಲ. ಅಂದರೆ ನೀವು ಏನನ್ನು ಮುಳುಗಿಸುವುದಕ್ಕೆ ಹೊರಟಿದ್ದೀರಿ? I would like to have the explanation from the Government.

(Interruptions)

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹಿಂದೆ ಹೇಗೆ ಮಾಡಿದ್ದೀರೋ ಹಾಗೆಯೇ ನಾನು ಮಾಡುತ್ತೇನೆ. ನಿಮ್ಮ ಹೌಸಿಂಗ್ ಬೋರ್ಡನ್ನು ಮುಚ್ಚಿ ಇವರಿಗೆ ವಹಿಸಿ ಅನಂತ ಪದ್ಮನಾಭನಂತಹವರನ್ನು ಹೌಸಿಂಗ್ ಬೋರ್ಡಿನ ಛೇರ್ಮನ್ ಮಾಡಿಬಿಡಿ. ಆಗ ಈ ಸೊಸೈಟಿಗಳೆಲ್ಲ ಉದ್ಧಾರವಾಗುತ್ತವೆ. ಇಂತಹ ಸೊಸೈಟಿಗಳಿಂದ ಜನರಿಗೆ ಆಗಿರತಕ್ಕ ಮೋಸವನ್ನು ಸಾರ್ವಜನಿಕರ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿ, ಸೊಸೈಟಿಗಳನ್ನು ಸೂಪರ್ ಸೀಡ್ ಮಾಡಿದರೆಂದು ನಾನು ಸಂತೋಷಪಟ್ಟಿದ್ದೆ. ಆದರೆ ಇವತ್ತು ಏನಾಗಿದೆ ಅಂದರೆ, ಇಂತಹ ಸೊಸೈಟಿಗಳನ್ನು ಸೂಪರ್ ಸೀಡ್ ಮಾಡಿದ ಪರಿಣಾಮದಿಂದ ಮಂತ್ರಿಗಳ ಖಾತೆಗಳು ಬದಲಾವಣೆಯಾಗುತ್ತದೆ. ನಾನು ಅದಕ್ಕಿಂತ ಹೆಚ್ಚಿಗೆ ಹೇಳಲು ಹೋಗುವುದಿಲ್ಲ, ಮುಖ್ಯ ಮಂತ್ರಿಗಳಿಂದ ಉತ್ತರ ಏನು ಬರುತ್ತದೆ, ಅದನ್ನು ನೋಡಿಕೊಂಡು ನಾನು ಇನ್ನೇನಾದರೂ ಮಾಹಿತಿಗಳನ್ನು ಬೇಕಾದರೆ ಕೊಡುತ್ತೇನೆ. ಮತ್ತೊಂದು ಬಹಳ ಮುಖ್ಯವಾದಂತಹ ಪ್ರಕರಣ ಇದೆ. ಇದು ಭಾರಿ ಶ್ರೀಮಂತ ಕುಟುಂಬಕ್ಕೆ ಸೇರಿದಂಥದ್ದು. ಇಲ್ಲಿ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜನ್ನು ನಡೆಸತಕ್ಕಂತಹ ಗೋಕುಲ ಎಂಬ ದೊಡ್ಡ ಸಂಸ್ಥೆ. ಸಂಸ್ಥೆಯವರ ಒಟ್ಟು ಆಸ್ತಿ ಎಷ್ಟಿದೆ ಎಂದರೆ, ದೇವನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 600 ಎಕರೆ, ಬೆಂಗಳೂರಿನಲ್ಲಿ ಸುಮಾರು 62 ಎಕರೆ ಪ್ರದೇಶ ಇದೆ. ಇದಕ್ಕೆ ವಿವರಣೆ ಬೇಕಾಗುತ್ತದೆ.

ಶ್ರೀ ಮುನಿನರಸಿಂಹಯ್ಯ : ದೇವನಹಳ್ಳಿಯಲ್ಲಿ 600 ಎಕರೆ ಒಂದೇ ಕಡೆ ಇದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಬೇಕಾದರೆ ನಕಲನ್ನು ಮಾಡಿಕೊಡುತ್ತೇನೆ. ಏಕೆಂದರೆ ಆಸ್ತಿಯ ಪಟ್ಟಿ ಬಹಳಷ್ಟು ಇದೆ. ತಹಶೀಲ್ದಾರ್ ರವರ ಕಛೇರಿಯಿಂದ ನಾನು ತರಿಸಿರತಕ್ಕಂತಹ ಸರ್ಟಿಫೈಡ್ ಕಾಪಿಗಳು ಇವೆ. ನಿಮಗೆ ಬೇಕಾದರೆ ಇವನ್ನು ಕಾಪಿ ಮಾಡಿಕೊಡುತ್ತೇನೆ. ನಿಮ್ಮ ಸರ್ಕಾರ ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಡಾ. ಎನ್.ಬಿ. ನಂಜಪ್ಪ : ಇದು ಎಷ್ಟು ವರ್ಷಗಳಿಂದ ಇದೆ. ನಿಮ್ಮ ಸರ್ಕಾರ ಇದ್ದಾಗಿನಿಂದಲೂ ಇದೆಯೇ? ಇದನ್ನು ನಿಮ್ಮ ಕಾಲದಲ್ಲಿ ಮರೆತ್ತಿದ್ದೀರಿ, ಈಗ ಜ್ಞಾಪಕ ಬಂದಿರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಗೊತ್ತಾಗುವುದಿಲ್ಲ. ನಮ್ಮ ಕಾಲದಲ್ಲಿ ಏನಾಯಿತೆಂದು ಕೇಳಿದ್ದೀರಿ.....

ಡಾ.ಎನ್.ಬಿ. ನಂಜಪ್ಪ : ಅನುಕೂಲಸ್ಥರಿಗೆಲ್ಲ 600 ಎಕರೆ ಇವರ ಸರ್ಕಾರ ಇದ್ದಾಗ ಮಾಡಿರುವುದು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ಯಾವುದು ಜ್ಞಾಪಕ ಇಲ್ಲ. ಅದನ್ನು ನೀವು ಜ್ಞಾಪಕ ಮಾಡುತ್ತಾ ಇರಿ.

ಶ್ರೀ ಎಸ್. ಬಂಗಾರಪ್ಪ : ನಿಮ್ಮದು ಯಾವುದು ಇಲ್ಲ. ನಾವೇನು ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ : ಅವರು ಮಾತನಾಡುವುದಕ್ಕೆ ಸಂಪೂರ್ಣ ಅವಕಾಶ ಕೊಡಬೇಕಾಗುತ್ತದೆ. ನಮಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ನಿಮಗೂ ಅವಕಾಶ ಸಿಗುತ್ತದೆ. ಇವತ್ತು ನಮ್ಮ ರಿಪ್ಲೈ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ಅದು ಹೇಗಾಗುತ್ತದೆ? ನಿರ್ಧಾರ ಮಾಡುವವರು ನೀವೋ ಅಥವಾ ಅಧ್ಯಕ್ಷರೋ?

ಶ್ರೀ ಎಸ್. ಬಂಗಾರಪ್ಪ : ಹಾಗಾದರೆ ನೀವು ಭಾಷಣ ಮಾಡಬೇಕೆಂದು ನಿರ್ಧಾರ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರು ನಿರ್ಧಾರ ಮಾಡುತ್ತಾರೆ. ನಾವು ಮಾತನಾಡಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ : ಯಾವಾಗ ರಿಪ್ಲೈ ಆಗಬೇಕೆಂದು ಐಡಿಯ ಸಿಗುತ್ತಿಲ್ಲ. ಏಕೆಂದರೆ ಇವತ್ತು ರಿಪ್ಲೈ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ಇವತ್ತು ರಿಪ್ಲೈ ಆಗಬೇಕು ಎಂದರೆ ನಾವು ನಿಮಗೆ ಬಿಡಬೇಕಲ್ಲ. ನಾನು ಮಾತನಾಡಬೇಕು.

2.50 ಪಿ.ಎಂ.

ಶ್ರೀ ಎಸ್. ಬಂಗಾರಪ್ಪ : ರಿಪ್ಲೈ ಮಾಡಲು ನೀವು ಬಿಡುವುದಿಲ್ಲ ಎಂದರೆ, ನೀವು ಭಾಷಣ ಮಾಡಲು ನಾವು ಬಿಡಬೇಕಲ್ಲ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಇದರಲ್ಲಿ ಏನಾಗುತ್ತದೋ ನೋಡೋಣ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಪಾಪ ಆ ಸದಸ್ಯರಿಗೆ ಹಳೆಯ ವಾಸನೆ, ಫಾರೆಸ್ಟ್ ಇಲಾಖೆಯ ವಾಸನೆ ಕೆಲವರಿಗೆ ಇದೆ.

ಶ್ರೀ ಎಂ. ಮಹಾದೇವ್ : ಗೌಡರೇ, ನಿಮ್ಮ ಅವಿಶ್ವಾಸ ನಿರ್ಣಯದ ಮೇಲೆ ನಿಮಗೆ ವಿಶ್ವಾಸ ಇದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀಮನ್ ಎಂ.ಎನ್. ರಾಮಯ್ಯನವರ ಹೆಸರಿನಲ್ಲಿ ಸುಮಾರು 84 ಎಕರೆ 29 1/2 ಗುಂಟೆ, ಅವರ ಮಗ ಎಂ.ಆರ್. ಜಯರಾಮ್ ಹೆಸರಿನಲ್ಲಿ ಸುಮಾರು 3 ಎಕರೆ ಇದೆ. ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸುಮಾರು 62 ಎಕರೆ ಪ್ರದೇಶವನ್ನು ಭೂಶಾಸನ ಮಸೂದೆಯ ವ್ಯಾಪ್ತಿಯನ್ನು ಮೀರಿ ಮತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟನಲ್ಲಿ ರಿಯಾಯಿತಿ ನೀಡಿದ್ದಾರೆ. ಎಲ್ಲ ಶಾಸನಗಳನ್ನೂ ಉಲ್ಲಂಘನೆ ಮಾಡಿ ಇದನ್ನು ಮಾಡಿದ್ದಾರೆ. ಈ ಮಸೂದೆಗಳೆಲ್ಲ ಮೂಲೆಗೆ ಬಿದ್ದಿವೆ. ಈ ಖಾಸಗಿ ಸಂಸ್ಥೆಗೆ

ಪರವಾನಗಿ ನೀಡಿರುವ ಒಂದು ಅಪೂರ್ವವಾದ ಘಟನೆ ಈ ಸರ್ಕಾರದಿಂದ ನಡೆದಿದೆ. ಅದನ್ನು ನಾನು ಬಹಳ ವಿಸ್ತಾರವಾಗಿ ಪ್ರಸ್ತಾಪಿಸಬೇಕಾಗಿದೆ. ಆದರೆ ಸಮಯಾಭಾವವಿರುವುದರಿಂದ ದೀರ್ಘವಾಗಿ ಹೇಳಲು ಹೋಗುವುದಿಲ್ಲ. ಕಾಗೋಡು ತಿಮ್ಮಪ್ಪನವರೇ, ನಿಮಗೆ ಸದ್ಯಕ್ಕೆ ಹೌಸಿಂಗ್ ಬೋರ್ಡ್ ಇದೆಯಲ್ಲ ಅದನ್ನು ನಡೆಸಿ ಸಾಕು, ನಿಮಗೆ ಮುಂದಕ್ಕೆ ಬರುವ ಚಾನ್ಸ್ ಇಲ್ಲ. ರಾಜ್ಯ ಸರ್ಕಾರ ತಾರೀಖು 14-5-91ರಂದು ಒಂದು ಆಜ್ಞೆ ಹೊರಡಿಸಿ ಬಿಇಎಲ್ ಕಾರ್ಖಾನೆಯ ಸಮೀಪದಲ್ಲಿರುವ ಮತ್ತಿಕರೆ, ಚಿಕ್ಕಮಾರನಹಳ್ಳಿ, ದ್ಯಾವಸಂದ್ರ ಗ್ರಾಮಗಳಿಗೆ ಸೇರಿದ ಸುಮಾರು 62 ಎಕರೆಯಷ್ಟು ಭೂಮಿಯನ್ನು ಅದೇ ಪ್ರದೇಶದಲ್ಲಿ ವಾಸವಾಗಿರುವ ಕಂಟ್ರಾಕ್ಟರ್ ಎಂ.ಎಸ್.ರಾಮಯ್ಯನವರಿಗೆ ವಹಿಸಿಕೊಡಲು ಆದೇಶ ನೀಡಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾವುದು ಆ ಲ್ಯಾಂಡ್, ಅವರಿಗೆ ಎಲ್ಲಿಂದ ಬಂತು?

ಶ್ರೀ ಡಿ.ಬಿ.ಚಂದ್ರೇಗೌಡ : ಈ 62 ಎಕರೆ ಪ್ರದೇಶ ಯಾರದು ಎಂದು ತಮಗೆ ಬೇಕಲ್ಲ? ಅದನ್ನು ಕೊಡುತ್ತೇನೆ. ಎಲ್ಲ ಸರ್ಟಿಫೈಡ್ ಕಾಪಿಗಳಿವೆ. ದೀರ್ಘವಾದ ವಿವರಣೆ ಬೇಕು ಎಂದರೆ ಕೊಡುತ್ತೇನೆ. The Detailed note along with RTC ಎಲ್ಲ ಇಲ್ಲಿ ಇದೆ. ಮತ್ತೊಂದು ಸಲ ಕೇಳುವುದಕ್ಕೆ ಹೋಗಬೇಡಿ.

"M.S. Ramaiah, resident of Gokula, Poornapura Village, Kasaba Hobli, Bangalore North Taluk owns the following lands. Name: M.S.Ramaiah, Poornapura Village 46.12 1/2 Acres, Dyavasandra 8.17 acres, Chickmaranalli 18.03 acres. ಮತ್ತೀಕೆರೆ 21 ಎಕರೆ 37 ಗುಂಟೆ. ಒಟ್ಟು 84 ಎಕರೆ 29 1/2 ಗುಂಟೆ.

M.R.Jayaram, Chickmaranahalli 3acres. Total #acres. In all about 36.2* acres in Poornapura village, buildings have already been built.

ಒಬ್ಬ ಮಾನ್ಯ ಸದಸ್ಯರು : ಈ ಭೂಮಿಯನ್ನು ಸರ್ಕಾರ ಕೊಟ್ಟಿತ್ತೋ ಅಥವಾ ಖಾಸಗೀಯವರು ಕೊಟ್ಟಿದ್ದರೋ ಎನ್ನುವುದನ್ನು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಭೂಮಿ ವ್ಯವಹಾರ ಗೊತ್ತೇ ಇಲ್ಲವೇ?

SRI KAGODU THIMMAPPA : We want to know how he acquired that land. Whether he has acquired that land? While acquiring whether he has violated any rules or regulations ?

SRI D.B.CHANDRE GOWDA : Mr. Thimmappa, you are a very senior man. I can understand about backbenchers. ಆದರೆ ನೀವು ಏಕೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಯಾಕೆ ಎಂದರೆ ಅವರು ಫ್ರಂಟ್ ಬೆಂಚ್ ಗೆ ಬರಬೇಕಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಪುನಃ ಹೇಳುತ್ತೇನೆ. ಎಂ.ಎಸ್.ರಾಮಯ್ಯನವರಿಗೆ ಪೂರ್ಣಾಪುರ ಗ್ರಾಮದಲ್ಲಿ ......

(ಗೊಂದಲ)

SRI D.B.CHANDRE GOWDA : I think you have to control the member or otherwise I will have to stop. ಹೀಗೆ ರಾಮಯ್ಯನವರಿಗೆ ಮತ್ತು ಅವರ ಕುಟುಂಬದವರಿಗೆ ಸೇರಿದಂಥ ಸುಮಾರು 62 ಎಕರೆ ಭೂಮಿಯನ್ನು ಸರ್ಕಾರದವರು 14-5-1991ರಂದು ......

ಶ್ರೀ ಗೋಪಾಲ ಮುಕುಂದ ಕಾನಡೆ : ರಾಮಯ್ಯನವರಿಗೆ ಭೂಮಿ ಎಲ್ಲಿಂದ ಬಂತು?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಅದನ್ನು ರಾಮಯ್ಯನವರನ್ನು ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ : ನೀವು ಅದನ್ನು ಹೇಳಬೇಕು. ಏನೋ ದೊಡ್ಡ ಅವ್ಯವಹಾರ ಆಗಿಹೋಗಿದೆ ಎಂದು ಹೇಳಿದ ಹಾಗೆ ಹೇಳುತ್ತಿದ್ದೀರಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅವರು ಏನು ಹೀಗೆ ಮಾತಾನಾಡುತ್ತಾರೆ? ಒಂದು ವಿಧ ಇಲ್ಲ. ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದನ್ನು ಕೇಳುವುದು ಬೇಡವೇ. ಇದೇನು ಅವಿವೇಕ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ರಾಮಯ್ಯನವರಿಗೆ ಕೊಟ್ಟವರು ಯಾರು? ಅಥವಾ ರಾಮಯ್ಯನವರ ಹೆಸರಿನಲ್ಲಿ ಎರಡು ರೆಕಾರ್ಡ್ ಇದೆಯೇ?

ಉಪಾಧ್ಯಕ್ಷರು : ಈಗ 3 ಗಂಟೆಗೆ ಇನ್ನೂ 7-8 ನಿಮಿಷ ಇದೆ.. ಮುಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಸರ್ಕಾರದ ನೋಟೀಫಿಕೇಷನ್ ಓದುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ : ಆ ಜಮೀನು ಯಾರದು? ರಾಮಯ್ಯನವರಿಗೆ ಎಲ್ಲಿಂದ ಬಂತು ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಎಲ್ಲಿಂದ ಬಂತು ಆ ಜಮೀನು ಹೇಳಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ಇಡೀ ಸರ್ಕಾರವನ್ನು ಸಮರ್ಥನೆ ಮಾಡುವವರು ಈ ಮೂರು ಜನ. ನಾನು ಬೆಳಿಗ್ಗೆಯಿಂದ ನೋಡುತ್ತಿದ್ದೇನೆ. ಇವರು ಸಮರ್ಥನೆ ಮಾಡುತ್ತಿದ್ದಾರೆ. ಉಳಿದವರೆಲ್ಲ ಸುಮ್ಮನೆ ಗಂಭೀರವಾಗಿ ಕುಳಿತಿದ್ದಾರೆ. ಈ ಶಿವರಾಮೇಗೌಡರು ಇದ್ದಾರೆಂದು ಗೊತ್ತಿರಲಿಲ್ಲ, ಅವರು ನಾಲ್ಕನೆಯವರು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವರದು ......

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ತಾವು ಮುಂದುವರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮುಂದುವರಿಸುವ ಅವಕಾಶವನ್ನು ತಾವು ನಿರ್ಮಾಣ ಮಾಡಿಕೊಟ್ಟರೆ ಮುಂದುವರಿಸಬಹುದು.

ಶ್ರೀ ಗೋಪಾಲ ಮುಕುಂದ ಕಾನಡೆ : ಆ ಜಮೀನು ಅವರಿಗೆ ಎಲ್ಲಿಂದ ಬಂತು ಎಂದು ಹೇಳಿದರೆ , ಅಷ್ಟು ಸಾಕು.

ಉಪಾಧ್ಯಕ್ಷರು : ಅವರು ಹೇಳುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಈ ಭೂಮಿ ಎಲ್ಲಿಂದ ಬಂತು ಎಂದು ಕೇಳುತ್ತಾರೆ. ಇದು ಪಿತ್ರಾರ್ಜಿತವಾದ ಅಗ್ರಿಕಲ್ಚರಲ್ ಲ್ಯಾಂಡ್ ಆ ಆಸ್ತಿಗೆ ನಮ್ಮ ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಒಂದು ಮಿತಿಯನ್ನು ಹಾಕಿದ್ದಾರೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ಅವರಿಗೆ ಅಲ್ಲಿಂದ ಬಂದಿದೆ, ಇದರಲ್ಲಿ ತಪ್ಪೇನು ಇದೆ?

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ತಪ್ಪೇನೂ ಇಲ್ಲ, ಯಾರು ಎಲ್ಲಿಬೇಕಾದರೂ ಮಾಡಿಕೊಳ್ಳಬಹುದು. ವಿಧಾನ ಸೌಧವನ್ನೂ ಕೂಡ ಯಾರಿಗಾದರೂ ಕೊಟ್ಟುಬಿಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ದಿನಾಂಕ 14-5-91ರಲ್ಲಿ ನೋಟೀಫಿಕೇಷನ್ ನಲ್ಲಿ ಏನು ಮಾಡಿದ್ದಾರೆ ಎಂದರೆ,

"In exercise of powers conferred under Sec.21 (1) (d) of the Urban Land Ceiling Act, 1976, the Government of Karnataka here by agree for exemption along with permission to transfer to the extent of 61 acres $26\frac{1}{2}$ guntas held by Sri M.S. Ramaiah and his ten family members."

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವ ಪ್ರಕಾರ ಇದು ಪಿತ್ರಾರ್ಜಿತವಾದ ಆಸ್ತಿ. ಅದರಲ್ಲಿ ಡಿಸ್‌ಪ್ಯೂಟ್ ಏನೂ ಇಲ್ಲ. ಅದು ಪಿತ್ರಾರ್ಜಿತವಾದ ಆಸ್ತಿಯಾದ ಮೇಲೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಅದರ ಬಗ್ಗೆ ಏನಾದರೂ ಒಂದು ಡಿಸಿಷನ್ ಆಗಿರಬೇಕು. ಫಾರಂ-ii ಡಿಕ್ಲರೇಷನ್ ಆಗಿರಬೇಕು. ಅದು ಏನಾಗಿದೆ ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದರ ಬಗ್ಗೆ ನಿಮ್ಮ ಸರ್ಕಾರವನ್ನೇ ಕೇಳಿ. ನನ್ನನ್ನು ಏಕೆ ಕೇಳುತ್ತೀರಿ. You ask your Government. Before giving exemptions under Sec 20 .....

(Interruptions)

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ಉತ್ತರ ಸರ್ಕಾರವನ್ನು ಕೇಳಿ, ನಾನಲ್ಲ ಉತ್ತರ ಹೇಳುವುದು. ಅಧಿಕಾರ ನಿಮ್ಮ ಕೈಯಲ್ಲಿದೆ, ಸರ್ಕಾರ ನಿಮ್ಮ ಕೈಯಲ್ಲಿದೆ, ಸರ್ಕಾರವನ್ನು ಕೇಳಿ.

ಉಪಾಧ್ಯಕ್ಷರು : ಈಗ ಮೂರು ಗಂಟೆಯಾಗುತ್ತಿದೆ, ತಾವು ಮುಗಿಸುವುದಾದರೆ ಇನ್ನೊಂದು ಹತ್ತು ನಿಮಿಷ ಮುಂದುವರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾಳೆ ಮುಂದುವರಿಸುತ್ತೇನೆ.

ಉಪಾಧ್ಯಕ್ಷರು : ಇನ್ನೊಂದು ಹತ್ತಿ ನಿಮಿಷದಲ್ಲಿ ತಾವು ಮುಗಿಸುವುದಾದರೆ ಈಗ ಮುಂದುವರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬೇಕಾದರೆ ಇನ್ನು ಒಂದು ಗಂಟೆ ಕಾಲ ಕುಳಿತುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಅವರು ಇನ್ನು ಹತ್ತು ಹದಿನೈದು ನಿಮಿಷಗಳಲ್ಲಿ ಮುಗಿಸುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :ಯಾರೂ ಇಂಟರ್ ಫಿಯರ್ ಆಗದಿದ್ದರೆ ಇಷ್ಟು ಹೊತ್ತಿಗೆ ಮುಗಿಸಿಬಿಡುತ್ತಿದ್ದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್....

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಮುಗಿಸಿಬಿಡಿ. ಇನ್ನು 10-15 ನಿಮಿಷದಲ್ಲಿ ವಿರೋಧ ಪಕ್ಷದ ನಾಯಕರು ಮುಗಿಸುತ್ತಾರೆ...

ಶ್ರೀ ಕರಿಯಣ್ಣ : ನಾವು ಈಗ ಊಟಕ್ಕಾದರೂ ಹೋಗಿ ಬರುತ್ತಿದ್ದೆವು. ನೀವು ಮೂರು ಗಂಟೆಗೆ ಸದನವನ್ನು ಮುಂದುವರಿಸಿ ಆಮೇಲೆ ಊಟಕ್ಕೆ ಹೋಗಿ ಎಂದು ಹೇಳಿದ್ದೀರಿ. ದಯಮಾಡಿ ಅವರು ಎಷ್ಟು ಟೈಮ್ ತೆಗೆದುಕೊಳ್ಳುತ್ತಾರೆ ಎಂದು ಕೇಳಿ. ಊಟಕ್ಕೆ ಮುಂದುವರೆಸಿ , ಆಮೇಲೆ ಸೇರಬಹುದು.

ಉಪಾಧ್ಯಕ್ಷರು : ಇನ್ನು 10 ನಿಮಿಷದಲ್ಲಿ ಅವರು ಮುಗಿಸುತ್ತಾರೆ.

ಶ್ರೀ ಕರಿಯಣ್ಣ : ಅವರು 10 ನಿಮಿಷದಲ್ಲಿ ಮುಗಿಸುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಮೊದಲು ಆ ಸದಸ್ಯರಿಗೆ ಹೇಳಿ. ಬಾಯಿ ಮುಚ್ಚಿಕೊಂಡು ಕುಳಿತಿದ್ದರೆ ನಾನು ಇನ್ನು 10-15 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ತಾವು ಮುಂದುವರೆಸಿ.

ಶ್ರೀ ಡಿ.ಬಿ. ಚಂದ್ರೇಗೌಡ : 62 ಎಕರೆಯಷ್ಟು ಪ್ರದೇಶವನ್ನು ಕಂಟ್ರಾಕ್ಟರ್ ಎಂ.ಎಸ್.ರಾಮಯ್ಯನವರಿಗೆ ವಹಿಸಿಕೊಡಬೇಕೆಂಬ ಆದೇಶ ನೀಡಿದೆ. ಇದರ ಜೊತೆ ಇಡೀ ಪ್ರದೇಶದಲ್ಲಿ ಇದ್ದ ಇನ್ನೂ ಸುಮಾರು 14 ಎಕರೆ 30 ಗುಂಟೆಯಷ್ಟು ಭೂಮಿಯನ್ನೂ ಸಹ ದುರ್ಬಲವರ್ಗದವರಿಗೆ ಮನೆ ಕಟ್ಟಿಕೊಡಲು ಸರ್ಕಾರ ವಹಿಸಿಕೊಟ್ಟಿದೆ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಸಾರ್ವಜನಿಕರ ಉಪಯೋಗಕ್ಕೆ ಕಾಯ್ದಿರಿಸಿದ್ದ ರಾಜ್ ಮಹಲ್ ವಿಲಾಸ್ ದ ಎರಡನೇ ಹಂತವನ್ನು ನಿರ್ಮಿಸಲು ಕಾನೂನು ಪ್ರಕಾರ ಬಿಡಿಎ ವಶಪಡಿಸಿಕೊಂಡಿದ್ದ ಭೂಮಿ, ಸರ್ಕಾರ ಪ್ರದೇಶದ ಭೂಮಿ...

(ಗೊಂದಲ)

ಶ್ರೀ ಕರಿಯಣ್ಣ : ನಾವು ಅದಲ್ಲ ಕೇಳುವುದು, ನಾವು ಕೇಳುವುದು ಸರ್ಕಾರದ್ದೇ ಜಮೀನು ಅಥವಾ ಬೇರೆಯವರದ್ದೇ ಜಮೀನು ಎಂದು ರಾಮಯ್ಯನವರಿಗೆ ಯಾವ ಯಾವ ರೀತಿ ಜಮೀನು ಬಂತು ಎಂದು ನಾವು ಕೇಳುವುದು. ಎಲ್ಲದಕ್ಕೂ ಸರ್ಕಾರ ವಹಿಸಿಕೊಟ್ಟಿತು ಎಂದು ಹೇಳಿದರೆ...

(ಗೊಂದಲ)

ಡಾ. ಜೀವರಾಜ್ ಆಳ್ವ : ಕಾನಡೆಯವರೇ....

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ನಾಯಕರು ಮಾತನಾಡುವುದು ಬೇಡ. ಅವರೇ ಮಾತನಾಡಲಿ.

(ಗೊಂದಲ)

ಡಾ. ಜೀವರಾಜ್ ಆಳ್ವ : ಇವರು ಮಾತನಾಡುವುದೇ ಬೇಡ. ಅವರೇ ಮಾತನಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರದ್ದೇ ಆಗಲಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ತಾವು ಈಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ 10 ನಿಮಿಷ ಟೈಮ್ ಕೊಟ್ಟಿದ್ದೀರಿ. ಅದರ ಪ್ರಕಾರ ಅವರು ಮಾತನಾಡಿ, ಇವತ್ತೇ .....

(ಗೊಂದಲ)

ಉಪಾಧ್ಯಕ್ಷರು : ತಾವು ಮುಂದುವರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಂತ ಬರವಣಿಗೆ ಅಲ್ಲ, ಇದು ಗವರ್ನ್‌ಮೆಂಟ್ ನೋಟೀಫಿಕೇಷನ್. 14-5-91ರಲ್ಲಿ ಏನು ಗವರ್ನ್‌ಮೆಂಟ್ ನೋಟೀಫಿಕೇಶನ್ ಬಂದಿದೆಯೋ ಅದನ್ನು ಓದಿದರೂ ಯಾರು ಬರೆದರು, ಯಾರ ಭೂಮಿ ಎಂದು ಕೇಳಿದರೆ ನಾವೇನು ಹೇಳುವುದು. ನೀವು ಈ ಸರ್ಕಾರಿ ಆಜ್ಞೆ ಮಾಡಿದ್ದೀರಲ್ಲ ಭೂಮಿ ಯಾರದ್ದು ಎಂದು ಗೊತ್ತಿಲ್ಲವೇ ಆಜ್ಞೆ ಮಾಡಿದ್ದೀರಾ? ಈ ಭೂಮಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲದೆ ಮಾಡಿದ್ದೀರಾ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರ ಎಕ್ಸೆಂಷನ್ ಕೊಟ್ಟಿದೆಯಲ್ಲಾ ಯಾವುದಕ್ಕೆ? ಸೀಟುಗಳನ್ನು ಫ್ರಾಡ್ ಮಾಡುತ್ತಾ ಇರತಕ್ಕ ಒಬ್ಬ ದೊಡ್ಡ ಉದ್ಯಮಿಗೆ ಕೊಟ್ಟು ಮೇಲಾಗಿ 14ಎಕರೆ 30ಗುಂಟೆಯಷ್ಟು ಪ್ರದೇಶವನ್ನು ಬಡವರಿಗೆ ಮನೆ ಕಟ್ಟಿಕೊಡುವುದಕ್ಕೆ ಇವರಿಗೆ ವಹಿಸಿಕೊಡುವುದು.

ಶ್ರೀ ಕರಿಯಣ್ಣ : ನಾವು ಅದನ್ನೆಲ್ಲಾ ಕೇಳುತ್ತಿರುವುದು..

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಕುರಿಯನ್ನು ಕಾಯುವುದಕ್ಕೆ ತೋಳವನ್ನು ನೇಮಿಸಿದಂತಾಗಿದೆ. ಸರ್ಕಾರದ ಈ ಪ್ರವೃತ್ತಿ ಇದೆಯಲ್ಲಾ, ಈ ಪ್ರವೃತ್ತಿಯನ್ನು ಏಕೆ ಮಾಡಿದ್ದೀರಿ, ಇದರಲ್ಲಿ ನಡೆದಿರತಕ್ಕ ವ್ಯವಹಾರ ಏನು ಎನ್ನುವುದು ನಮಗೆ ಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಎಷ್ಟರ ಮಟ್ಟಿಗೆ ಸರಿ ಸ್ವಾಮಿ....

(ಗೊಂದಲ)

ಉಪಾಧ್ಯಕ್ಷರು : ಶ್ರೀಯುತ ಯಡಿಯೂರಪ್ಪ ...

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದಾಗ, ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಇವರ ಬಗ್ಗೆ ಏನೇನು ಮಾತನಾಡಿದ್ದೀರಿ, ಅದನ್ನೆಲ್ಲಾ ರೆಕಾರ್ಡ್ಸ್‌ನಲ್ಲಿ ಓದಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಅವರು ಹೇಳುತ್ತಾರೆ ಬಿಡಿ. ನೀವು ಅವರ ಪರವಾಗಿ ಲಾಯರ್ ಮಾತನಾಡಿದ ಹಾಗೆ ಮಾತನಾಡುತ್ತಿದ್ದೀರಲ್ಲ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಇದ್ದಾರೆ. ಗವರ್ನ್‌ಮೆಂಟ್ ನೋಟೀಫಿಕೇಷನ್ ಇಶ್ಯೂ ಮಾಡಿರುವ ಬಗ್ಗೆ ಇದರಲ್ಲಿ ಆಫೀಸರ್ಸ್ ತಪ್ಪು ಮಾಡಿದ್ದಾರೆಯೇ ಅಥವಾ ಸರ್ಕಾರದವರು ಏನಾದರೂ ಉದ್ದೇಶದಿಂದಲೇ ತಪ್ಪು ಮಾಡಿದ್ದಾರೆಯೇ ಎನ್ನುವುದನ್ನು ಹೇಳುತ್ತಿದ್ದಾರೆ. ದಯವಿಟ್ಟು ಅವರಿಗೆ ಮಾತನಾಡಲು ಅವಕಾಶ ಕೊಡಿ. ಏಕೆ ಇವತ್ತು ಇನ್ ಟಾಲರೇಟ್ ಆಗಿದ್ದೀರಿ? ಎಂ.ಎಸ್. ರಾಮಯ್ಯ ಎಂದ ತಕ್ಷಣ ಏನಾಯಿತು? ಎಂ.ಎಸ್ ರಾಮಯ್ಯನವರು ಏನು ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ದೇಶಕ್ಕೇ ಗೊತ್ತಿದೆ. 800 ಎಕರೆ ಬಡವರ ಜಮೀನುಗಳನ್ನು ದೇವನಹಳ್ಳಿಯಲ್ಲಿ ಹೊಡೆದುಕೊಂಡು ಕುಳಿತುಕೊಂಡಿರುವುದು ಯಾರಿಗೂ ಗೊತ್ತಿಲ್ಲವೇ? ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ? ಇವರು ಯಾರು ಎಂದು ಗೊತ್ತಿಲ್ಲದೇ ಸುಮ್ಮನೆ ಮಾತನಾಡಿದರೆ ಹೇಗೆ? ಇದಕ್ಕೆಲ್ಲ ಮಾನ್ಯ ಬಂಗಾರಪ್ಪನವರು ಕಾರಣವೆಂದು ನಾವು ಇಲ್ಲಿ ಹೇಳುತ್ತಾ ಇದ್ದೇವೆಯೇ! ಇಲ್ಲ. There are so many rules and regulations which have not been followed. The Hon'ble Leader of the Opposition is enlightening this to the House. ಸ್ವಲ್ಪ ಕೇಳಿ. ಆದಾದ ನಂತರ ನೋಡೋಣ. ನಾವು ಹೇಳಿದ್ದು ಸುಳ್ಳು ಆಗಿದ್ದರೆ ಆಮೇಲೆ ನಾವು ವಾಪಸ್ ತೆಗೆದುಕೊಳ್ಳುತ್ತೇವೆ. ಎಂ.ಎಸ್.ರಾಮಯ್ಯ ಭೂಮಿ ಕದ್ದಿದ್ದಾನೆ ಎನ್ನುವುದು ಇಡೀ ದೇಶಕ್ಕೇ ಗೊತ್ತಿರುವ ವಿಚಾರ. ನಿಮಗೆ ಗೊತ್ತಿಲ್ಲವೇ? ನೀವು ಅಪೋಸಿಷನ್ ಲೀಡರ್ ಆಗಿ ಏನು ಮಾತನಾಡಿದ್ದೀರಿ? ಎಂ.ಎಸ್.ರಾಮಯ್ಯ ಅವರು 800 ಎಕರೆ ಭೂಮಿ ಹೊಡೆದಿರುವಂತಹ ವಿಚಾರ ಇಡೀ ಪ್ರಪಂಚಕ್ಕೆ

ಗೊತ್ತಿರುವ ವಿಚಾರ. ಬಡವರ, ದುರ್ಬಲ ವರ್ಗದವರ, ಹಿಂದುಳಿದ ವರ್ಗದವರ ಹೆಸರಿನಲ್ಲಿ ಯಾವ ರೀತಿ ಶೋಷಣೆ ಮಾಡಿದ್ದಾರೆ ಎನ್ನುವುದು ದೇಶಕ್ಕೆ ಗೊತ್ತಿರುವಂಥ ವಿಚಾರ. ಅದು ಮುಖ್ಯ ಮಂತ್ರಿಯವರಿಗೆ ಗೊತ್ತಿಲ್ಲವೇ? ಅವರು ಈ ವಿಚಾರದಲ್ಲಿ ಮಾತನಾಡಿಲ್ಲವೇ? ಅವರು ಸೋಶಿಯಾಲಿಸ್ಟ್ ಪಾರ್ಟಿಯಲ್ಲಿ ಇದ್ದಾಗಿನಿಂದ ಇದನ್ನು ಮಾತನಾಡಿಕೊಂಡು ಬಂದಿದ್ದಾರೆ. ಶ್ರೀಮಾನ್ ದೇವರಾಜ್ ಅರಸ್ ರವರು ಮುಖ್ಯ ಮಂತ್ರಿಯಾಗಿದ್ದಾಗ ಕೂಡ ಈ ವಿಚಾರವನ್ನು ಮಾತನಾಡಿದ್ದಾರೆ. ಆದ್ದರಿಂದ , ನಿಮಗೆ ಏನಾದರೂ ಕಡತಗಳು, ದಾಖಲೆಗಳನ್ನು ಸರ್ಕಾರಕ್ಕೆ ಒದಗಿಸಿಕೊಡುವುದಿದ್ದರೆ, ಮಾನ್ಯ ಸಭಾ ನಾಯಕರು ಉತ್ತರ ಕೊಡುವಂಥ ಸಂದರ್ಭದಲ್ಲಿ ಅದನ್ನು ಒದಗಿಸಿ ಅವರು ನಮಗೆ ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇದೇನು ಉದ್ದೇಶ ಪೂರ್ವಕವಾದ ಅಡೆತಡೆಯೋ ಎಂದು ನನಗೆ ಅರ್ಥವಾಗುತ್ತಿಲ್ಲ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ದುರ್ಬಲ ವರ್ಗದವರಿಗೆ ಮನೆ ಕಟ್ಟಿಸಿಕೊಡುವಂಥದ್ದು ಸರ್ಕಾರದ ಜವಾಬ್ದಾರಿ. ಅದಕ್ಕಾಗಿಯೇ ನಗರಗಳಲ್ಲಿ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ ಮಾದರಿಯ ಸಂಸ್ಥೆಗಳಿವೆ. ಅದಕ್ಕಾಗಿಯೇ ನಮ್ಮ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಹೌಸಿಂಗ್ ಬೋರ್ಡ್ ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಯಾರ ಪರವಾಗಿ ವಾದ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಅವರು ನನ್ನ ಕೈಯಲ್ಲಿ ಆಗುವುದಿಲ್ಲರೆಂದು, ದುರ್ಬಲವರ್ಗದವರಿಗೆ ಮನೆ ಕಟ್ಟಿಸಿಕೊಡುವಂಥ ಜವಾಬ್ದಾರಿಯನ್ನು ಸರ್ಕಾರದವರು ಶ್ರೀ ಎಂ.ಎಸ್. ರಾಮಯ್ಯನವರಿಗೆ 14 ಎಕರೆ 38 ಗುಂಟೆ ಭೂಮಿಯನ್ನು ಕೊಡುವುದರ ಮೂಲಕ ವಹಿಸಿದ್ದಾರೆ. ಇದನ್ನು ನಾನು ಪ್ರಶ್ನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಇದು ಹೌಸಿಂಗ್ ಬೋರ್ಡ್‌ಗೆ ಸಂಬಂಧಿಸಿದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು. ಇದು ಹೌಸಿಂಗ್ ಬೋರ್ಡ್‌ಗೆ ಸಂಬಂಧಿಸಿದ್ದೇ ವಿಚಾರ. ದುರ್ಬಲ ವರ್ಗದವರಿಗೆ ಮನೆ ಕಟ್ಟಿಸಿಕೊಡುವ ಕೆಲಸ ಹೌಸಿಂಗ್ ಬೋರ್ಡ್‌ನದು. ಹೌಸಿಂಗ್ ಬೋರ್ಡ್‌ನವರು ಮಾಡಬೇಕಾದ ಕೆಲಸವನ್ನು ಇವರಿಗೆ ಏಕೆ ಕೊಟ್ಟಿದ್ದೀರಿ?

ಶ್ರೀ ಎಸ್. ಬಂಗಾರಪ್ಪ : ಸೊಸೈಟಿಯನ್ನು ಏನು ಮಾಡಿಕೊಂಡಿದ್ದಾರೆ ಅವರಿಗೆ ಪದ್ಧತಿಯ ಪ್ರಕಾರವೇ ಕೊಟ್ಟಿದ್ದೇವೆ. ಇದು ನಿಮ್ಮ ಕಾಲದಲ್ಲೇ ಇದ್ದದ್ದು. ನಾವು ಅದನ್ನು ಮುಂದುವರಿಸಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರದ ಕೈಯಲ್ಲಿ ಆಗುವುದಿಲ್ಲವೆಂದು ಸಾರ್ವಜನಿಕ ಆಸ್ತಿಯನ್ನು ಒಬ್ಬ ಶ್ರೀಮಂತ ಕಂಟ್ರಾಕ್ಟರನಿಗೆ ವಹಿಸಿಕೊಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಕ್ಷಮಿಸಬೇಕು. ಮಾನ್ಯ ಚಂದ್ರೇಗೌಡರೇ, ನೀವು ಮಾತನಾಡಬೇಕಾದರೆ ಮಧ್ಯೆ ಪ್ರವೇಶಿಸಲು ನನಗೆ ಆಸೆಯಿಲ್ಲ. ಸೊಸೈಟಿಗಳ ಮೂಲಕ ಭೂಮಿಯನ್ನು ಕೊಟ್ಟು ಮನೆಗಳನ್ನು ಕಟ್ಟಿಸುವಂಥದ್ದು ಒಂದು ವಿಧಾನವಿದೆ. ಇದು ನಮ್ಮ ಕಾಲದಲ್ಲಿ ಪ್ರಾರಂಭವಾದದ್ದಲ್ಲ. ಇದನ್ನು ತಾವು ಮರೆಯಬಾರದು. ಅದನ್ನು ನೀವು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೇ ನಾನು ಆ ರೀತಿಯಾಗಿ ಹೇಳಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ತಾವು ಸಭಾನಾಯಕರು. ತಾವು ಏನು ಹೇಳಿದರೂ ಕೂಡ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ರಾಜ್ಯದ ಜನತೆ ಅದನ್ನು ವಾಚ್ ಮಾಡುತ್ತಿದ್ದಾರೆ. ಅದಕ್ಕೆ ಬೇರೆ ಬೇರೆ ಮಹತ್ವ ಇರುತ್ತದೆ. ತಾವು ಇದು ನಮ್ಮ ಕಾಲದಲ್ಲಿ ಪ್ರಾರಂಭವಾದುದಲ್ಲ ಎಂದು ಹೇಳುತ್ತಿದ್ದೀರಿ. ನಿಮಗೆ ಆಡಳಿತ ಕೊಟ್ಟು ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಹಾಗಾದರೆ ಸ್ವಾಭಾವಿಕವಾಗಿ ಅದು ಹೆಗಡೆಯವರ ಕಾಲದಲ್ಲಿ ಆಗಿದ್ದು ಎಂದರ್ಥವಾಗುತ್ತದೆ. ಅದು ಮಾನ್ಯ ಹೆಗಡೆಯವರ ಕಾಲದಲ್ಲೂ ಪ್ರಾರಂಭವಾದದಲ್ಲ, ಇದನ್ನು ನೀವು ಹೇಳಿಲ್ಲ, ಆದರೂ ನಾನು ಸ್ಪಷ್ಟನೆ ಮಾಡುತ್ತಿದ್ದೇನೆ. 1980ನೇ ಇಸವಿಯಿಂದ ಇದು ಇದೆ.

ಶ್ರೀ ಎಸ್. ಬಂಗಾರಪ್ಪ : ಹೌಸಿಂಗ್ ಬೋರ್ಡಿಗೆ ನಾವು ಯಾವ ಕಾರ್ಯಕ್ರಮವನ್ನು ವಹಿಸಿಕೊಡುತ್ತೇವೆ. ಆಗ ಹೌಸಿಂಗ್ ಬೋರ್ಡ್ ವಿಚಾರ ಬರುತ್ತದೆ. ಮತ್ತೆ ಸೊಸೈಟಿಗಳ ಮೂಲಕ ಸೈಟುಗಳನ್ನು ಕೊಡತಕ್ಕಂಥ ವಿಚಾರವೂ ಇದೆ. ಹೌಸಿಂಗ್ ಬೋರ್ಡಿಗೆ ಯಾವ ಕಾರ್ಯಕ್ರಮವನ್ನು ಹಾಕಿ ಕೊಡುತ್ತೇವೋ ಆ ಕಾರ್ಯಕ್ರಮ ಅದು ಮಾಡುತ್ತದೆ. ತಾವು ಹೌಸಿಂಗ್ ಬೋರ್ಡಿಗೆ ಪೂರ್ತಿಯಾಗಿ ವಹಿಸಿಕೊಟ್ಟಿದ್ದೇವೆ ಎನ್ನುವ ಆರ್ಗ್ಯುಮೆಂಟ್ ಮಾಡಿದಂತಾಗುತ್ತದೆ ಎಂದು ನೆನಪು ಮಾಡಿಕೊಟ್ಟೆ.

ಡಾ. ಜೀವರಾಜ್ ಆಳ್ವ : ಶ್ರೀ ಕಾಗೋಡು ತಿಮ್ಮಪ್ಪನವರು ಹೌಸಿಂಗ್ ಬೋರ್ಡ್ ಚೇರ್‌ಮನ್‌ರಾಗಿರುವಾಗ ದೀನದಲಿತರ ಬಗ್ಗೆ, ದಟ್ಟದರಿದ್ರರ ಬಗ್ಗೆ ಹೆಚ್ಚು ಆಲೋಚನೆ ಮಾಡುತ್ತಾರೆಯೇ ಹೊರತು ಇನ್ನೊಬ್ಬರ ಬಗ್ಗೆ ಅವರು ಆಲೋಚನೆ ಮಾಡುವುದಿಲ್ಲವೆಂದು ಮಾನ್ಯ ಸಭಾನಾಯಕರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಶ್ರೀ ರಾಮಯ್ಯನವರು ಹೊಸಬರೇನು ಅಲ್ಲ, ಅವರು ಎಲ್ಲರಿಗೂ ಎಲ್ಲಾ ಸರ್ಕಾರಗಳಿಗೂ ಸ್ನೇಹಿತರಾಗೇ ಬಂದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿರುವುದು ಏನೆಂದರೆ, ಬಡವರಿಗೆ ಮನೆ ಕಟ್ಟಿಕೊಡತಕ್ಕಂಥ ಕಾರ್ಯ, ಚುನಾಯಿತ ನಾಗರೀಕ ಸರ್ಕಾರದ ಜವಾಬ್ದಾರಿಗಳಲ್ಲಿ ಒಂದು, ಈ ಜವಾಬ್ದಾರಿಯ ನಿರ್ವಹಣೆಗಾಗಿ ಶಾಸನಬದ್ಧವಾದ ಸಂಸ್ಥೆಗಳು ಇವೆ. ಈ ಶಾಸನಬದ್ಧ ಸಂಸ್ಥೆಗಳಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಒಂದು. ಈ ಶಾಸನಬದ್ಧ ಸಂಸ್ಥೆಗಳಲ್ಲಿ ಗೃಹನಿರ್ಮಾಣ ಮಂಡಳಿ ಮತ್ತೊಂದು. ಇವು ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕಾಗಿ ಖಾಸಗಿ ಕಂಟ್ರಾಕ್ಟರುಗಳ ಮೊರೆಹೋಗಿದ್ದಾರೆಯೇ? ಈ ಪ್ರಶ್ನೆಗೆ ನನಗೆ ಉತ್ತರ ಬೇಕು. ಸುಮಾರು 62 ಎಕರೆ ಪ್ರದೇಶವನ್ನು ರಾಮಯ್ಯನವರಿಗೆ ಏನು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಲ್ಲಿ ವಿನಾಯ್ತಿ ಕೊಟ್ಟಿದ್ದೀರಿ 14-5-1991ರಲ್ಲಿ ಇದಕ್ಕೆ ಪೂರ್ವಭಾವಿಯಾಗಿ ಈ ಭೂಮಿ ವ್ಯವಸಾಯಕ್ಕೆ ಯೋಗ್ಯವಾದಂಥ ಭೂಮಿಯೇ? ಇದು ವ್ಯವಸಾಯಕ್ಕೆ ಸಂಬಂಧಪಟ್ಟ ಭೂಮಿಯಾಗಿದ್ದರೆ ಇದನ್ನು ಇಂಡಸ್ಟ್ರಿಯಲ್ ಅಥವಾ ಬೇರೆ ವ್ಯವಸ್ಥೆಗೆ ಪರಿವರ್ತನೆ ಮಾಡಿಕೊಡತಕ್ಕದ್ದನ್ನು ನೀವು ಮಾಡಿದ್ದೀರೋ? 1978ನೇ ಇಸವಿಯಿಂದ ಹಿಡಿದು 1991ನೇ ಇಸವಿಯವರೆಗೆ ಈ ಅಗ್ರಿಕಲ್ಚರ್ ಲ್ಯಾಂಡ್‌ನಲ್ಲಿ ವಿನಾಯ್ತಿ ಕೊಡಿ ಎಂದು ಹೇಳಿ ಶ್ರೀಮಾನ್ ರಾಮಯ್ಯನವರು ಪದೇ ಪದೇ ಬಂದಂಥ ಸರ್ಕಾರಗಳಿಗೆ ಅರ್ಜಿ ಹಾಕಿದ್ದರೋ, ಇಲ್ಲವೋ? ಹಾಗೆ ಅರ್ಜಿ ಹಾಕಿದ್ದರೆ ಹಿಂದಿನ ಸರ್ಕಾರಗಳು ಯಾವ ನಿರ್ಣಯಕ್ಕೆ ಬಂದಿದ್ದವು. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಲ್ಲಿ ನೀವು ವಿನಾಯ್ತಿ ಕೊಡುವುದಕ್ಕೆ ಮುನ್ನ ಅವರಿಗೆ ಇದ್ದಂಥ ಒಟ್ಟು ಭೂಮಿ ವಿಚಾರದಲ್ಲಿ ನನಗೆ ಇಷ್ಟು ಭೂಮಿ ಎಕ್ಸೆಸ್ ಇದೆ ಎಂದು ಅವರೇನಾದರೂ ಡಿಕ್ಲೇರ್ ಮಾಡಿದ್ದರೆ? ಹಾಗೆ ಡಿಕ್ಲೇರ್

ಮಾಡಿದ್ದರೆ ನೀವು ಸೆಕ್ಷನ್ 20ರಲ್ಲಿ ವಿನಾಯ್ತಿ ಕೊಡುವುದಕ್ಕೆ ಮುನ್ನ ಅದರಲ್ಲಿ ಹೇಳಿರತಕ್ಕಂಥ ನಿಬಂಧನೆಗಳನ್ನು ನೀವು ಫಾಲೋ ಮಾಡಿದ್ದೀರಾ? section 20 -power to exempt ನಲ್ಲಿ ಈ ರೀತಿ ಇದೆ. "Where any person who holds vacant land in excess of ceiling limit ........ ಎಂದು ಇದೆ.

ಆದರೆ ಇಲ್ಲಿರುವುದು ವೇಕೆಂಟ್ ಲ್ಯಾಂಡ್ ಅಲ್ಲ, ಅದರಲ್ಲಿ ಕಟ್ಟಡಗಳು ಕಟ್ಟಿ ಬಹಳ ವರ್ಷಗಳು ಆಗಿವೆ. "In excess of the ceiling limit" ಡಿಕ್ಲರೇಷನ್ ಮಾಡಿಲ್ಲ. ಇದು ನನ್ನ ಅಪಾದನೆ. If the State Government is satisfied either on its own motion or otherwise , but having regard to location of such land....

ಈ 1500 ಎಕರೆ ಭೂಮಿ ಪ್ರದೇಶವನ್ನು ಬಿಡಿಎ ಅವರು ವಹಿಸಿಕೊಂಡಾಗಲೇ ಅದು ಸಾರ್ವಜನಿಕ ಆಸ್ತಿಯಾಗಿ ಪರಿವರ್ತನೆಯಾಗಿತ್ತು. ನಮ್ಮ ರಾಜಮಹಲ್ ವಿಲಾಸ್ ಎಕ್ಸ್‌ಟೆನ್ಷನ್ ಕಟ್ಟಬೇಕೆಂಬ ನಿರ್ಧಾರದಿಂದ ವಶಪಡಿಸಿಕೊಂಡಂಥ ಭೂಮಿ. ಅದು ಲೋಕೇಷನ್ "The purpose for which such land is being or is proposed to be used ......."

ಅದನ್ನು ಯಾವ ಕಾರಣಕ್ಕಾಗಿ ಅವರು ಬಳಕೆ ಮಾಡುತ್ತಿದ್ದಾರೆ? ಇಧನ್ನು ನೀವು ಕೇಳಿದ್ದೀರೋ? ಚೀಟ್ ಮಾಡತಕ್ಕ ಸಂಸ್ಥೆಯಾಗಿದ್ದರೆ ಅದು ಸಾರ್ವಜನಿಕ ಹಿತಾಸಕ್ತಿಯೋ? " ......and such other relevant factors as the circumstances of the case may require, it is necessary or expedient in the public interest ....

ಏನು ಪಬ್ಲಿಕ್ ಇಂಟರೆಸ್ಟ್ ಇದರಲ್ಲಿ? ..... Government may by order exempt subject to such conditions, if any, as may be specified in the order, such vacant land." The pertinent question is, before giving exemption under Section -20 whether the land was vacant. If it is not a vacant land, the government has no authority to give exemption to this land. I would like to know what is the public interest?

ಪಬ್ಲಿಕ್ ಇಂಟರೆಸ್ಟ್ ಅಂದರೆ, ಕೊಳ್ಳೆ ಹೊಡೆಯುವುದೆ? ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಕಟ್ಟಿ ಲಕ್ಷಾಂತರ ರೂಪಾಯಿ ಸಂಪಾದನೆಯನ್ನು ಮಾಡತಕ್ಕಂಥಾದ್ದು ಪಬ್ಲಿಕ್ ಇಂಟರೆಸ್ಟೇನು? ಇದರಲ್ಲಿ ಯಾವುದು ಪಬ್ಲಿಕ್ ಇಂಟರೆಸ್ಟ್?

ಶ್ರೀ ಕಾಗೋಡು ತಿಮ್ಮಪ್ಪ : ಕಾಲೇಜು ಪಬ್ಲಿಕ್ ಇಂಟರೆಸ್ಟ್ ಅಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಇವೊತ್ತು ಕಾಗೋಡು ತಿಮ್ಮಪ್ಪನವರಿಗೆ ಪ್ರೈವೇಟ್ ಕಾಲೇಜು ಪಬ್ಲಿಕ್ ಇಂಟರೆಸ್ಟ್ ಇವೊತ್ತು ನಾನು ಈ ವಿಚಾರ ಏನು ಪ್ರಸ್ತಾಪಕ್ಕೆ ತಂದಿದ್ದೇನೆ, ಈ ಬಗ್ಗೆ ಹೇಳುವುದಾದರೆ, ಈ ಕಾರಣಕ್ಕಾಗಿ ಇಂಥ ಭೂಮಿಯನ್ನು ಎಕ್ಸೆಮ್ಷನ್ ಕೊಡಕೂಡದು ಎಂದು ಹೇಳಿ, ಸಂಬಂಧಪಟ್ಟ ಆಗ ರೆವಿನ್ಯೂ ಮಂತ್ರಿಗಳಾಗಿರತಕ್ಕವರು ಬರೆದ ಕಾರಣವೇ ಅವರು ರೆವಿನ್ಯೂ ಖಾತೆ ಬದಲಾವಣೆ ಆಗುತ್ತದೆ.

ಸಹಕಾರಿ ಸಂಸ್ಥೆಗಳಲ್ಲಿ ದುರ್ವ್ಯವಹಾರ ನಡೆದಿದೆ; ಈ ರಾಜ್ಯದ ಜನರ 476 ಕೋಟಿ ರೂಪಾಯಿಗಳನ್ನು ಮುಳುಗಿಸಿದ್ದಾರೆ ಎಂದು ಹೇಳಿದರೆ ಸಹಕಾರಿ ಖಾತೆಬದಲಾವಣೆಯಾಯಿತು. ಇಂಥ ವ್ಯವಹಾರಗಳನ್ನು ನಾವು ಸಹಿಸಿಕೊಂಡಿರುವುದಕ್ಕೆ ಸಾಧ್ಯವಿಲ್ಲ, ಆದುದರಿಂದ ಈ ಸರ್ಕಾರ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಯಾವ ಜನರಿಗೆ ಆಶ್ವಾಸನೆಯನ್ನು ಕೊಟ್ಟಿರೋ ಭರವಸೆಯನ್ನು ಕೊಟ್ಟಿರೋ, ಅಂದರೆ ಮಾನ್ಯ ಬಂಗಾರಪ್ಪನವರು ಭರವಸೆ ಕೊಟ್ಟರು ಎಂದು ನಾನು ಹೇಳುವುದಿಲ್ಲ.

1989ನೇ ಇಸವಿಯಲ್ಲಿ ಚುನಾವಣೆಯ ಸಂದರ್ಭದಲ್ಲಿ ಈ ಕಾಂಗ್ರೆಸ್ ಪಕ್ಷದವರು ಈ ರಾಜ್ಯದ ಜನರಿಗೆ ಸ್ವಚ್ಛ, ದಕ್ಷ ಮತ್ತು ಪ್ರಾಮಾಣಿಕ ಆಡಳಿತವನ್ನು ಕೊಡುತ್ತೇವೆಂದು ಏನು ಹೇಳಿದ್ದಿರಿ ಅದರ ಪ್ರಕಾರ ನೀವು ನಡೆದುಕೊಂಡಿದ್ದೀರಾ ಎಂದು ನಾನು ಕೇಳಬಯಸುತ್ತೇನೆ. ಆದ್ದರಿಂದ ನೀವು ಈ ಸದನದ ವಿಶ್ವಾಸವನ್ನು ಮಾತ್ರವಲ್ಲ ಒಟ್ಟಾರೆ ಈ ರಾಜ್ಯದ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ, ಪ್ರತಿದಿನ ಇಂಥಾದ್ದು ಒಂದಲ್ಲ, ಹಲವು ಹತ್ತು ಪ್ರಕರಣಗಳು ನಡೆಯುತ್ತಿವೆ. ನಾನು ಇಂಥ ಅನೇಕ ಪ್ರಕರಣಗಳನ್ನು ತಮಗೆ ಕೊಡುತ್ತೇನೆ. ಎಕ್ಸೈಜ್ ಇಲಾಖೆಯಲ್ಲಿ ನಡೆದಿರತಕ್ಕ ಪ್ರಕರಣಗಳು ಅನೇಕವಿವೆ. ಮಾನ್ಯ ಬಂಗಾರಪ್ಪನವರು, ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳವರು ತಮ್ಮ ಹತ್ತಿರ ಬಂದು ಈ ಸಂಸ್ಥೆಗಳ ಮೂಲಕ ಮನೆಕಟ್ಟಿ ಎಂದು ಹೇಗೆ ಕೇಳಿದ್ದಾರೋ ಹಾಗೆಯೇ ನಮಗೆ ಅನ್ಯಾಯವಾಗಿದೆ ಎಂದು ನನಗೂ ನೂರಾರು ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಇಲ್ಲ ಎಂದು ನಾನು ಹೇಳಲಿಲ್ಲವಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ಕಾರಣದಿಂದಲೇ, ಇತ್ತೀಚೆಗೆ ಜನರು ತಮಗೆ ಕೊಟ್ಟಿರತಕ್ಕ ಅರ್ಜಿಯ ನಕಲನ್ನು ತಮಗೆ ಕೊಡುತ್ತೇನೆ. ತಾ : 27-7-91,addressed to Sri S. Bangarappa, Hon'ble Chief Minister, Government of Karnataka, Vidhana Soudha, Bangalore. It reads thus :

"Dear Sir,We the aggrieved members of the Jayanagar House Building Co-operative Society, Jayanagar, Bangalore would like to bring the following facts for your kind consideration..."

ಏನೆಲ್ಲಾ ಮೋಸಗಳು ನಡೆದಿವೆ ಎಂಬುದನ್ನು ಬರೆದಿದ್ದಾರೆ. ಅದನ್ನೆಲ್ಲಾ ನೀವು ಏತಕ್ಕೆ ಹೇಳುವುದಿಲ್ಲ? ಆದುದರಿಂದಲೇ ನಾನು ಹೇಳುತ್ತಿದ್ದೇನೆ. ಈ ಸೊಸೈಟಿಗಳಲ್ಲಿ ಮಧ್ಯವರ್ತಿಗಳು ಸೇರಿಕೊಂಡು ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಇದನ್ನು ನೀವು ಎಲ್ಲಾದರೂ ಒಂದು ಕಡೆ ನಿಲ್ಲಿಸಬೇಕಾದ್ದು ಅಗತ್ಯವಿದೆ. ಇಂಥ ಪ್ರಾಮಾಣಿಕ ಪ್ರಯತ್ನವನ್ನು ನಿಮ್ಮ ಮಂತ್ರಿಮಂಡಲದ ಸದಸ್ಯರಾದ ಶ್ರೀಮಾನ್ ಕೆ.ಹೆಚ್. ಪಾಟೀಲರು ಮಾಡಿದ್ದರು ಎಂಬುದನ್ನು ನಾನು ಹೇಳಬಯಸುತ್ತೇನೆ. ಅಂಥ ಒಳ್ಳೆಯ ಕೆಲಸವನ್ನು ಮಾಡಿದ್ದಕ್ಕಾಗಿ ನೀವು ಶಹಭಾಸ್ ಎಂದು ಅವರ ಬೆನ್ನನ್ನು ತಟ್ಟದೆ, ಸಾರ್ವಜನಿಕ ಉಪಯೋಗಕ್ಕೆ ಅದನ್ನು ಉಪಯೋಗ ಮಾಡಿಕೊಳ್ಳದೆ ಅವರ ಖಾತೆಯನ್ನು ಬದಲಾವಣೆ ಮಾಡಿದ್ದೀರಿ. ಇದು ನಮ್ಮ ಮನಸ್ಸಿನಲ್ಲಿರತಕ್ಕಂಥ ಶಂಕೆ. ನಾನು ಉಳಿದ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಟೆಲಿಫೋನ್ ಪ್ರಕರಣದ ಬಗ್ಗೆ ನಿಮ್ಮ ಹತ್ತಿರ ಏನು ದಾಖಲೆ ಇದೆ, ನಾನು ಮಾನ್ಯ ಅಧ್ಯಕ್ಷರ ಅವಗಾಹನೆಗೆ ಇದನ್ನು ಬಿಟ್ಟಿದ್ದೇನೆ. ಮಾನ್ಯ ಅಧ್ಯಕ್ಷರು ಇದಕ್ಕೆ ಅಪ್ಪಣೆಯನ್ನು ಕೊಡುವವರೆಗೆ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಕಾರಣ ಇದನ್ನು ನಾನು ಬೇರೆ ರೂಪದಲ್ಲಿ ಎತ್ತಿದ್ದೇನೆ. I have reserved my right to discuss the telephone tapping as a separate issue.

ಹಾಗೆಯೇ ಗ್ರಾನೈಟ್ಸ್ ಹಗರಣ. ಗ್ರಾನೈಟ್ ವಿಚಾರದಲ್ಲಿ ಬಹಳಷ್ಟು ಪ್ರಸ್ತಾಪ ಮಾಡಿದ್ದೇವೆ. ಬಹಳ ಮುಖ್ಯವಾಗಿ ಇಲ್ಲಿ 1979ರಲ್ಲಿ ಅಂದರೆ ಈಗ ನನ್ನ ಎದುರಿಗೆ ಕುಳಿತಿರತಕ್ಕ ಮಾನ್ಯ ಬಸವಲಿಂಗಪ್ಪನವರೂ ಆ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದರು. ನಾನೂ ಕೂಡ ಆ ಮಂತ್ರಿಮಂಡಲದಲ್ಲಿ ಸದಸ್ಯನಾಗಿದ್ದೆ. 1979ರಲ್ಲಿ ನಾವೂ, ನೀವೂ ಕುಳಿತು ತೀರ್ಮಾನ ಮಾಡಿದ್ದೇವೆ. ಕಪ್ಪು ಕಲ್ಲುಗಳು ಈ ರಾಜ್ಯದಿಂದ ಹೋಗುವುದನ್ನು ಬ್ಯಾನ್ ಮಾಡಿದ್ದೇವೆ. ಆನಂತರ 1982ರಲ್ಲಿ ಒಂದು ಶಾಸನ, 1988ರಲ್ಲಿ ಒಂದು

ಶಾಸನ 1989ರಲ್ಲಿ ಇನ್ನೊಂದು ಶಾಸನ, 1991ರಲ್ಲಿ ಮತ್ತೊಂದು ಶಾಸನವನ್ನು ನೀವು ಮಾಡಿದ್ದೀರಿ. ಈಗ ಇದನ್ನು ಮುಕ್ತವಾಗಿ ಸಾರ್ವಜನಿಕರಿಗೆ ಬಿಟ್ಟುಬಿಟ್ಟಿದ್ದೀರಿ. ಈ ರಾಜ್ಯದ, ಈ ದೇಶದ ನಿಸರ್ಗ ಸಂಪತ್ತು ಲೂಟಿಯಾಗುವುದಕ್ಕೆ ನೀವು ಸಾರ್ವಜನಿಕವಾಗಿ ಪರವಾನಗಿಯನ್ನು ಕೊಟ್ಟಿದ್ದೀರಿ. ಶಾಸನಗಳ ಮೀರಿ ಪರವಾನಗಿಯನನ್ನು ಕೊಟ್ಟಿದ್ದೀರಿ. ಹೈಕೋರ್ಟಿನ ಆದೇಶಗಳನ್ನು ಕಿತ್ತು ಬಿಸಾಕಿ ಪರವಾನಗಿಯನ್ನು ಕೊಟ್ಟಿದ್ದೀರಿ. ನಾನು ಹೇಳುತ್ತೇನೆ. ಈಗ ನಾನು ಹೇಳಿರತಕ್ಕ ಎಲ್ಲ ವ್ಯವಹಾರಗಳಿಗೂ ಒಂದು ತಾರೀಖು ಬಹಳ ಮುಖ್ಯವಾದುದು. ತಾ: 25-6-91ಕ್ಕೆ ಈ ರಾಜ್ಯದಲ್ಲಿ ಲೋಕಸಭಾ ಚುನಾವಣೆಯಾಗುತ್ತದೆ. 18-6-91ರಂದು ಈ ನೋಟಿಫಿಕೇಷನ್ ಬರುತ್ತದೆ. 14-5-1991ಕ್ಕೆ ಆ ನೋಟಿಫಿಕೇಷನ್ ಬರುತ್ತದೆ. ಇದೆಲ್ಲವೂ ಚುನಾವಣೆಯ ಹಿಂದೆ ಚುನಾವಣೆಗಾಗಿ ಮಾಡಿದಂಥ ಅವ್ಯವಹಾರಗಳು.

*3.20 ಪಿ.ಎಂ.*

ಈ ಅವ್ಯವಹಾರಗಳಿಗೆ ಸರ್ಕಾರ ತನ್ನ ಮುದ್ರೆಯನ್ನು ಒತ್ತುವುದಕ್ಕಾಗಿ 15.6.1991ರ ಚುನಾವಣೆ ಮುಗಿಯುವ ತನಕ ಕಾಯುತ್ತಿತ್ತು. ಚುನಾವಣೆ ಮುಗಿಯಿತು, 18ನೇ ತಾರೀಖು ಮುದ್ರೆಯನ್ನು ಹಾಕಿದರು, 19ನೇ ತಾರೀಖು ವಿತರಣೆ ನಡೆದು ಹೋಯಿತು. ಆದ್ದರಿಂದ ಮಾನ್ಯ ಉಪಾಧ್ಯಕ್ಷಣೆಯವರೇ, ನಾನು ಈ ವಿಚಾರಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದೇನೆ. ಇನ್ನು ಮುಂದೆ ಮಾತನಾಡತಕ್ಕಂಥವರು ವಿಸ್ತಾರವಾಗಿ ಹೇಳುತ್ತಾರೆ. ಆದ್ದರಿಂದ ಈ ಒಂದು ಸರ್ಕಾರ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಅಧಿಕಾರಿಗಳ ವಿಶ್ವಾಸವನ್ನು ಕಳೆದುಕೊಂಡಿದೆ. ಆಳುವ ಪಕ್ಷದ ಸದಸ್ಯರ ವಿಶ್ವಾಸವನ್ನು ಕಳೆದುಕೊಂಡಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಯಾರು ಹೇಳಿದರು.

ಶ್ರೀ ಡಿ.ಬಿ. ಚಂದ್ರೇಗೌಡ : ಯಾರು ಅಂದರೆ ನಿಮ್ಮ ಪಕ್ಷದವರು ಕೊಟ್ಟಿದ್ದಾರಲ್ಲ ಅವರೇ. ನಿಮ್ಮ ಪಕ್ಷದಲ್ಲಿ ವಿಚಾರಣೆ ಮಾಡಲಿಕ್ಕಾಗಿ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿದ್ದೀರಲ್ಲ, ಅವರು ಹೇಳಿದ್ದಾರೆ. ಅದ್ದರಿಂದ ನೀವು ಒಂದು ಘಳಿಗೆ ಈ ಸರ್ಕಾರದಲ್ಲಿ ಇರುವುದಕ್ಕೆ ಯೋಗ್ಯರಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಬಹಳ ಗಂಭೀರವಾದಂಥ ಈ ವಿಚಾರಗಳಿಗೆ ನೀವು ಉತ್ತರ ಕೊಟ್ಟಮೇಲೆ ನಾನು ಏನು ಕೇಳಬೇಕೆನ್ನುವುದನ್ನು ಹಾಗೇ ಇಟ್ಟುಕೊಂಡು, ನಾನು ಇವತ್ತಿಗೆ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಇಂದಿನ ಸಭೆಯನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಸದನವು ಪುನಃ ನಾಳೆ ಬೆಳಿಗ್ಗೆ 9-00 ಗಂಟೆಗೆ ಮತ್ತೆ ಸೇರುವುದು.

ಸದನವು 3ಗಂಟೆ 22 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 4ನೇ ಸೆಪ್ಟೆಂಬರ್ ಮಾಹೆ 1991ರ ಬುಧವಾರದಂದು ಬೆಳಿಗ್ಗೆ 9-00ಗಂಟೆಗೆ ಸೇರಲು ನಿಶ್ಚಯಿಸಿತು.

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)